ಸಂಪಾದಕರು :
ಎಂ.ಎಸ್. ವಿಕಾಸ್

ಗುರುವಾರ, ಮಾರ್ಚ್ 28, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 317 RNI : 27369/75

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999






ದಾವಣಗೆರೆ ಎವಿಕೆ ಕಾಲೇಜು ಸಭಾಂಗಣದಲ್ಲಿ ಬುಧವಾರ ಹೆಚ್.ಎಸ್. ವೆಂಕಟೇಶಮೂರ್ತಿ ಅವರ 'ಉರಿಯ ಉಯ್ಯಾಲೆ' ನಾಟಕವನ್ನು ಮೈಸೂರಿನ ಶಶಿ ಥಿಯೇಟರ್ ವತಿಯಿಂದ ಪ್ರದರ್ಶಿಸಲಾಯಿತು.

# ಬೇಸಿಗೆಯಲ್ಲೂ ವಿದ್ಯುತ್ ಬರ ಇಲ್ಲ

## ಬಳಕೆ ಪ್ರಮಾಣ ಹೆಚ್ಚಾದರೂ ಲೋಡ್ ಶೆಡ್ಡಿಂಗ್ ಇಲ್ಲ: ಸಚಿವ ಕೆ.ಜೆ. ಜಾರ್ಜ್

**ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಓದಲು ತೊಂದರೆಯಾಗದಂತೆ ವಿದ್ಯುತ್ ಪೂರೈಕೆ ಮಾಡಲಾಗುತ್ತದೆ. ಕೃಷಿ ಪಂಪ್‌ಸೆಟ್‌ಗಳಿಗೆ ಏಳು ತಾಸು ವಿದ್ಯುತ್ ಪೂರೈಕೆಗೆ ಆದೇಶ ನೀಡಲಾಗಿದೆ. ಬೇಸಿಗೆ ಕಾರಣದಿಂದ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಆಗದಂತೆ ನೋಡಿಕೊಳ್ಳಲಾಗುವುದು ಎಂದು ಸ್ಪಷ್ಟಪಡಿಸಿದ್ದಾರೆ.**



ಬೆಂಗಳೂರು, ಮಾ. 27 - ಪ್ರಸಕ್ತ ಬೇಸಿಗೆಯಲ್ಲಿ ವಿದ್ಯುತ್ ಬೇಡಿಕೆ ಹೆಚ್ಚಿದ್ದರೂ ರಾಜ್ಯದ ಯಾವುದೇ ವರ್ಗದ ಗ್ರಾಹಕರಿಗೆ ಲೋಡ್ ಶೆಡ್ಡಿಂಗ್ ಮಾಡುವುದಿಲ್ಲ ಎಂದು ಇಂಧನ ಖಾತೆ ಸಚಿವ ಕೆ.ಜೆ.ಜಾರ್ಜ್ ಸ್ಪಷ್ಟಪಡಿಸಿದ್ದಾರೆ.

ಪ್ರತಿ ದಿನದ ವಿದ್ಯುತ್ ಬಳಕೆ 329 ಮಿಲಿಯನ್ ಯೂನಿಟ್‌ನಷ್ಟಿದ್ದು, ಹಿಂದಿನ ವರ್ಷ ಇದೇ ಅವಧಿಯ ವಿದ್ಯುತ್ ಬಳಕೆ ಪ್ರಮಾಣ 300 ಮಿ.ಯೂ.ನಷ್ಟಿತ್ತು. ಕಳೆದ ವರ್ಷದ ಗರಿಷ್ಠ ಲೋಡ್ 15,300 ಮೆ.ವ್ಯಾ. ಆಗಿದ್ದರೆ, ಈ ವರ್ಷದ ಗರಿಷ್ಠ ಲೋಡ್ 17,000 ಮೆ.ವ್ಯಾ.ಗೆ ಏರಿದೆ ಎಂದವರು ಹೇಳಿದರು.

ಬೇಸಿಗೆಯಲ್ಲಿ ವಿದ್ಯುತ್ ಅಭಾವ ಎದುರಾಗಬಹುದೆಂಬ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮ ಕೈಗೊಂಡಿದ್ದರಿಂದ ವಿದ್ಯುತ್ ಕಡಿತವಾಗಲೀ, ಲೋಡ್ ಶೆಡ್ಡಿಂಗ್ ಆಗಲೀ ಮಾಡುವ ಪರಿಸ್ಥಿತಿ ಎದುರಾಗಿಲ್ಲ ಎಂದು ಪತ್ರಿಕಾ ಹೇಳಿಕೆಯಲ್ಲಿ ಸಚಿವರು ತಿಳಿಸಿದ್ದಾರೆ.

ನಮಗೆ ಬೇಡಿಕೆ ಹೆಚ್ಚುವುದನ್ನು ಮನಗಂಡು ಬಹಳ ಮುಂಚಿತವಾಗಿ ಸರಿಯಾದ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದಿದ್ದಾರೆ.

ವಿದ್ಯುತ್ ಪೂರೈಕೆಯಲ್ಲಿ ಸದ್ಯಕ್ಕೆ ಯಾವುದೇ ಬಿಕ್ಕಟ್ಟಿಲ್ಲ, ಜನರಿಗೆ ತೊಂದರೆ ಆಗದಂತೆ ನೋಡಿಕೊಳ್ಳಲಾಗುವುದು. ವಿದ್ಯುತ್ ಬೇಡಿಕೆ-ಪೂರೈಕೆಯಲ್ಲಿ ತೊಂದರೆಯಾಗದಂತೆ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಪ್ರಸಕ್ತ ಮಾರ್ಚ್, ಏಪ್ರಿಲ್ ಬೇಡಿಕೆಗೆ ಅನುಗುಣವಾಗಿ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳಲ್ಲಿ ಗರಿಷ್ಠ ಉತ್ಪಾದನೆಗೆ ಒತ್ತು ನೀಡಲಾಗಿದೆ.

ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳು ರಾಜ್ಯಕ್ಕೆ ವಿದ್ಯುತ್ ಉತ್ಪಾದನೆಯ ಮುಖ್ಯ ಆಧಾರವಾಗಿವೆ. ಶಾಖೋತ್ಪನ್ನ ಸ್ಥಾವರಗಳಲ್ಲಿ ಕಳೆದ ವರ್ಷ ಗರಿಷ್ಠ 22,000 ಮಿ.ಯೂ. ಉತ್ಪಾದನೆಯಾಗಿದೆ. ಪ್ರಸ್ತುತ 3,250 ಮೆ.ವ್ಯಾ ಅಂದರೆ, ದಿನಕ್ಕೆ 75 ಮಿ.ಯೂ.ನಂತೆ ವಿದ್ಯುತ್ ಉತ್ಪಾದನೆ ಆಗುತ್ತಿದೆ.

ಮಳೆ ಅಭಾವದಿಂದ ಈ ವರ್ಷ ಬಹುತೇಕ ಜಲಾಶಯಗಳು ಕೇವಲ ಅರ್ಧದಷ್ಟು ತುಂಬಿದ ಕಾರಣ ನೀರನ್ನು ಸಂರಕ್ಷಿಸಿ, ಬಹಳ ಎಚ್ಚರಿಕೆಯಿಂದ ಬಳಸಲಾಗುತ್ತಿದೆ.

ಇದರಿಂದಾಗಿ ಜಲ ವಿದ್ಯುತ್ ಉತ್ಪಾದನೆ ಸ್ವಲ್ಪ ಕುಂಠಿತಗೊಂಡಿದೆ. ಮಾರ್ಚ್ ಮತ್ತು ಏಪ್ರಿಲ್ ಹೆಚ್ಚಿನ ಬೇಡಿಕೆ ಅವಧಿಯಾಗಿದ್ದು, ದಿನಕ್ಕೆ 20 ಮಿ.ಯೂ. ಅಂದರೆ 1000 ಮೆ.ವ್ಯಾ. ವಿದ್ಯುತ್ ಅಗತ್ಯವಿದೆ.

ಉತ್ತರ ಪ್ರದೇಶ, ಪಂಜಾಬ್ (2ನೇ ಪುಟಕ್ಕೆ)

# ಜೋಶಿ ಬದಲಿಸಲು ದಿಂಗಾಲೇಶ್ವರ ಶ್ರೀ ಗಡುವು



ಹುಬ್ಬಳ್ಳಿ, ಮಾ. 27 – ಧಾರವಾಡ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸುತ್ತಿರುವ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರನ್ನು ಬದಲಿಸುವಂತೆ ಬಾಲೆಹೊಸೂರಿನ ಶ್ರೀ ದಿಂಗಾಲೇಶ್ವರ ಸ್ವಾಮೀಜಿ ಒತ್ತಾಯಿಸಿದ್ದು, ಇದಕ್ಕಾಗಿ ಮಾರ್ಚ್ 31ರವರೆಗೆ ಗಡುವು ನೀಡಿದ್ದಾರೆ.

ಧಾರವಾಡ ಕ್ಷೇತ್ರಕ್ಕೆ ಪ್ರಹ್ಲಾದ್ ಜೋಶಿ ಬದಲಿಗೆ ಸೂಕ್ತ ಅಭ್ಯರ್ಥಿಯನ್ನು ಹಾಕಬೇಕು. ಮಾರ್ಚ್ 31ರೊಳಗೆ ಅಭ್ಯರ್ಥಿಯನ್ನು ಬದಲಾವಣೆ ಮಾಡದೇ ಹೋದರೆ ಏಪ್ರಿಲ್ 2ರಂದು ಮತ್ತೆ ಸಭೆ ನಡೆಸುತ್ತೇವೆ ಎಂದವರು ಹೇಳಿದ್ದಾರೆ.

ಹುಬ್ಬಳ್ಳಿ ಮೂರು ಸಾವಿರ ಮಠದಲ್ಲಿ ನಡೆದ ಸ್ವಾಮೀಜಿಗಳ ಚಿಂತನ - ಮಂಥನ ಸಭೆಯ ಬಳಿಕ ಮಾತನಾಡಿದ ಅವರು, ಉತ್ತರ ಭಾರತದಂತೆಯೇ ದಕ್ಷಿಣ ಭಾರತದಲ್ಲೂ ಸ್ವಾಮೀಜಿಗಳು ರಾಜಕೀಯಕ್ಕೆ ಕಾಲಿಡಬೇಕು ಹಾಗೂ ಚುನಾವಣೆಯಲ್ಲಿ ಸ್ಪರ್ಧಿಸಬೇಕು ಎಂದು ಅಭಿಪ್ರಾಯ ಪಟ್ಟರು. ಈ ಬಗ್ಗೆ ಪ್ರತಿಕ್ರಿಯಿಸಿರುವ ಜೋಶಿ, (2ನೇ ಪುಟಕ್ಕೆ)

# ಇಂದಿನಿಂದ ಸೂಳೆಕೆರೆ ಹಳ್ಳಕ್ಕೆ ನೀರು ಬಿಡುಗಡೆ

ದಾವಣಗೆರೆ, ಮಾ.27 - ಭದ್ರಾ ಜಲಾಶಯ ಯೋಜನೆ ವ್ಯಾಪ್ತಿಗೆ ಬರುವ ದೇವರಬೆಳಕೆರೆ ಪಿಕ್‌ಅಪ್ ಅಣೆಕಟ್ಟಿನ ಸ್ಕವರಿಂಗ್ ಸ್ಲೂಯೀಸ್ ಗೇಟ್ ಮುಖಾಂತರ ಜಲಾಶಯದ ಡೆಡ್ ಸ್ಟೋರೇಜ್ ನೀರನ್ನು ಸೂಳೆಕೆರೆ ಹಳ್ಳಕ್ಕೆ ಮಾ. 28 ರಿಂದ ಏಪ್ರಿಲ್ 3 ರವರೆಗೆ ಪ್ರತಿದಿನ 20 ಕ್ಯೂಸೆಕ್ಸ್‌ಗಳಲ್ಲಿ ಜನ-ಜಾನುವಾರು ಪಕ್ಷಿಗಳಿಗೆ ಕುಡಿಯುವ ನೀರು ಒದಗಿಸಲು ಹಾಗೂ ಅಕ್ಕಪಕ್ಕದ ಗ್ರಾಮಗಳ ಕುಡಿಯುವ ನೀರಿನ ಉದ್ದೇಶಕ್ಕೆ ಬಿಡಲಾಗುತ್ತಿದೆ.

ಈ ವೇಳೆ ಹಳ್ಳಕ್ಕೆ ದನ ಕರಗಳನ್ನು ಇಳಿಸುವುದಾಗಲಿ, ಪಂಪ್‌ಸೆಟ್‌ಗಳಿಂದ ನೀರೆತ್ತುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೇ ಎಂದು ಕನೀನಿನಿ ಕಾರ್ಯಪಾಲಕ ಇಂಜಿನಿಯರ್ ತಿಳಿಸಿದ್ದಾರೆ.

# ಚಿತ್ರದುರ್ಗದಿಂದ ಕಾರಜೋಳ ಸ್ಪರ್ಧೆ



**ಬಿಜೆಪಿ ಘೋಷಣೆ**

ಬೆಂಗಳೂರು, ಮಾ. 27 – ಚಿತ್ರದುರ್ಗ ಲೋಕಸಭಾ ಕ್ಷೇತ್ರದಿಂದ ಮಾಜಿ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಸ್ಪರ್ಧಿಸಲಿದ್ದಾರೆ ಎಂದು ಬಿಜೆಪಿ ಘೋಷಿಸಿದೆ. ಈ ಕ್ಷೇತ್ರ ಪ್ರತಿನಿಧಿಸುತ್ತಿದ್ದ ಕೇಂದ್ರ ಸಚಿವ ಎ. ನಾರಾಯಣ ಸ್ವಾಮಿ ಅವರಿಗೆ ಟಿಕೆಟ್ ನಿರಾಕರಿಸಲಾಗಿದೆ.

ಆಡಳಿತ ವಿರೋಧಿ ಮನೋಭಾವ ಎದುರಿಸುತ್ತಿರುವ ಕಾರಣದಿಂದ ನಾರಾಯಣಸ್ವಾಮಿ ಅವರಿಗೆ ಟಿಕೆಟ್ ನಿರಾಕರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ನಾರಾಯಣಸ್ವಾಮಿ ಅವರು ಮೂಲತಃ ಚಿತ್ರದುರ್ಗದವರಲ್ಲ. ಅವರು ಬೆಂಗಳೂರು ಸಮೀಪದ ಆನೇಕಲ್‌ನಿಂದ ಈ ಹಿಂದೆ ಶಾಸಕರಾಗಿದ್ದರು.

ಇದರೊಂದಿಗೆ ರಾಜ್ಯದ 28 ಕ್ಷೇತ್ರಗಳ ಪೈಕಿ ಬಿಜೆಪಿ ಸ್ಪರ್ಧಿಸಲಿರುವ ಎಲ್ಲಾ 25 ಕ್ಷೇತ್ರಗಳ ಅಭ್ಯರ್ಥಿಗಳನ್ನು ಘೋಷಿಸಿದಂತಾಗಿದೆ. ಮಂಡ್ಯ, ಹಾಸನ ಹಾಗೂ ಕೋಲಾರಗಳಲ್ಲಿ ಜೆಡಿಎಸ್ ಸ್ಪರ್ಧಿಸಲಿದೆ.

ವಿಜಯಪುರ ಜಿಲ್ಲೆಯ (2ನೇ ಪುಟಕ್ಕೆ)

# ದಕ್ಷಿಣದ ಕ್ಷೇತ್ರಗಳಿಗೆ ಇಂದಿನಿಂದ ನಾಮಪತ್ರ ಸಲ್ಲಿಕೆ

ಬೆಂಗಳೂರು, ಮಾ. 27 – ದಕ್ಷಿಣ ಕರ್ನಾಟಕದ 14 ಲೋಕಸಭಾ ಕ್ಷೇತ್ರಗಳಿಗೆ ನಾಳೆ ಗುರುವಾರದಿಂದ ನಾಮಪತ್ರ ಸಲ್ಲಿಕೆ ಆರಂಭಗೊಳ್ಳಲಿದೆ.

ರಾಜ್ಯದ 28 ಲೋಕಸಭಾ ಕ್ಷೇತ್ರಗಳ ಪೈಕಿ ಮೊದಲ ಹಂತದಲ್ಲಿ 14 ಕ್ಷೇತ್ರಗಳ ವ್ಯಾಪ್ತಿಯ ಚುನಾವಣಾಧಿಕಾರಿಗಳೂ ಆಗಿರುವ ಜಿಲ್ಲಾಧಿಕಾರಿಗಳು ಚುನಾವಣಾ ಪ್ರಕ್ರಿಯೆ ಆರಂಭಕ್ಕೆ ಅಧಿಸೂಚನೆ ಹೊರಡಿಸಲಿದ್ದಾರೆ. ಅಧಿಸೂಚನೆ ಹೊರಬೀಳುತ್ತಿದ್ದಂತೆ ಸ್ಪರ್ಧಾ ಕಣಕ್ಕಿಳಿಯುವ ಆಕಾಂಕ್ಷಿಗಳು ಆಯೋಗದ ನಿಯ ಮಾನುಸಾರ ನಾಮಪತ್ರ ಸಲ್ಲಿಕೆ ಮಾಡಬಹುದಾಗಿದೆ.

ಮೈಸೂರು-ಕೊಡಗು, ಮಂಡ್ಯ, ಚಾಮರಾಜ ನಗರ, ಹಾಸನ, ಉಡುಪಿ-ಚಿಕ್ಕಮಗಳೂರು, ದಕ್ಷಿಣ ಕನ್ನಡ, ಚಿತ್ರದುರ್ಗ, ತುಮಕೂರು, ಬೆಂಗಳೂರು ಗ್ರಾಮಾಂತರ, ಬೆಂಗಳೂರು ಉತ್ತರ, (2ನೇ ಪುಟಕ್ಕೆ)

# ಎಸ್ಸೆಸ್ಸೆಲ್ಸಿ ಪರೀಕ್ಷೆ: ಕೊಠಡಿ ಮೇಲ್ವಿಚಾರಕ ಅಮಾನತ್ತು

ದಾವಣಗೆರೆ, ಮಾ.27 - ಹತ್ತನೇ ತರಗತಿ ಪರೀಕ್ಷೆ ಸಮಯದಲ್ಲಿ ಪರೀಕ್ಷಾ ಕೇಂದ್ರದಲ್ಲಿ ಕರ್ತವ್ಯ ನಿರ್ಲಕ್ಷ್ಯ ವಹಿಸಿದ್ದ ಹಿನ್ನೆಲೆಯಲ್ಲಿ ಹರಿಹರ ತಾಲ್ಲೂಕಿನ ಎಂಕೆಇಟಿಎಲ್‌ಕೆ ಪರೀಕ್ಷಾ ಕೇಂದ್ರದ ಕೊಠಡಿ ಮೇಲ್ವಿಚಾರಕ ರಿಯಾಜ್ ಅಹಮದ್ ಅವರನ್ನು ಸೇವೆಯಿಂದ ಅಮಾನತ್ತು ಮಾಡಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ. ಇಟ್ನಾಳ್ ಆದೇಶಿಸಿದ್ದಾರೆ.

ಬುಧವಾರ ಸಮಾಜ ವಿಜ್ಞಾನ ವಿಷಯದ ಪರೀಕ್ಷೆ ಇತ್ತು. ಈ ವೇಳೆ ಪರೀಕ್ಷಾ ಮೇಲ್ವಿಚಾರಕರಾಗಿ ಕರ್ತವ್ಯ ನಿರ್ವಹಿಸಿದ ಕೊಠಡಿಯಲ್ಲಿ ವಿದ್ಯಾರ್ಥಿಗಳು ಒಬ್ಬರಿಗೊಬ್ಬರು ಹಿಂದೆ, ಮುಂದಿನ ಬೆಂಚ್ ನ ವಿದ್ಯಾರ್ಥಿಗಳೊಂದಿಗೆ ಸಂಭಾಷಣೆಯಲ್ಲಿ ತೊಡಗಿದ್ದರೂ ಮೇಲ್ವಿಚಾರಕರಾಗಿ ಪರೀಕ್ಷಾ ಶಿಸ್ತು, ಗೌಪ್ಯತೆಯನ್ನು ಕಾಪಾಡಿಕೊಳ್ಳುವಲ್ಲಿ ವಿಫಲರಾಗಿರುವುದರಿಂದ ಅಮಾನತ್ತು ಮಾಡಲಾಗಿದೆ. (2ನೇ ಪುಟಕ್ಕೆ)

# ಚುನಾವಣಾ ಅಧಿಕಾರಿಗಳು ಆಯೋಗದ ಕಣ್ಣು-ಕಿವಿ



**ಜಿಲ್ಲಾಡಳಿತ ಭವನದ ತರಬೇತಿ ಕಾರ್ಯಾಗಾರದಲ್ಲಿ ಜಿಲ್ಲಾಧಿಕಾರಿ**

ದಾವಣಗೆರೆ,ಮಾ.27 - ನ್ಯಾಯ ಸಮ್ಮತ, ಪಾರದರ್ಶಕ ಚುನಾವಣೆ ನಡೆಸಲು ಚುನಾವಣಾ ಅಧಿಕಾರಿಗಳು ಆಯೋಗದ ಕಣ್ಣು, ಕಿವಿಯಾಗಿದ್ದು ಪ್ರಾಮಾಣಿಕವಾದ ಕೆಲಸ ಮಾಡಬೇಕು ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ. ವೆಂಕಟೇಶ್ ಎಂ.ವಿ ತಿಳಿಸಿದರು.

ಅವರು ಬುಧವಾರ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಸಹಾಯಕ ಚುನಾವಣಾಧಿಕಾರಿಗಳು, ಫ್ಲೈಯಿಂಗ್ ಸ್ಕ್ವಾಡ್, ಸ್ಟ್ಯಾಟಿಕ್ ಸರ್ವ ಲೆನ್ಸ್ ಟೀಮ್ ಮುಖ್ಯಸ್ಥರಿಗೆ ಏರ್ಪಡಿಸ ಲಾದ ಚುನಾವಣಾ ಕರ್ತವ್ಯಗಳು ಮತ್ತು ಕರ್ತವ್ಯದಲ್ಲಿದ್ದಾಗ ಅನುಸರಿಸಬೇಕಾದ ಕ್ರಮ, ನಿಯಮಗಳು, ಮಾದರಿ ನೀತಿ ಸಂಹಿತೆ ಅನುಷ್ಠಾನದ ಕುರಿತಂತೆ ಏರ್ಪಡಿಸಲಾದ ತರಬೇತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಫ್ಲೈಯಿಂಗ್ ಸ್ಕ್ವಾಡ್‌ಗೆ ಕಾರ್ಯ ನಿರ್ವಾಹಕ ದಂಡಾಧಿಕಾರಿಯ ಅಧಿಕಾರ ನೀಡಲಾಗಿದೆ. ಯಾವುದೇ ಸಂದರ್ಭದಲ್ಲಿ ಚುನಾವಣಾ ಅಕ್ರಮಗಳ ಬಗ್ಗೆ ತನಿಖೆ ಮಾಡುವ ಅಧಿಕಾರ ನೀಡಲಾಗಿರುತ್ತದೆ.

ಚುನಾವಣಾ ಉದ್ದೇಶಕ್ಕೆ ಹಂಚಿಕೆ ಮಾಡಲು ಸಂಗ್ರಹಿಸಲಾದ ಹಣ, ಮದ್ಯ, ಉಚಿತ ಕೊಡುಗೆಗಳಾದ ಸೀರೆ, ಶಾಲು, ಆಭರಣ, ಕೂಪನ್‌ಗಳು, ಕಿಚನ್ ವಸ್ತುಗಳು ಕಂಡು ಬಂದಲ್ಲಿ ವಶಕ್ಕೆ ಪಡೆದು ತನಿಖೆ ಮಾಡಿ ಅಕ್ರಮ ಎಂದಾದಲ್ಲಿ ಪ್ರಕರಣ ದಾಖಲಿಸುವ ಅಧಿಕಾರ ಇರುತ್ತದೆ ಮತ್ತು ಜನರಿಗೆ ಬೆದರಿಕೆಯುಂಟು ಮಾಡುವವರ ಮೇಲೆಯೂ ತನಿಖೆ ಮಾಡುವ ಅಧಿಕಾರ ಇರುತ್ತದೆ. ಇವರು ಪ್ರತಿನಿತ್ಯದ ವರದಿಯನ್ನು ಸಹಾಯಕ ಚುನಾವಣಾಧಿಕಾರಿಗಳಿಗೆ ನೀಡಬೇಕು. ಇವರು ತಮ್ಮ ಕರ್ತವ್ಯದಲ್ಲಿ (2ನೇ ಪುಟಕ್ಕೆ)

# ಭದ್ರಾ ಕಾಲುವೆ ಬಳಿ ನಿಷೇಧಾಜ್ಞೆ

ದಾವಣಗೆರೆ, ಮಾ. 27 - ಭದ್ರಾ ಜಲಾಶಯದಿಂದ ಬಲದಂಡೆ ಕಾಲುವೆಗೆ ನೀರು ಬಿಡಲಾಗಿದ್ದು ಕೊನೆ ಹಂತದ ರೈತರಿಗೆ ನೀರು ತಲುಪಿಸಲು ಅನಧಿಕೃತ ಪಂಪ್‌ಸೆಟ್ ತೆರವು ಮಾಡಲಾಗುತ್ತಿದೆ. ಈ ಅವಧಿಯಲ್ಲಿ ಸಾರ್ವಜನಿಕ ಶಾಂತಿ, ಕಾನೂನು ಸುವ್ಯವಸ್ಥೆ ಕಾಪಾಡಲು ನಾಳೆ ದಿನಾಂಕ 28ರ ಮಧ್ಯಾಹ್ನ 2 ರವರೆಗೆ ಮಾಯಕೊಂಡ ಹೋಬಳಿ ನಲ್ಕುಂದ ಬಳಿ ತಾಲ್ಲೂಕು ಗಡಿಯಿಂದ ಕುರ್ಕಿ ಗ್ರಾಮ ವ್ಯಾಪ್ತಿಯಲ್ಲಿ ಬರುವ ಭದ್ರಾ ಕಾಲುವೆಗಳ ಸುತ್ತಮುತ್ತ ಬಲ ಮತ್ತು ಎಡಭಾಗದಿಂದ 200ಮೀ. ರವರೆಗಿನ ಪ್ರದೇಶದ ವ್ಯಾಪ್ತಿಯನ್ನು (2ನೇ ಪುಟಕ್ಕೆ)

# ಕ್ಷಯ ಔಷಧಿ ಪೂರೈಸಲು ಕೇಂದ್ರಕ್ಕೆ ಪತ್ರ

ಬೆಂಗಳೂರು, ಮಾ. 27 – ಕ್ಷಯ ರೋಗಕ್ಕೆ ನೀಡಲಾಗುವ ಔಷಧಿಗಳನ್ನು ತುರ್ತಾಗಿ ಪೂರೈಸುವಂತೆ ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಅವರಿಗೆ ರಾಜ್ಯ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಪತ್ರ ಬರೆದಿದ್ದಾರೆ.

2021ರಿಂದಲೂ ರಾಜ್ಯಕ್ಕೆ ನಿರಂತರವಾಗಿ ಕ್ಷಯ ರೋಗದ ಔಷಧಿಗಳನ್ನು ಪೂರೈಸುತ್ತಿಲ್ಲ ಎಂದು ಗುಂಡೂರಾವ್ ಪತ್ರದಲ್ಲಿ ತಿಳಿಸಿದ್ದಾರೆ. ಸಚಿವರು ಕಳೆದ ಮೂರು ತಿಂಗಳಲ್ಲಿ ಎರಡು ಪತ್ರಗಳನ್ನು ಬರೆದಿದ್ದಾರೆ. ಚುನಾವಣಾ ನೀತಿ ಸಂಹಿತೆ ಜಾರಿಯಾದ ನಂತರ ಸಚಿವರು ಮೊದಲ ಬಾರಿಗೆ ಪತ್ರ ಬರೆದಿದ್ದಾರೆ.

# ಕೋಲಾರ 'ಕೈ' ಟಿಕೆಟ್‌ಗೆ ಬಂಡಾಯ

## ಐವರು ಶಾಸಕರಿಂದ ರಾಜೀನಾಮೆ ನೀಡುವುದಾಗಿ ಎಚ್ಚರಿಕೆ

**ಬಲಗೈ ಸಮುದಾಯಕ್ಕೆ ಟಿಕೆಟ್ ನೀಡಲು ಆಗ್ರಹ**

ಬೆಂಗಳೂರು, ಮಾ. 27- ಕಾಂಗ್ರೆಸ್ ನಾಯಕ ಹಾಗೂ ಸಚಿವ ಕೆ. ಹೆಚ್. ಮುನಿಯಪ್ಪ ಅವರ ಅಳಿಯ ಚಿಕ್ಕಪೆದ್ದಣ್ಣ ಅವರಿಗೆ ಕೋಲಾರ ಲೋಕಸಭಾ ಕ್ಷೇತ್ರದ ಟಿಕೆಟ್ ನೀಡಿದರೆ ರಾಜೀನಾಮೆ ನೀಡುವುದಾಗಿ ಕಾಂಗ್ರೆಸ್ ಪಕ್ಷದ ಐವರು ಶಾಸಕರು ಎಚ್ಚರಿಕೆ ನೀಡಿದ್ದಾರೆ.

ಪರಿಶಿಷ್ಟ ಜಾತಿಗೆ ಮೀಸಲಾಗಿರುವ ಈ ಕ್ಷೇತ್ರದ ಟಿಕೆಟ್ ಅನ್ನು ಬಲಗೈ ಸಮುದಾಯಕ್ಕೇ ನೀಡಬೇಕೆಂದು ಬಂಡಾಯ ಶಾಸಕರು ಪಟ್ಟು ಹಿಡಿದಿದ್ದಾರೆ. ಚಿಕ್ಕಪೆದ್ದಣ್ಣ ಅವರು ಎಡಗೈ ಸಮುದಾಯಕ್ಕೆ ಸೇರಿದವರಾಗಿದ್ದಾರೆ.


ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್, ಕೋಲಾರದ ಶಾಸಕರಾದ ಕೆ.ಜಿ. ಮಂಜುನಾಥ್, ಕೆ.ವೈ. ನಂಜೇಗೌಡ ಮತ್ತು ಪರಿಷತ್ ಸದಸ್ಯರಾದ ಅನಿಲ್ ಕುಮಾರ್ ಹಾಗೂ ನಸೀರ್ ಅಹಮದ್ ಅವರು ರಾಜೀ ನಾಮೆಗೆ ಮುಂದಾಗಿದ್ದಾರೆ. ಅಹಮದ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜಕೀಯ ಕಾರ್ಯದರ್ಶಿಯೂ ಆಗಿದ್ದಾರೆ.

ಪರಿಶಿಷ್ಟರ ಬಲಗೈ ಸಮುದಾಯಕ್ಕೇ ಟಿಕೆಟ್ ನೀಡಬೇಕು ಎಂದು ಬಂಗಾರಪೇಟೆಯ ಶಾಸಕ ಎಸ್.ಎನ್. ನಾರಾಯಣಸ್ವಾಮಿ ಸಹ ಆಗ್ರಹಿಸಿದ್ದಾರೆ. ಪಕ್ಷ ಇನ್ನೂ ಕೋಲಾರದ ಟಿಕೆಟ್ ಘೋಷಿಸಿಲ್ಲ, ಘೋಷಿಸಿದ ನಂತರ ಮುಂದಿನ ನಿರ್ಧಾರ ಕೈಗೊಳ್ಳುವುದಾಗಿ ನಾರಾಯಣಸ್ವಾಮಿ ಹೇಳಿದ್ದಾರೆ.

ಆಹಾರ ಸಚಿವ ಕೆ.ಹೆಚ್. ಮುನಿಯಪ್ಪ ಹಾಗೂ ವಿಧಾನಸಭೆ ಮಾಜಿ ಸಭಾಧ್ಯಕ್ಷ ಕೆ.ಆರ್. ರಮೇಶ್ ಕುಮಾರ್ ಬಣಗಳ ನಡುವೆ ಈಗ ಸಂಘರ್ಷ ಆರಂಭವಾಗಿದೆ. ಮುನಿಯಪ್ಪ ಅವರ ಕುಟುಂಬ ರಾಜಕೀಯಕ್ಕೆ ವಿರೋಧ ವ್ಯಕ್ತವಾಗುತ್ತಿದೆ ಎಂಬ ಮಾತುಗಳು ಕೇಳಿ ಬರುತ್ತಿವೆ.

ಪರಿಷತ್‌ನ ಇಬ್ಬರು ಸದಸ್ಯರು ಪತ್ರಕರ್ತರಿಗೆ ರಾಜೀನಾಮೆ ಪತ್ರಗಳನ್ನು ತೋರಿಸಿದ್ದಾರೆ. ನಂತರ ಅವರು ಪರಿಷತ್ ಸಭಾಪತಿ (2ನೇ ಪುಟಕ್ಕೆ)

# ಕಾಣದ ಕೈಗಳಿಂದ ಅವಕಾಶ ವಂಚಿತನಾಗಿದ್ದೇನೆ : ವಿನಯ್



**ಹೊನ್ನಾಳಿ**

ಹೊನ್ನಾಳಿ, ಮಾ. 27- ಕಾಣದ ಕೈಗಳಿಂದ ಟಿಕೆಟ್ ಪಡೆಯುವಲ್ಲಿ ವಂಚಿತನಾಗಿದ್ದು, ಅವಕಾಶಗಳನ್ನು ನಾವೇ ಸೃಷ್ಟಿಸಿಕೊಳ್ಳಬೇಕಾಗಿದೆ ಎಂದು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಅಹಿಂದ ಯುವ ನಾಯಕ ಜಿ.ಬಿ. ವಿನಯ್ ಕುಮಾರ್ ಹೇಳಿದರು.

ಹೊನ್ನಾಳಿ ತಾಲ್ಲೂಕಿನ ಸುಮಾರು 26 ಹಳ್ಳಿಗಳಿಗೆ ಭೇಟಿ ನೀಡಿ ಹೊಳೆ ಹರಳಹಳ್ಳಿ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷಕ್ಕೆ ಹೋರಾಟಗಾರರ ಅವಶ್ಯಕತೆ ಬೇಡವಾಗಿದೆ ಎಂದರು.

ನನ್ನದೇ ಒಂದು ವಿಷನ್ ಇಟ್ಟುಕೊಂಡು, ಚಿಂತನೆಯಿಂದ ಹೋರಾಟ ಮಾಡಿದ್ದೇನೆ. ಪ್ರಾಮಾಣಿಕವಾಗಿ ತಳಮಟ್ಟದಿಂದ ಹೋರಾಟ ಮಾಡಿದಂತಹ ನನಗೆ ಅನ್ಯಾಯವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಪರಿಶ್ರಮದಿಂದ ಸಂಘಟನೆ ಮಾಡಿದ ನನ್ನ ಹೆಸರು ಮುಂಚೂಣಿಯಲ್ಲಿತ್ತು, ಆದರೆ, ಕೆಲ ಕಾಣದ ಕೈಗಳಿಂದ ಅವಕಾಶ ವಂಚಿತನಾಗಿದ್ದೇನೆ. ಅವಕಾಶ ಸಿಗದಿದ್ದರೂ ಅವಕಾಶ ಸೃಷ್ಟಿ ಮಾಡಬೇಕಾಗಿದೆ. ಜನರ ಅಭಿಪ್ರಾಯದ ಮೇರೆಗೆ ನಿರ್ಧಾರ ಕೈಗೊಳ್ಳುವುದಾಗಿ ಹೇಳಿದರು.

ದಾವಣಗೆರೆಗೆ ಈಶ್ವರ ಖಂಡ್ರೆ ಅವರು ಆಗಮಿಸಿದಾಗ ನನ್ನ ಪರ ಶೇ. 90 ರಷ್ಟು ಹೆಸರು ಮುನ್ನೆಲೆಗೆ ಬಂದಿತ್ತು. ಆದರೆ ಶಿಫಾರಸ್ಸು ಮಾಡುವಲ್ಲಿ ನನ್ನ ಹೆಸರು ಇರಲಿಲ್ಲ. ಜಾತಿವಾದ ಎಷ್ಟರಮಟ್ಟಿಗೆ ಕೆಲಸ ಮಾಡಿದೆ ಎಂಬುದು ಅಂದು ನನಗೆ ಸಾಕಷ್ಟು ಬೇಸರವಾಯಿತು ಎಂದರು.

ಈ ಸಮಾರಂಭದಲ್ಲಿ ಗ್ರಾಮದ ಮುಖಂಡರುಗಳು ಮಾತನಾಡಿ, ಪಕ್ಷ ನೋಡುವುದಕ್ಕಿಂತ ವ್ಯಕ್ತಿ ನೋಡಿ ಈ ಬಾರಿ ನಾವು ಮತ ಹಾಕೋಣ ಎಂದು ಅಚಲವಾಗಿ ಸಭೆಯಲ್ಲಿ ಘೋಷಿಸಿದರು.

ಚೆನ್ನಯ್ಯ ಒಡೆಯರ್ ತದ ನಂತರ (2ನೇ ಪುಟಕ್ಕೆ)

# ಈ ಬಾರಿ ಶೇ.85ಕ್ಕಿಂತ ಹೆಚ್ಚು ದಾಖಲೆ ಮತದಾನ ಆಗಬೇಕು

## ಜಿಲ್ಲಾ ಸ್ವೀಪ್ ಸಮಿತಿ ಕೋರ್ ಕಮಿಟಿ ಸಭೆಯಲ್ಲಿ ರಾಜ್ಯ ಸ್ವೀಪ್ ನೋಡಲ್ ಅಧಿಕಾರಿ ಪಿ.ಎಸ್.ವಸ್ತ್ರದ್ ಕರೆ

ದಾವಣಗೆರೆ, ಮಾ.27- ಪ್ರಸ್ತುತ 18ನೇ ಲೋಕಸಭಾ ಚುನಾವಣೆಯಲ್ಲಿ ಶೇ 85ಕ್ಕಿಂತಲೂ ಹೆಚ್ಚಿನ ಮತದಾನವಾಗುವಂತೆ ಮಾಡಿ, ಹೊಸ ದಾಖಲೆ ನಿರ್ಮಿಸುವಂತೆ ರಾಜ್ಯ ಸ್ವೀಪ್ ನೋಡಲ್ ಅಧಿಕಾರಿ ಪಿ.ಎಸ್.ವಸ್ತ್ರದ್ ತಿಳಿಸಿದರು.

ಬುಧವಾರ ಜಿಲ್ಲಾ ಪಂಚಾಯತ್ ಸಭಾಂಗಣ ದಲ್ಲಿ ಜರುಗಿದ ಜಿಲ್ಲಾ ಸ್ವೀಪ್ ಸಮಿತಿ ಕೋರ್ ಕಮಿಟಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ದಾವಣಗೆರೆ ಕ್ಷೇತ್ರದಲ್ಲಿ 2019ರ ಲೋಕಸಭಾ ಚುನಾವಣೆಯಲ್ಲಿ ಶೇ. 72.96 ರಷ್ಟು ಮತದಾನವಾಗಿತ್ತು. ಕಳೆದ ಚುನಾವಣೆಯಲ್ಲಿ ಯಾವ ಮತಗಟ್ಟೆಯಲ್ಲಿ ಕಡಿಮೆ ಮತದಾನವಾಗಿದೆ, ಅಂತಹ ಪ್ರದೇಶದಲ್ಲಿ ಹೆಚ್ಚಿನ ಮತದಾರರ ಜಾಗೃತಿ ಕಾರ್ಯಕ್ರಮದ ಜೊತೆಗೆ ಅವರಿಗಾಗಿರುವ ಅನಾನುಕೂಲಗಳ ಬಗ್ಗೆಯೂ ಪರಿಶೀಲನೆ ನಡೆಸಿ ಕಡಿಮೆ ಮತದಾನವಾಗಲು ಯಾವ ಯಾವ ಅಂಶಗಳು ಕಾರಣವಾಗಿವೆ ಎಂಬುದನ್ನು ಮನಗಂಡು, ಇದಕ್ಕೆ ಪರಿಹಾರೋಪಾಯಗಳನ್ನು ಕಂಡುಕೊಂಡು, ಈ ವರ್ಷ ಮತದಾನದ ಹೆಚ್ಚಳಕ್ಕೆ ಮುಂದಾಗಬೇಕಾಗಿದೆ ಎಂದರು.

ಗ್ರಾಮಾಂತರ ಪ್ರದೇಶದಲ್ಲಿ ಮತದಾನ ಹೆಚ್ಚಿರುತ್ತದೆ, ಆದರೆ ನಗರ, ಪಟ್ಟಣ ಪ್ರದೇಶದ ಕೆಲವು ಪ್ರದೇಶಗಳು ಅಂದರೆ ಶಿಕ್ಷಣವಂತರೇ ಮತದಾನದಿಂದ ದೂರ ಇರುತ್ತಾರೆ. ಆದ್ದರಿಂದ ಪ್ರತಿಯೊಬ್ಬರ ಮತವು ಬಹಳ ಪ್ರಾಮುಖ್ಯವಾಗಿದ್ದು, ಎಲ್ಲರೂ ಚುನಾವಣಾ ಹಬ್ಬದಲ್ಲಿ ಭಾಗವಹಿಸುವಂತೆ ಪ್ರೇರಪಿಸಬೇಕಾಗಿದೆ ಎಂದರು.

ಮತಗಟ್ಟೆಗೆ ಜನರು ಖುಷಿಯಿಂದ ಬಂದು ಮತದಾನ ಮಾಡುವಂತಹ ವಾತಾವರಣ ಕಲ್ಪಿಸಬೇಕು. ಮತಗಟ್ಟೆಗಳಲ್ಲಿ ಜನರಿಗೆ ಕನಿಷ್ಠ ಸೌಲಭ್ಯಗಳು ಇರುವಂತೆ, ನೋಡಿಕೊಳ್ಳಬೇಕು ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆಯಿಂದ ಹಲವು ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ವಿಶೇಷವಾಗಿ ಮೂರು ತಲೆಮಾರಿನ ಮತದಾರರಿಂದ ಮತದಾನ, ಮಹಿಳೆಯರಿಗಾಗಿ ರಂಗೋಲಿ ಸ್ಪರ್ಧೆ ಸೇರಿದಂತೆ ಮತದಾರರ ಜಾಗೃತಿಗೆ ವಿನೂತನ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ ಎಂದು ಉಪನಿರ್ದೇಶಕರು ಮಾಹಿತಿ ನೀಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಹಾಗೂ ಸ್ವೀಪ್ ಸಮಿತಿ ಅಧ್ಯಕ್ಷ ಸುರೇಶ್ ಬಿ.ಇಟ್ನಾಳ್ ಮಾತನಾಡಿ 2023 ರಲ್ಲಿ ಜರುಗಿದ ವಿಧಾನಸಭಾ ಚುನಾವಣೆಯಲ್ಲಿ ಮತದಾನ ಪ್ರಮಾಣ ಗಣನೀಯವಾಗಿ ಹೆಚ್ಚಳವಾಗಿದೆ. ಪ್ರಸ್ತುತ ಲೋಕಸಭಾ ಚುನಾವಣೆಯಲ್ಲಿ ಶೇ 85ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಮತದಾನ ಮಾಡಲು ಅಗತ್ಯವಿರುವ ಎಲ್ಲಾ ಜಾಗೃತಿ ಕಾರ್ಯಕ್ರಮ ರೂಪಿಸಲಾಗಿದೆ. 36 ಸಾವಿರಕ್ಕಿಂತ ಹೆಚ್ಚು ಹೊಸ ಮತದಾರರನ್ನು ನೋಂದಣಿ ಮಾಡಿಸಲಾಗಿದೆ ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಕೃಷ್ಣನಾಯ್ಕ, ಮುಖ್ಯ ಯೋಜನಾಧಿಕಾರಿ ಮಲ್ಲಾನಾಯ್ಕ್, ಪಾಲಿಕೆ ಆಯುಕ್ತರಾದ ರೇಣುಕಾ, ನಗರಾಭಿವೃದ್ದಿ ಕೋಶದ ಯೋಜನಾ ನಿರ್ದೇಶಕ ಮಹಂತೇಶ್ ಹಾಗೂ ಸಮಿತಿ ಸದಸ್ಯರಾದ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.



# ಕುಂಬಳೂರು : ಮುಳ್ಳೋತ್ಸವಕ್ಕೆ ಅಪಾರ ಜನ

ಮಲೇಬೆನ್ನೂರು, ಮಾ.27- ಕುಂಬಳೂರು ಗ್ರಾಮದ ಆರಾಧ್ಯ ದೈವ ಶ್ರೀ ಹನುಮಂತ ದೇವರ ಮಹಾರಥೋತ್ಸವವು ಬುಧವಾರ ಬೆಳಗಿನ ಜಾವ ಸಕಲ ವಾದ್ಯಗಳೊಂದಿಗೆ ಅಪಾರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು.

ಬೆಳಿಗ್ಗೆ 10 ಗಂಟೆಗೆ ದೇವರು ಭೇಟೆ ಆಡಿ ಬಂದ ನಂತರ ದೇವಸ್ಥಾನದಲ್ಲಿ ಸಾಮೂಹಿಕ ಮದುವೆಗಳು ನಡೆದವು.

ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ರಥೋತ್ಸವದ ಅಂಗವಾಗಿ ಸಂಜೆ ನಡೆದ ಹನುಮಂತ ದೇವರ ಮುಳ್ಳೋತ್ಸವ ನೋಡಲು ಕುಂಬಳೂರು ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳ ಸಾವಿರಾರು ಜನ ಆಗಮಿಸಿದ್ದರು.

ಮೊದಲಿಗೆ ಭೂತಪ್ಪನನ್ನು ಹೊತ್ತ ವ್ಯಕ್ತಿ ಮುಳ್ಳು ತುಳಿದ ನಂತರ ಹರಕೆ ಹೊತ್ತ ಜನರು ಮುಳ್ಳು ತುಳಿದು ಭಕ್ತಿ ಸಮರ್ಪಿಸಿದರು.

ಈ ವೇಳೆ ಹನುಮಂತ ದೇವರ ಕುದುರೆ ವಾಹನದ ಮೇಲೆ ಕುಣಿಯುವ ದೃಶ್ಯ ಎಲ್ಲರ ಗಮನ ಸೆಳೆದರು.

ಗ್ರಾಮದ ಶ್ರೀ ಬಸವೇಶ್ವರ, ಶ್ರೀ ಬೀರಲಿಂಗೇಶ್ವರ, ಶ್ರೀ ಮಾರ್ಯೆಮ್ಮ, ಶ್ರೀ ಉಡಸಲಾಂಬಿಕೆ ಮತ್ತು ನಿಟ್ಟೂರಿನ ಶ್ರೀ ಆಂಜನೇಯ ಸ್ವಾಮಿ ದೇವರುಗಳು ಸಾನ್ನಿಧ್ಯ ವಹಿಸಿದ್ದವು. ರಾತ್ರಿ ಕಂಕಣ ವಿಸರ್ಜನೆ ಹಾಗೂ ಓಕುಳಿ, ಭೂತಗಳ ಮಣೇವು ಸೇವೆಯೊಂದಿಗೆ ರಥೋತ್ಸವಕ್ಕೆ ತೆರೆ ಎಳೆಯಲಾಯಿತು.

# ಬೇಸಿಗೆಯಲ್ಲೂ ವಿದ್ಯುತ್ ಬರ ಇಲ್ಲ

(1ನೇ ಪುಟದಿಂದ) ರಾಜ್ಯಗಳೊಂದಿಗೆ ದ್ವಿಪಕ್ಷೀಯ ವಿನಿಮಯ ಒಪ್ಪಂದ ಮಾಡಿಕೊಳ್ಳುವ ಮೂಲಕ ತೀವ್ರ ವಿದ್ಯುತ್ ಅಭಾವ ಉಂಟಾಗದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ. ಮುಂದಿನ ವರ್ಷ ಈ ರಾಜ್ಯಗಳಿಗೆ ವಿದ್ಯುತ್ ಹಿಂದಿರುಗಿಸುವ ಷರತ್ತಿನ ಮೇಲೆ ವಿನಿಮಯ ಆಧಾರದಲ್ಲಿ ಪ್ರತಿದಿನ ಸರಾಸರಿ 900 ಮೆ.ವ್ಯಾ. ವಿದ್ಯುತ್ ಪಡೆಯಲಾಗುತ್ತಿದೆ.

ವಿದ್ಯುತ್ ಕಾಯ್ದೆಯ ಸೆಕ್ಷನ್ 11 ಜಾರಿಗೊಳಿಸಿ, ಖಾಸಗಿ ವಿದ್ಯುತ್ ಉತ್ಪಾದಕರಿಂದ ವಿದ್ಯುತ್ ಖರೀದಿ ಮಾಡಲಾಗುತ್ತಿದೆ, ಪ್ರಸ್ತುತ 500 ಮೆ.ವ್ಯಾ. ವಿದ್ಯುಚ್ಛಕ್ತಿಯನ್ನು ಖಾಸಗಿ ಉತ್ಪಾದಕರಿಂದ ಪಡೆಯಲಾಗುತ್ತಿದೆ.

ಬಹುತೇಕ ಖಾಸಗಿ ವಲಯದ ಸೌರ ಮತ್ತು ಪವನ ವಿದ್ಯುತ್ ಸ್ಥಾವರಗಳು ಸಾಮಾನ್ಯವಾಗಿ 'ಮಸ್ಟ್ ರನ್' ಆಧಾರದ ಮೇಲೆ ನಡೆಯುತ್ತವೆ. ಹವಾಮಾನ ಬದಲಾವಣೆಗೆ ಅನುಗುಣವಾಗಿ ಈ ಸ್ಥಾವರಗಳಿಂದ ವಿದ್ಯುತ್ ಉತ್ಪಾದನೆ ಆಗುತ್ತದೆ.

ರಾಜ್ಯಕ್ಕೆ ಹೆಚ್ಚುವರಿ ವಿದ್ಯುತ್ತಿನ ಅಗತ್ಯ ಇದೆ ಎಂದು ಮನವರಿಕೆ ಮಾಡಿಕೊಟ್ಟು, ಕೇಂದ್ರ ಗ್ರಿಡ್‌ನಿಂದ ಈ ವರ್ಷವೂ 302 ಮೆ.ವ್ಯಾ. ವಿದ್ಯುತ್ ಪಡೆಯಲಾಗಿದೆ.

ಕಳೆದ ವರ್ಷ ಕೇಂದ್ರ ಗ್ರಿಡ್‌ಗೆ ಒಪ್ಪಿಸಲಾಗಿದ್ದ 150 ಮೆಗಾವ್ಯಾಟ್ ವಿದ್ಯುಚ್ಛಕ್ತಿಯನ್ನೂ ವಾಪಸ್ ಪಡೆದಿದ್ದೇವೆ. ಈ ಹೆಚ್ಚುವರಿ ವಿದ್ಯುತ್ ಡಿಸೆಂಬರ್ ತಿಂಗಳಿನಿಂದ ರಾಜ್ಯಕ್ಕೆ ಲಭ್ಯವಾಗಿದೆ.

ಅನಿರೀಕ್ಷಿತ ಅಥವಾ ಹಠಾತ್ ವಿದ್ಯುತ್ ಬೇಡಿಕೆ ಪೂರೈಸಲು, ಕೇಂದ್ರ ಸರ್ಕಾರವು ನಿಗದಿಪಡಿಸಿರುವಂಥ ವಿದ್ಯುತ್ ವಿನಿಮಯ ಕೇಂದ್ರದಿಂದ ಪಾರದರ್ಶಕವಾಗಿ ವಿದ್ಯುತ್ ಖರೀದಿಸಲಾಗುತ್ತಿದೆ ಎಂದು ಸಚಿವರು ಹೇಳಿದ್ದಾರೆ.

ಕಲ್ಲಿದ್ದಲು ಸಚಿವಾಲಯದಿಂದ ಹೆಚ್ಚುವರಿ ಕಲ್ಲಿದ್ದಲನ್ನು ಸಕಾಲದಲ್ಲಿ ಪಡೆಯಲಾಗಿದೆ ಮತ್ತು ಆಮದು ಮಾಡಿದ ಹೆಚ್ಚಿನ ವಿದೇಶಿ ಕಲ್ಲಿದ್ದಲನ್ನು ದೇಶೀಯ ಕಲ್ಲಿದ್ದಲಿನೊಂದಿಗೆ ಮಿಶ್ರಣ ಮಾಡಲಾಗುತ್ತಿದೆ.

370 ಮೆ.ವ್ಯಾ. ಸಾಮರ್ಥ್ಯದ ಯಲಹಂಕ ಅನಿಲ ಆಧಾರಿತ ವಿದ್ಯುತ್ ಸ್ಥಾವರದಲ್ಲಿ ಶೀಘ್ರದಲ್ಲೇ ಉತ್ಪಾದನೆ ಆರಂಭವಾಗಲಿದೆ ಎಂದರು.

# ದಕ್ಷಿಣದ ಕ್ಷೇತ್ರಗಳಿಗೆ ಇಂದಿನಿಂದ ನಾಮಪತ್ರ ಸಲ್ಲಿಕೆ

(1ನೇ ಪುಟದಿಂದ)ಬೆಂಗಳೂರು ಕೇಂದ್ರ, ಬೆಂಗಳೂರು ದಕ್ಷಿಣ, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಲೋಕಸಭಾ ಕ್ಷೇತ್ರಗಳಿಗೆ ಮೊದಲ ಹಂತದಲ್ಲಿ ನಾಮಪತ್ರ ಸಲ್ಲಿಕೆ ಕಾರ್ಯ ಆರಂಭಗೊಳ್ಳಲಿದೆ.

ಏಪ್ರಿಲ್ 4 ನಾಮಪತ್ರ ಸಲ್ಲಿಕೆಗೆ ಕೊನೆಯ ದಿನ. ಏಪ್ರಿಲ್ 5 ರಂದು ನಾಮಪತ್ರ ಪರಿಶೀಲನೆ ನಡೆಯಲಿದ್ದು, ಏಪ್ರಿಲ್ 8 ರಂದು ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿದೆ.

ಏಪ್ರಿಲ್ 26 ರಂದು ಎಲ್ಲಾ 14 ಕ್ಷೇತ್ರಗಳಿಗೆ ಮತದಾನ ನಡೆಯಲಿದ್ದು, ಮತದಾನ ನಡೆದ 38 ದಿನಗಳ ನಂತರ ಅಂದರೆ, ಜೂನ್ 4ರಂದು ಮತ ಎಣಿಕೆ ನಡೆದು ಅಂದೇ ಫಲಿತಾಂಶ ಪ್ರಕಟಗೊಳ್ಳಲಿದೆ.

ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆಸುವ ಉದ್ದೇಶದಿಂದ ರಾಜ್ಯವನ್ನು ಉತ್ತರ ಮತ್ತು ದಕ್ಷಿಣ ಕರ್ನಾಟಕವಾಗಿ ವಿಭಜಿಸಿರುವ ಆಯೋಗ, ತಲಾ 14 ಕ್ಷೇತ್ರಗಳಿಗೆ ಎರಡು ಹಂತಗಳಲ್ಲಿ ಚುನಾವಣೆ ನಡೆಸುತ್ತಿದೆ. ಚಾಮರಾಜನಗರ, ಕೋಲಾರ, ಚಿತ್ರದುರ್ಗ ಮೂರು ಮೀಸಲು ಕ್ಷೇತ್ರಗಳಾಗಿದ್ದು, ಉಳಿದವು ಸಾಮಾನ್ಯ ಕ್ಷೇತ್ರಗಳಾಗಿವೆ.

ಈ 14 ಕ್ಷೇತ್ರಗಳ ಪೈಕಿ ಕಳೆದ ಚುನಾವಣೆಯಲ್ಲಿ ಬಿಜೆಪಿ 11 ಕ್ಷೇತ್ರಗಳಲ್ಲಿ ಜಯ ಸಾಧಿಸಿದ್ದರೆ, ಉಳಿದ ಮೂರು ಕ್ಷೇತ್ರಗಳಲ್ಲಿ ಜೆಡಿಎಸ್ ಮತ್ತು ಕಾಂಗ್ರೆಸ್ ತಲಾ ಒಂದು ಕ್ಷೇತ್ರದಲ್ಲೂ, ಪಕ್ಷೇತರರು ಒಂದು ಕ್ಷೇತ್ರದಲ್ಲಿ ಜಯ ಗಳಿಸಿದ್ದರು.

ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಮಾಡಿಕೊಂಡು ಕಣಕ್ಕಿಳಿದಿದ್ದವು, ಆದರೆ ಪ್ರಸಕ್ತ ಚುನಾವಣೆಯಲ್ಲಿ ಜೆಡಿಎಸ್, ಎನ್‌ಡಿಎ ಮೈತ್ರಿ ಕೂಟದ ಪಾಲುದಾರನಾಗಿದ್ದು, ಈ ಬಾರಿ ಬಿಜೆಪಿ ಜೊತೆ ಚುನಾವಣಾ ಹೊಂದಾಣಿಕೆ ಮಾಡಿಕೊಂಡು ರಾಜ್ಯದಲ್ಲಿನ ಆಡಳಿತಾರೂಢ ಕಾಂಗ್ರೆಸ್ ಪಕ್ಷವನ್ನು ಎದುರಿಸುತ್ತಿವೆ.

ಮೊದಲ ಹಂತದ ಎಲ್ಲಾ 14 ಕ್ಷೇತ್ರಗಳಲ್ಲೂ ಕಾಂಗ್ರೆಸ್ ಸ್ಪರ್ಧಿಸಲಿದ್ದು, ಬಿಜೆಪಿ 11 ರಲ್ಲೂ, ಜೆಡಿಎಸ್ ಮೂರು ಕ್ಷೇತ್ರಗಳ ಕಣಕ್ಕಿಳಿದು ಹೋರಾಟ ನಡೆಸುತ್ತಿವೆ.

ಕಾಂಗ್ರೆಸ್ ಇನ್ನು ನಾಲ್ಕು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಹೆಸರಿಸಿಲ್ಲ, ಬಿಜೆಪಿ ಚಿತ್ರದುರ್ಗ ಕ್ಷೇತ್ರಕ್ಕೆ ಅಭ್ಯರ್ಥಿ ಪ್ರಕಟಿಸಿಲ್ಲ. ಆದರೆ, ನಾಳೆಯಿಂದಲೇ ಈ ಎಲ್ಲಾ 14 ಕ್ಷೇತ್ರಗಳಿಗೆ ನಾಮಪತ್ರ ಸಲ್ಲಿಕೆ ಆರಂಭವಾಗುತ್ತಿದೆ.

ಈ ಚುನಾವಣೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಎನ್‌ಡಿಎ ಮಿತ್ರ ಪಕ್ಷಗಳು ಬಹಳ ಪ್ರತಿಷ್ಠೆಯಾಗಿ ತೆಗೆದುಕೊಂಡಿವೆ.

ಕರ್ನಾಟಕದಲ್ಲಿ ಹೆಚ್ಚು ಸ್ಥಾನ ಗಳಿಸುವ ಮೂಲಕ ದೆಹಲಿಯಲ್ಲಿ ಕಾಂಗ್ರೆಸ್‌ಗೆ ಬಲ ತರಬೇಕೆಂದು ಸಿದ್ದರಾಮಯ್ಯ ಚುನಾವಣೆಯನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದಾರೆ.

ಇನ್ನು ನರೇಂದ್ರ ಮೋದಿ ಅವರನ್ನು ಮತ್ತೆ ಪ್ರಧಾನಿಯನ್ನಾಗಿ ಮಾಡಲು ರಾಜ್ಯದಿಂದ 28 ಕ್ಷೇತ್ರಗಳಲ್ಲೂ ಎನ್‌ಡಿಎ ಅಭ್ಯರ್ಥಿಗಳು ಜಯ ಗಳಿಸಿ ದೆಹಲಿಗೆ ಉಡುಗೊರೆಯಾಗಿ ಕೊಡಲು ಬಿಜೆಪಿ-ಜೆಡಿಎಸ್ ಮೈತ್ರಿ ಕಾಂಗ್ರೆಸ್ ವಿರುದ್ಧ ಸೆಣಸಾಟಕ್ಕೆ ಇಳಿದಿವೆ.

# ಜೋಶಿ ಬದಲಿಸಲು ದಿಂಗಾಲೇಶ್ವರ ಶ್ರೀ ಗಡುವು

(1ನೇ ಪುಟದಿಂದ) ನನಗೆ ದಿಂಗಾಲೇಶ್ವರ ಸ್ವಾಮೀಜಿ ಅವರ ಬಗ್ಗೆ ಅಪಾರ ಗೌರವವಿದೆ. 30 ವರ್ಷಗಳಿಂದ ಸ್ವಾಮೀಜಿ ಹಾಗೂ ಮಠದ ಜೊತೆ ಒಡನಾಟವಿದೆ. ಶ್ರೀಗಳ ಹೇಳಿಕೆಗಳನ್ನು ಆಶೀರ್ವಾದ ಎಂದು ಭಾವಿಸುತ್ತೇನೆ. ಮುಂದಿನ ದಿನಗಳಲ್ಲಿ ತಪ್ಪು ಕಲ್ಪನೆಗಳಿದ್ದರೆ ನಿವಾರಿಸುತ್ತೇನೆ ಎಂದಿದ್ದಾರೆ.

ಈ ನಡುವೆ ಹೇಳಿಕೆ ನೀಡಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಧಾರವಾಡ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿರುವ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರ ಬದಲಾವಣೆಯ ಪ್ರಶ್ನೆಯೇ ಇಲ್ಲ ಎಂದಿದ್ದಾರೆ.

ಬಹುಶಃ ಶಿರಹಟ್ಟಿ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಜೋಶಿ ಅವರ ಬಗ್ಗೆ ತಪ್ಪಾಗಿ ತಿಳಿದಿರಬೇಕು. ನಾನು ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿ ಮನವೊಲಿಸುತ್ತೇನೆ ಎಂದರು.

ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಬಹಳ ದೊಡ್ಡ ಜನಪ್ರಿಯ ನಾಯಕರು. ಅವರು ಬಹಳ ಅಂತರದಿಂದ ಜಯ ಗಳಿಸುತ್ತಾರೆ. ಲಿಂಗಾಯತ ಸಮಾಜದ ಎಲ್ಲ ಸ್ವಾಮಿಗಳು ನಮ್ಮ ಪರವಾಗಿದ್ದಾರೆ ಎಂದೂ ಯಡಿಯೂರಪ್ಪ ತಿಳಿಸಿದರು.

# ಕೋಲಾರ 'ಕೈ' ಟಿಕೆಟ್‌ಗೆ ಬಂಡಾಯ

(1ನೇ ಪುಟದಿಂದ) ಬಸವರಾಜ ಹೊರಟ್ಟಿ ಅವರನ್ನೂ ಭೇಟಿ ಮಾಡಲು ಮುಂದಾಗಿದ್ದರು.

ವಿಧಾನಸಭಾ ಸದಸ್ಯರು ಮಂಗಳೂರಿಗೆ ತೆರಳಿ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರನ್ನು ಭೇಟಿ ಮಾಡಲು ಬಯಸಿದ್ದರು. ಆದರೆ, ಅವರೇ ಬೆಂಗಳೂರಿಗೆ ಬರುತ್ತಿರುವುದನ್ನು ತಿಳಿದು ಬೆಂಗಳೂರಿನಲ್ಲೇ ಉಳಿದರು. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಸೂಚನೆಯಂತೆ ರಾಜೀನಾಮೆ ಕ್ರಮವನ್ನು ತಡೆದಿರುವುದಾಗಿ ಹೇಳಿದರು.

ಕೋಲಾರದ ಉಸ್ತುವಾರಿ ಸಚಿವರೂ ಆಗಿರುವ ಸಚಿವ ಬಿ.ಎಸ್. ಸುರೇಶ ಅವರು ವಿಧಾನಸೌಧಕ್ಕೆ ಧಾವಿಸಿ, ಶಾಸಕರು ರಾಜೀನಾಮೆ ನೀಡದಂತೆ ಮನವೊಲಿಸಿದರು. ಈ ಬೆಳವಣಿಗೆಗಳ ಕುರಿತು ಚರ್ಚಿಸಲು ಸಿದ್ದರಾಮಯ್ಯ ಅವರು ಸಭೆಯನ್ನೂ ಕರೆದಿದ್ದಾರೆ.

ಈ ಬಗ್ಗೆ ಮಾತನಾಡಿರುವ ನಂಜೇಗೌಡ, ಮುನಿಯಪ್ಪ ಈಗ ಸಚಿವರಾಗಿದ್ದಾರೆ. ಅವರ ಪುತ್ರಿ ರೂಪಕಲಾ ಶಶಿಧರ ಅವರು ಶಾಸಕಿಯಾಗಿದ್ದಾರೆ. ಹೀಗಾಗಿ ಕುಟುಂಬದ ಬದಲು ಪರಿಶಿಷ್ಟರ ಬಲಗೈ ಗುಂಪಿನವರಿಗೆ ಟಿಕೆಟ್ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಮುನಿಯಪ್ಪ, ಹೈಕಮಾಂಡ್, ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ತೀರ್ಮಾನದಂತೆ ಕ್ಷೇತ್ರದ ಎಲ್ಲ ನಾಯಕರೂ ನಡೆದುಕೊಳ್ಳಬೇಕು ಎಂದು ನಿರ್ಧರಿಸಲಾಗಿತ್ತು. ಇಂದಿನದು ಹೊಸ ಬೆಳವಣಿಗೆ. ಈ ಬಗ್ಗೆ ತಿಳಿದಿಲ್ಲ. ಪಕ್ಷದ ನಿರ್ಧಾರಕ್ಕೆ ಬದ್ಧವಾಗಿರುತ್ತೇನೆ ಎಂದರು.

ಈ ನಡುವೆ ಪತ್ರಕರ್ತರೊಂದಿಗೆ ಮಾತನಾಡಿದ ಹೊರಟ್ಟಿ, ಪರಿಷತ್ ಸದಸ್ಯರು ರಾಜೀನಾಮೆ ನೀಡಿಲ್ಲ. ಅವರು ಸಮಯ ಕೇಳಿದ್ದರು. ನಂತರ ರಾಜೀನಾಮೆ ನೀಡುವುದಿಲ್ಲ ಎಂದಿದ್ದಾರೆ ಎಂದು ತಿಳಿಸಿದ್ದಾರೆ.

# ಚಿತ್ರದುರ್ಗದಿಂದ ಕಾರಜೋಳ ಸ್ಪರ್ಧೆ

(1ನೇ ಪುಟದಿಂದ) ಕಾರಜೋಳ ಅವರು ಐದು ಬಾರಿ ಬಾಗಲಕೋಟೆ ಜಿಲ್ಲೆಯ ಮುಧೋಳದಿಂದ ಶಾಸಕರಾಗಿದ್ದಾರೆ. 2023ರಲ್ಲಿ ಕಾಂಗ್ರೆಸ್ ಪಕ್ಷದ ಆರ್.ಬಿ. ತಿಮ್ಮಾಪುರ ಅವರು ಕೋರಜೋಳರನ್ನು ಸೋಲಿಸಿದ್ದರು.

# ಸಚಿವ ತಂಗಡಗಿ ಹೇಳಿಕೆಗೆ ಡಿ. ಬಸವರಾಜ್ ಸಮರ್ಥನೆ

ದಾವಣಗೆರೆ, ಮಾ. 27- ಸಚಿವ ಶಿವರಾಜ್ ತಂಗಡಗಿಯವರು ಪ್ರಧಾನಿ ನರೇಂದ್ರ ಮೋದಿಯವರ ಬಗ್ಗೆ ನೀಡಿರುವ ಹೇಳಿಕೆ ಸರಿಯಾಗಿದೆ ಎಂದು ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಸಮರ್ಥಿಸಿಕೊಂಡಿದ್ದಾರೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತಾಡಿದ ಅವರು, ದೇಶದಲ್ಲಿ ಯುವಕರಿಗೆ ಎರಡು ಕೋಟಿ ಉದ್ಯೋಗ ಕೊಡುವುದಾಗಿ ಹೇಳಿ ಪ್ರಧಾನಿ ಮಾತು ತಪ್ಪಿದ್ದಾರೆ. ಆದರೆ ಈಗಲೂ ಯುವಕರು, ವಿದ್ಯಾರ್ಥಿಗಳು ಜವಾಬ್ದಾರಿ ಇಲ್ಲದೆ ಮೋದಿ ಜಪ ಮಾಡುತ್ತಿದ್ದಾರೆ. ಅದಕ್ಕಾಗಿ ಅಂತವರ ಕಪಾಳಕ್ಕೆ ಹೊಡೆಯಬೇಕೆಂದು ಸಚಿವ ತಂಗಡಗಿ ಆಕ್ರೋಶ ಹೊರ ಹಾಕಿರುವುದರಲ್ಲಿ ತಪ್ಪಿಲ್ಲ ಎಂದರು.

ಪ್ರಧಾನಿ ಭ್ರಷ್ಟಾಚಾರ ನಿರ್ಮೂಲನೆ ಮಾಡುತ್ತಾರೆ ಎಂದು ಸಿಟಿ ರವಿ ಹೇಳಿದ್ದರು. ರವಿ ಅವರು ಈ ಮೊದಲ ಚುನಾವಣೆಯಲ್ಲಿ ಘೋಷಿಸಿದ ಹಾಗೂ ಇಂದಿನ ಆಸ್ತಿ ಎಷ್ಟು ? ಭ್ರಷ್ಟಾಚಾರ ಮಾಡಿಲ್ಲ ಎಂದು ಧರ್ಮಸ್ಥಳದಲ್ಲಿ ಪ್ರಮಾಣ ಮಾಡಲು ತಯಾರಿದ್ದಾರಾ? ಎಂದು ಬಸವರಾಜ್ ಸವಾಲು ಹಾಕಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ಮುಖಂಡರುಗಳಾದ ಹುಲಿಕಟ್ಟೆ ಚಂದ್ರಪ್ಪ, ಕೆ. ಎಂ. ಮಂಜುನಾಥ್, ಎಂ. ಕೆ. ಲಿಯಾಖತ್ ಅಲಿ, ಬಿ. ಹೆಚ್. ಉದಯ ಕುಮಾರ್, ಎನ್. ಎಸ್. ವೀರಭದ್ರಪ್ಪ, ಡಿ. ಶಿವಕುಮಾರ್, ಬಿ.ಎಸ್. ಸುರೇಶ್, ಮುಬಾರಕ್, ವಿನಾಯಕ ಇತರರು ಹಾಜರಿದ್ದರು.

### ನೀರ್ಥಡಿ ಕಲ್ಲಿಂಗಮ್ಮ ನಿಧನ



ದಾವಣಗೆರೆ ತಾಲ್ಲೂಕು ನೀರ್ಥಡಿ ಗ್ರಾಮದ ವಾಸಿ ದಿ. ಶ್ಯಾಗಲೆ ದೇವೇಂದ್ರಪ್ಪನವರ ಧರ್ಮಪತ್ನಿ ಶ್ರೀಮತಿ ನೀರ್ಥಡಿ ಕಲ್ಲಿಂಗಮ್ಮ (67) ಅವರು ದಿನಾಂಕ 27.03.2024ರ ಬುಧವಾರ ಮಧ್ಯಾಹ್ನ 1 ಗಂಟೆಗೆ ನಿಧನರಾಗಿದ್ದಾರೆ. ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 28.03.2024ರ ಗುರುವಾರ ಮಧ್ಯಾಹ್ನ 12.30ಕ್ಕೆ ನೀರ್ಥಡಿ ಗ್ರಾಮದಲ್ಲಿ ನೆರವೇರಿಸಲಾಗುವುದು.

### ಶ್ರೀ ರಾಮು ಶೆಟ್ಟಿ ನಿಧನ



ದಾವಣಗೆರೆ ಬಸವರಾಜ ಪೇಟೆ ನಿವಾಸಿ ರಾಮು ಶೆಟ್ಟಿಯವರು ದಿನಾಂಕ 27.03.2024ರ ಸಂಜೆ 4.30ಕ್ಕೆ ನಿಧನರಾಗಿದ್ದಾರೆ. ಮೃತರುಗೆ ಮೂವರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 28.03.2024ರ ಗುರವಾರ ಮಧ್ಯಾಹ್ನ 1 ಗಂಟೆಗೆ ವೈಕುಂಠಧಾಮದಲ್ಲಿ ನೆರವೇರಿಸಲಾಗುವುದು.

# ನಗರದಲ್ಲಿ ಇಂದು ನ್ಯಾಯವಾದಿಗಳಿಗೆ ನ್ಯಾಯ ವಿಜ್ಞಾನ ಕಾರ್ಯಕ್ರಮ



ಜಿಲ್ಲಾ ವಕೀಲರ ಸಂಘದಿಂದ ವಕೀಲರ ಸಾಂಸ್ಕೃತಿಕ ಸಮುದಾಯ ಭವನದಲ್ಲಿ ಉಪನ್ಯಾಸ ಮಾಲಿಕೆ-7 ನ್ಯಾಯವಾದಿಗಳಿಗೆ ನ್ಯಾಯ ವಿಜ್ಞಾನ ಕಾರ್ಯಕ್ರಮವನ್ನು ಇಂದು ಮಧ್ಯಾಹ್ನ 2.30ಕ್ಕೆ ಆಯೋಜಿಸಲಾಗಿದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷೆ ರಾಜೇಶ್ವರಿ ಎನ್. ಹೆಗಡೆ ಕಾರ್ಯಕ್ರಮ ಉದ್ಘಾಟಿಸುವರು. ಚಿತ್ರದುರ್ಗದ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಡಾ.ನಟರಾಜ್ ಉಪನ್ಯಾಸ ನೀಡುವರು.

ಮುಖ್ಯ ಅತಿಥಿಗಳಾಗಿ ಮಕ್ಕಳ ಸ್ನೇಹಿ ನ್ಯಾಯಾಲಯದ ನ್ಯಾಯಾಧೀಶರಾದ ಎನ್.ಶ್ರೀಪಾದ್, ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶರಾದ ಕೆ.ದಶರಥ್, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ ಶಿವಪ್ಪ ಗಂಗಪ್ಪ ಸಲಗರೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಮಹಾವೀರ ಮ. ಕರೆಣ್ಣವರ ಆಗಮಿಸುವರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್. ಎಚ್. ಅರುಣ ಕುಮಾರ್ ಅಧ್ಯಕ್ಷತೆ ವಹಿಸುವರು.

# ಭದ್ರಾ ಕಾಲುವೆ ಬಳಿ ನಿಷೇಧಾಜ್ಞೆ

(1ನೇ ಪುಟದಿಂದ) ನಿಷೇಧಿತ ಪ್ರದೇಶವೆಂದು ತಹಶೀಲ್ದಾರ್ ಹಾಗೂ ಕಾರ್ಯ ನಿರ್ವಾಹಕ ದಂಡಾಧಿಕಾರಿ ಡಾ. ಎಂ.ಬಿ. ಅಶ್ವತ್ಥ್ ಆದೇಶಿಸಿದ್ದಾರೆ. ಈ ಅವಧಿಯಲ್ಲಿ ಮಾರಕಾಸ್ತ್ರ, ಆಯುಧಗಳನ್ನು ತೆಗೆದುಕೊಂಡು ಹೋಗುವುದು, ಗುಂಪು ಸೇರುವುದು ಮಾಡುವಂತಿಲ್ಲ. ಯಾರಾದರೂ ಕಾನೂನು ಉಲ್ಲಂಘನೆ ಮಾಡಿದಲ್ಲಿ ಕ್ರಮ ಜರುಗಿಸಲಾಗುತ್ತದೆ ಎಂದು ಎಚ್ಚರಿಸಿದ್ದಾರೆ.

# ರಾಣೇಬೆನ್ನೂರು : ಪಂಪ್‌ಸೆಟ್‌ಗಳಿಗೆ ಇಂದು - ನಾಳೆ ವಿದ್ಯುತ್ ವ್ಯತ್ಯಯ

11 ಕೆವಿ ನೀರಾವರಿ ಪಂಪ್‌ಸೆಟ್‌ಗಳ ಮಾರ್ಗಗಳಿಗೆ ವಿದ್ಯುತ್ ಸರಬರಾಜಿನಲ್ಲಿ ಇಂದು ಮತ್ತು ನಾಳೆ ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವ್ಯತ್ಯಯ ಉಂಟಾಗಲಿದೆ.

33 ಕೆವಿ ಗುಡುಗೂರು - ಮೈದೂರು ಸ್ಟೇಷನ್‌ನಿಂದ ಹೊರಡುವ ನೀರಾವರಿ ಪಂಪ್‌ಸೆಟ್‌ಗಳ ಫೀಡರ್‌ಗಳಿಗೆ ರಾತ್ರಿ ವೇಳೆಯಲ್ಲಿ ವಿದ್ಯುತ್ ಸರಬರಾಜು ಮಾಡಲಾಗುವುದು.

# ಕಾಣದ ಕೈಗಳಿಂದ ಅವಕಾಶ ವಂಚಿತನಾಗಿದ್ದೇನೆ : ವಿನಯ್

(1ನೇ ಪುಟದಿಂದ) ಮಾವ- ಅಳಿಯಂದಿರ ಒಪ್ಪಂದದ ರಾಜಕೀಯ ಹಿಂದುಳಿದ ವರ್ಗದವರನ್ನು ಇಂತಹ ಹೀನ ಸ್ಥಿತಿಗೆ ತಳ್ಳಿದೆ ಎಂದು ಗ್ರಾಮದ ಮುಖಂಡರು ಸಭೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿದರು.

ಎಲ್ಲೆಡೆ ಪಕ್ಷೇತರರಾಗಿ ಸ್ಪರ್ಧಿಸಬೇಕೆಂದು ಕೂಗು ಕೇಳಿಬರುತ್ತಿದೆ. ಯಾವುದೇ ಕಾರಣಕ್ಕೂ ಹಿಂದೆ ಸರಿಯದೇ ಹಿಂದುಳಿದ, ದಲಿತರ, ಶೋಷಿತರ, ಧ್ವನಿ ಇಲ್ಲದವರ ಪರವಾಗಿ ನಿಲ್ಲಬೇಕಾಗಿದೆ. ಯಾವುದೇ ಕಾರಣಕ್ಕೂ ಚುನಾವಣೆಯಿಂದ ಹಿಂದೆ ಸರಿಯಬಾರದು ಎಂದು ಒತ್ತಡ ಹೇರಿದರು. ಕಳೆದ ಬಾರಿ ಕೂಡ ಮಂಜಪ್ಪನವರನ್ನು ಅವರು ಚುನಾವಣೆಗೆ ನಿಲ್ಲಿಸಿದಾಗ ಕಾಲಾವಕಾಶವಿಲ್ಲದೇ, ಅವರನ್ನು ಕ್ಷೇತ್ರದ ಅಹಿಂದ ವರ್ಗದ ಹರಕೆಯ ಕುರಿಯನ್ನಾಗಿ ಮಾಡಿದ್ದು ನಮ್ಮ ಕಣ್ಣ ಮುಂದೆ ಇದೆ. ಈ ಚುನಾವಣೆಯಲ್ಲಿ ವಿನಯ್ ಕುಮಾರ್ ಅವರನ್ನು ಬೆಂಬಲಿಸಿ ನಮ್ಮ ಸ್ವಾಭಿಮಾನವನ್ನು ಎತ್ತಿ ತೋರಿಸೋಣ ಎಂದು ಜನಾಭಿಪ್ರಾಯ ಮೂಡಿಬಂತು.

ನಂತರ ವಿನಯ್ ಕುಮಾರ್ ಅವರು, ಹೊನ್ನಾಳಿ ತಾಲ್ಲೂಕಿನ ಕೋಣನಾಯಕನಹಳ್ಳಿ, ಹನುಮಸಾಗರ ತಾಂಡಾ, ಬಳ್ಳೇಶ್ವರ, ಹೊಳೆ ಅರಳಹಳ್ಳಿ. ಬಲಮುರಿ, ಗೋಪಗೊಂಡನಹಳ್ಳಿ, ಹೊಸಕಟ್ಟೆ ಎಸ್. ಮಲ್ಲಾಪುರ, ಚಿಕ್ಕೇರಳ್ಳಿ, ಹತ್ತೂರು, ಮಾದೇನಹಳ್ಳಿ, ಕತ್ತಿಗೆ, ಜೀನಹಳ್ಳಿ, ಗುಡ್ಡಹಳ್ಳಿ, ಬೆಳಗುತ್ತಿ, ರಾಮೇಶ್ವರ, ಯರಗನಾಳು, ಕುದುರೆಕೊಂಡ, ಸೊರೆಹೊನ್ನೇ. ಆರುಂಡಿ, ಕೆಂಚಿಕೊಪ್ಪ, ತೊಗಲಹಳ್ಳಿ. ಸೊರಟೂರು. ಎಚ್ ಕಡದ ಕಟ್ಟೆ. ಮಾರಿಕೊಪ್ಪ ಗ್ರಾಮಗಳಿಗೆ ಭೇಟಿ ನೀಡಿ ಜನ ಅಭಿಪ್ರಾಯ ಪಡೆದರು.

# ಚುನಾವಣಾ ಅಧಿಕಾರಿಗಳು ಆಯೋಗದ ಕಣ್ಣು-ಕಿವಿ

(1ನೇ ಪುಟದಿಂದ) ಯಾವುದೇ ಪಕ್ಷಪಾತ, ನಿರ್ಲಕ್ಷ್ಯತೆ ವಹಿಸುವಂತಿಲ್ಲ ಎಂದರು. ಚೆಕ್‌ಪೋಸ್ಟ್‌ನಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ಆಯಾ ಮಾರ್ಗದಲ್ಲಿ ಸಾಗುವ ವಾಹನಗಳನ್ನು ತಪಾಸಣೆ ಮಾಡಿ ಕಳುಹಿಸಬೇಕು. ಯಾವುದೇ ಸರಕು ಮತದಾರರಿಗೆ ಹಂಚಿಕೆ ಮಾಡುವ ಉದ್ದೇಶ ಇದ್ದಲ್ಲಿ ವಶಕ್ಕೆ ಪಡೆದು ಪ್ರಕರಣ ದಾಖಲಿಸಬೇಕೆಂದು ತಿಳಿಸಿ ಪ್ರಕರಣ ದಾಖಲಿಸುವಾಗ ಇಎಸ್‌ಎಂಎಸ್‌ನಲ್ಲಿ ದಾಖಲು ಮಾಡಬೇಕೆಂದು ತಿಳಿಸಿದರು.

ಜಿಲ್ಲಾ ರಕ್ಷಣಾಧಿಕಾರಿ ಉಮಾ ಪ್ರಶಾಂತ್ ಮಾತನಾಡಿ, ಸಾಮಾಜಿಕ ಜಾಲತಾಣದಲ್ಲಿ ಜಾತಿ, ಧರ್ಮದ ಆಧಾರದಲ್ಲಿ ಪೋಸ್ಟ್ ಮಾಡುವವರ ಮೇಲೆ ನಿಗಾವಹಿಸಬೇಕು. ಎಫ್‌ಎಸ್‌ಟಿ, ಎಸ್‌ಎಸ್‌ಟಿ ತಂಡಗಳಿಗೆ ಬೇಕಾದ ಎಲ್ಲಾ ಬಂದೋಬಸ್ತ್ ಮತ್ತು ಇಲಾಖೆ ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತದೆ ಎಂದರು.

ಚುನಾವಣಾ ವೆಚ್ಚ ಮೇಲ್ವಿಚಾರಣಾ ಸಮಿತಿ ನೋಡಲ್ ಅಧಿಕಾರಿ ಗಿರೀಶ್, ವಾಣಿಜ್ಯ ತೆರಿಗೆ ಇಲಾಖೆ ಸಹಾಯಕ ಆಯುಕ್ತ ಮಂಜುನಾಥ್, ಅಬಕಾರಿ ಉಪ ಆಯುಕ್ತರಾದ ಟಿ.ವಿ.ಶೈಲಜ ಇತರರಿದ್ದರು.

### ಡಮ್ಮಿ ಅಭ್ಯರ್ಥಿಗಳ ಬಗ್ಗೆ ಪರಿಶೀಲಿಸಿ: ಇಟ್ನಾಳ್

ಚುನಾವಣೆಯಲ್ಲಿ ಕೆಲವರು ನಾಮಮಾತ್ರಕ್ಕೆ ನಾಮಪತ್ರ ಸಲ್ಲಿಸಿ ವಾಹನ ಅನುಮತಿ ಪಡೆದು ಬೇರೆಯವರಿಗೆ ನೀಡುತ್ತಾರೆ. ಇದೇ ರೀತಿ ಬೇರೆ ಅಭ್ಯರ್ಥಿಗೆ ಸಹಾಯವಾಗಲೆಂದು ಡಮ್ಮಿ ಅಭ್ಯರ್ಥಿಗಳು ಚುನಾವಣಾ ಕಣದಲ್ಲಿರುತ್ತಾರೆ. ಈ ಬಗ್ಗೆ ಪರಿಶೀಲನೆ ನಡೆಸಬೇಕು ಎಂದು ಜಿಲ್ಲಾ ಪಂಚಾಯ್ತಿ ಸಿಇಓ ಹಾಗೂ ಎಂ.ಸಿ.ಸಿ. ನೋಡಲ್ ಅಧಿಕಾರಿ ಸುರೇಶ್ ಬಿ.ಇಟ್ನಾಳ್ ಹೇಳಿದರು.

ಮತದಾರರ ಮೇಲೆ ಆಮಿಷವೊಡ್ಡಲು ಚೆಕ್‌ಪೋಸ್ಟ್ ಬದಲಾಗಿ ಸ್ವ ಸಹಾಯ ಗುಂಪುಗಳಿಗೆ ನೇರವಾಗಿ ಹಣ ನೀಡುವ ಮೂಲಕ ಹಂಚಿಕೆ ಮಾಡುವ ಸಂಭವವಿರುತ್ತದೆ. ಲೇವಾದೇವಿ ವ್ಯವಹಾರಗಾರರ ಮೂಲಕವೂ ವ್ಯವಹಾರ ನಡೆಯಬಹುದು. ಮತದಾರರಿಗೆ ಯಾವುದೋ ಖಾತೆಯಿಂದ ನೆಫ್ಟ್, ಆರ್.ಟಿ.ಜಿ. ಎಸ್ ಮಾಡಬಹುದು. ಮತಗಟ್ಟೆ ಬಳಿಯೇ ಹಣ ಹಂಚಿಕೆ ಮಾಡುವ ಸಾಧ್ಯತೆ ಇರುತ್ತದೆ. ಆಂಬ್ಯುಲೆನ್ಸ್ ಮೂಲಕ, ವಾಹನದ ಟೈರ್‌ಗಳಲ್ಲಿ, ಬಾನೆಟ್ ಒಳಗೆ, ನೀರು, ಹಾಲಿನ ಟ್ಯಾಂಕರ್‌ನಲ್ಲಿ ಹಣ ಸಾಗಣೆ, ಸರಕು ವಾಹನಗಳಲ್ಲಿ ಹಣ ಸಾಗಣೆ ಸಂಭವವಿರುತ್ತದೆ ಎಂದು ಎಚ್ಚರಿಸಿದರು.


### ಹೆಮ್ಮನಬೇತೂರು ಗ್ರಾಮದ ಸಿದ್ದಮ್ಮ ನಿಧನ



ದಾವಣಗೆರೆ ತಾಲ್ಲೂಕು ಹೆಮ್ಮನಬೇತೂರು ಗ್ರಾಮದ ವಾಸಿ
ಎ.ಬಿ. ನಿಂಗಪ್ಪನವರ ಧರ್ಮಪತ್ನಿ
**ಶ್ರೀಮತಿ ಸಿದ್ದಮ್ಮ**
ಇವರು ದಿನಾಂಕ 27.03.2024ರ ಬುಧವಾರ ಸಂಜೆ 5.30ಕ್ಕೆ ನಿಧನರಾಗಿದ್ದಾರೆ. ಪತಿ, ನಾಲ್ವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 28.03.2024ರ ಗುರುವಾರ ಮಧ್ಯಾಹ್ನ 12 ಕ್ಕೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ಹೆಮ್ಮನಬೇತೂರು ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.
**ದುಃಖತಪ್ತ ಕುಟುಂಬದವರು, ಮೊ : 95913 65459, 99017 20452**


### 8ನೇ ವರ್ಷದ ಪುಣ್ಯಸ್ಮರಣೆ



**ಶ್ರೀಮತಿ ಡಿ.ಟಿ. ಪಾರ್ವತಮ್ಮನವರು**
(ಡಿ. ತೀರ್ಥಲಿಂಗಪ್ಪನವರ ಧರ್ಮಪತ್ನಿ)
ನಿಧನ : 28ನೇ ಮಾರ್ಚ್ 2016

ದೈವಭಕ್ತಿ, ಪರಿಶ್ರಮ, ಶಿಸ್ತುಬದ್ಧ ಜೀವನ ನಡೆಸಿ ನಮ್ಮೆಲ್ಲರ ಬದುಕಿನ ಉತ್ಕರ್ಷವನ್ನು ಸದಾಕಾಲ ಬಯಸಿದ ನೀವು ನಮ್ಮನ್ನಗಲಿ 8 ವರ್ಷಗಳು ಕಳೆದರೂ ನಿಮ್ಮ ನೆನಪು ನಮ್ಮ ಮನದಂಗಳದಲ್ಲಿ ಸದಾ ಹಸಿರಾಗಿಯೇ ಉಳಿದಿದೆ. ಸರಳ ಸಜ್ಜನಿಕೆಯ ಬದುಕು, ನಿಮ್ಮ ಆದರ್ಶ ನಮಗೆ ದಾರಿದೀಪ. ನಿಮ್ಮ ದಿವ್ಯ ಚೇತನಕ್ಕೆ ಪರಮಾತ್ಮನು ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುವ,
**ಸದಾ ನಿಮ್ಮ ನೆನಪಿನಲ್ಲಿ ಕುಟುಂಬ ವರ್ಗದವರು**
**ಫೋ. : 95381 42582, 97424 37766**

### ಪ್ರಥಮ ವರ್ಷದ ಪುಣ್ಯಸ್ಮರಣೆ



**ಶ್ರೀ ಎ.ಕೆ. ನಾಗಪ್ಪನವರು**
ಮಾಜಿ ಸದಸ್ಯರು ಜಿ.ಪಂ. ದಾವಣಗೆರೆ
ಸಂಸ್ಥಾಪಕ ಅಧ್ಯಕ್ಷರು, ಶ್ರೀ ದುರ್ಗಾರಂಗನಾಥಸ್ವಾಮಿ ವಿದ್ಯಾಸಂಸ್ಥೆ (ರಿ) ಬೂದಿಹಾಳು
(ಜನನ:10-05-1954, ಮರಣ:28-03-2023)

**ನೀವು ನಮ್ಮನ್ನಗಲಿ ಒಂದು ವರ್ಷ ಕಳೆದರೂ ನಿಮ್ಮ ನೆನಪು ನಮ್ಮೆಲ್ಲರ ಮನದಲ್ಲಿ ಸದಾ ಅಮರವಾಗಿದೆ.**
ನಿಮ್ಮ ಸ್ಮರಣೆಯಲ್ಲಿರುವ...
ಪುತ್ರ : **ಬಿ.ಎನ್. ರಂಗನಾಥಸ್ವಾಮಿ**
ಕಾರ್ಯದರ್ಶಿಗಳು, ಶ್ರೀ ದುರ್ಗಾರಂಗನಾಥಸ್ವಾಮಿ ವಿದ್ಯಾಸಂಸ್ಥೆ (ರಿ) ಬೂದಿಹಾಳು
**ಮತ್ತು ಕುಟುಂಬ ವರ್ಗದವರು,**
**ಮುಖ್ಯೋಪಾಧ್ಯಾಯರು ಮತ್ತು ಸಿಬ್ಬಂದಿ ವರ್ಗ,**
**ಶ್ರೀ ಪಿ & ಬಿ ಬಸವನಗೌಡ್ರುರವರ ಪ್ರೌಢ ಶಾಲೆ ಹಾಗೂ**
**ಪ್ರಾಂಶುಪಾಲರು ಹಾಗೂ ಸಿಬ್ಬಂದಿ ವರ್ಗ,**
**ಸರ್.ಎಂ.ವಿ. ಪದವಿ ಪೂರ್ವ ಕಾಲೇಜು,**
**ಬೂದಿಹಾಳು, ಹರಿಹರ ತಾಲ್ಲೂಕು. ಮೊ : 73536 90666**


# ಎಸ್ಸೆಸ್ಸೆಲ್ಸಿ: ಕೊಠಡಿ ಮೇಲ್ವಿಚಾರಕ ಅಮಾನತ್ತು

(1ನೇ ಪುಟದಿಂದ) ಪ್ರತಿ ಪರೀಕ್ಷಾ ಕೇಂದ್ರದ ಕೊಠಡಿಯಲ್ಲಿ ವೆಬ್ ಕಾಸ್ಟಿಂಗ್ ಮಾಡಲಾಗಿದ್ದು ನೇರ ದೃಶ್ಯಾವಳಿಗಳನ್ನು ಶಿಕ್ಷಣ ಇಲಾಖೆ ಆಯುಕ್ತರು ವೀಕ್ಷಣೆ ಮಾಡುತ್ತಾರೆ. ಆಯುಕ್ತರು ನೀಡಿದ ನಿರ್ದೇಶನದ ಮೇರೆಗೆ ಹರಿಹರ ತಾಲ್ಲೂಕು ಬನ್ನಿಕೋಡು ಕರ್ನಾಟಕ ಪಬ್ಲಿಕ್ ಸ್ಕೂಲ್‌ನ ಚಿತ್ರಕಲಾ ಶಿಕ್ಷಕ ರಿಯಾಜ್ ಅಹಮದ್ ಅವರನ್ನು ಅಮಾನತ್ತು ಮಾಡಲಾಗಿದೆ.

## ಸಂಕ್ಷಿಪ್ತ ಸುದ್ದಿ

**ಬಿಜೆಪಿಗೆ ಸೇರಿದ ಎಎಪಿ ಸಂಸದ**
ಚಂಡೀಘಡ : ಪಂಜಾಬ್‌ನ ಜಲಂಧರ್ ಕ್ಷೇತ್ರದ ಆಮ್ ಆದ್ಮಿ ಪಾರ್ಟಿ ಸಂಸದ ಸುಶೀಲ್ ರಿಂಕು ಅವರು ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ವರ್ಷದ ಹಿಂದಷ್ಟೇ ಅವರು ಆಮ್ ಆದ್ಮಿ ಪಾರ್ಟಿಗೆ ಸೇರ್ಪಡೆಯಾಗಿದ್ದರು. ಈಗ ಪಕ್ಷಕ್ಕೆ ವಿದಾಯ ಹೇಳಿದ್ದಾರೆ. ಮುಂಬರುವ ಲೋಕಸಭಾ ಚುನಾವಣೆಗಾಗಿ ಅವರಿಗೆ ಜಲಂಧರ್ ಕ್ಷೇತ್ರದಿಂದ ಟಿಕೆಟ್ ನೀಡಲಾಗಿತ್ತು.

**ಕೇಜ್ರಿವಾಲ್ ಬಂಧನದಿಂದ ಎ.ಎ.ಪಿ.ಗೆ ಲಾಭ : ಆತಿಶಿ**
ನವದೆಹಲಿ : ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಬಂಧನದಿಂದ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಆಮ್ ಆದ್ಮಿ ಪಾರ್ಟಿಗೆ ಲಾಭವಾಗಲಿದೆ. ಪಕ್ಷಕ್ಕೆ ಅನುಕಂಪದ ಮತಗಳು ಸಿಗಲಿವೆ ಎಂದು ದೆಹಲಿ ಸಚಿವ ಆತಿಶಿ ಹೇಳಿದ್ದಾರೆ.

**ಕೇಜ್ರಿವಾಲ್‌ಗೆ ಮಧ್ಯಂತರ ಪರಿಹಾರ ನೀಡಲು ಹೈಕೋರ್ಟ್ ನಕಾರ**
ನವದೆಹಲಿ : ಅಬಕಾರಿ ನೀತಿ ಹಗರಣದಲ್ಲಿ ಸಿಲುಕಿ ಬಂಧಿತರಾಗಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಮಧ್ಯಂತರ ಪರಿಹಾರ ನೀಡಲು ದೆಹಲಿ ಹೈಕೋರ್ಟ್ ನಿರಾಕರಿಸಿದೆ. ಈ ವಿಷಯದ ಬಗ್ಗೆ ಏಪ್ರಿಲ್ 3ರಂದು ವಿಚಾರಣೆ ನಡೆಸಲಾಗುವುದು ಎಂದು ಹೈಕೋರ್ಟ್ ಹೇಳಿದೆ.

**ತಿಹಾರ್ ಜೈಲು ಸೇರಿದ ಕವಿತಾ**
ನವದೆಹಲಿ : ದೆಹಲಿ ಅಬಕಾರಿ ನೀತಿ ಪ್ರಕರಣದಲ್ಲಿ ಬಂಧಿತ ಭಾರತ ರಾಷ್ಟ್ರ ಸಮಿತಿ ನಾಯಕಿ ಕೆ. ಕವಿತಾ ಅವರು, ತಿಹಾರ್ ಜೈಲಿಗೆ ರವಾನೆಯಾಗಿದ್ದಾರೆ. ಅವರು ಮೊದಲ ಬಾರಿಗೆ ಜೈಲೂಟ ಸೇವಿಸುವಂತಾಗಿದೆ. ಅವರನ್ನು ಜೈಲಿನ ಆರನೇ ಸಂಖ್ಯೆಯ ಕೋಣೆಯಲ್ಲಿ ಇರಿಸಲಾಗಿದೆ. ಅವರು ಇತರೆ ಇಬ್ಬರು ಮಹಿಳೆಯರೊಂದಿಗೆ ಕೋಣೆ ಹಂಚಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

**ಎನ್.ಐ.ಎ. ಮುಖ್ಯಸ್ಥರಾಗಿ ವಸಂತ್ ದಾತೆ**
ನವದೆಹಲಿ : ಸದಾನಂದ ವಸಂತ್ ದಾತೆ ಅವರನ್ನು ರಾಷ್ಟ್ರೀಯ ತನಿಖಾ ಸಂಸ್ಥೆಯಾದ ಎನ್.ಐ.ಎ. ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ. ಮುಂಬೈ ಮೇಲೆ 26/11 ಉಗ್ರವಾದಿ ದಾಳಿಯ ವೇಳೆ ಅವರು ದಿಟ್ಟ ಹೋರಾಟ ನಡೆಸಿದ್ದರು. ಪ್ರಜ್ಞೆ ತಪ್ಪಿ ಬೀಳುವವರೆಗೂ ಅವರು ಉಗ್ರರನ್ನು ಹಿಮ್ಮೆಟ್ಟಿಸುವ ಹೋರಾಟದಲ್ಲಿ ಭಾಗಿಯಾಗಿದ್ದರು.

**ಮಮತಾ ಕುರಿತು ಆಕ್ಷೇಪಾರ್ಹ ಮಾತು : ಆಯೋಗದ ನೋಟಿಸ್**
ಕೊಲ್ಕೊತಾ : ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಬಗ್ಗೆ ಆಕ್ಷೇಪಾರ್ಹ ಮಾತುಗಳನ್ನು ಆಡಿದ್ದಕ್ಕಾಗಿ ಬಿಜೆಪಿ ನಾಯಕ ದಿಲೀಪ್ ಗೋಷ್ ಕ್ಷಮೆ ಯಾಚಿಸಿದ್ದಾರೆ. ಚುನಾವಣಾ ಆಯೋಗ ಅವರಿಗೆ ಈ ಹೇಳಿಕೆಗಳಿಗಾಗಿ ನೋಟಿಸ್ ಕಳಿಸಿದೆ.

**ಚುನಾವಣಾ ಬಾಂಡ್ ಕುರಿತು ಮಾತನಾಡಲು ಯಾರಿಗೂ ನೈತಿಕ ಹಕ್ಕಿಲ್ಲ : ಸೀತಾರಾಮನ್**
ನವದೆಹಲಿ : ಬಹುತೇಕ ಎಲ್ಲ ಪ್ರಮುಖ ಪಕ್ಷಗಳು ಚುನಾವಣಾ ಬಾಂಡ್‌ಗಳನ್ನು ಪಡೆದುಕೊಂಡು ನಗದಾಗಿ ಪರಿವರ್ತಿಸಿಕೊಂಡಿವೆ. ಹೀಗಾಗಿ ಇದರ ಕಾನೂನು ಕುರಿತು ಮಾತನಾಡಲು ಯಾರಿಗೂ ನೈತಿಕ ಹಕ್ಕಿಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

# ಆರೋಗ್ಯಪೂರ್ಣ ಸಮಾಜಕ್ಕೆ ನೈತಿಕ ಮೌಲ್ಯಗಳು ಅಗತ್ಯ

ಬಾಳೆಹೊನ್ನೂರು, ಮಾ. 27 - ಸುಖ,ಶಾಂತಿದಾಯಕ ಬದುಕಿಗೆ ಧರ್ಮ ಮತ್ತು ಧರ್ಮಾಚರಣೆ ಮುಖ್ಯ. ಉತ್ತಮ ಸಮಾಜ ನಿರ್ಮಾಣಕ್ಕೆ ಶಾಸ್ತ್ರ ಮತ್ತು ಶಸ್ತ್ರದ ಭಯ ಇರಬೇಕಂತೆ. ಇವೆರಡನ್ನೂ ಮನುಷ್ಯ ಮೀರಿ ನಡೆಯುತ್ತಿರುವ ಕಾರಣ ಜೀವನದಲ್ಲಿ ಶಾಂತಿ, ನೆಮ್ಮದಿಯಿಲ್ಲ. ಆರೋಗ್ಯ ಪೂರ್ಣ ಸಮಾಜ ನಿರ್ಮಾಣಕ್ಕೆ ನೈತಿಕ ಮೌಲ್ಯಗಳ ಸಂರಕ್ಷಣೆಯ ಅಗತ್ಯತೆ ಬಹಳಷ್ಟಿದೆ ಎಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಇಲ್ಲಿನ ಶ್ರೀ ರಂಭಾಪುರಿ ಪೀಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ಕ್ಷೇತ್ರನಾಥ ವೀರಭದ್ರಸ್ವಾಮಿ ಮಹಾರಥೋತ್ಸವದ ಅಂಗ ವಾಗಿ ಜರುಗಿದ ನೈತಿಕ ಮೌಲ್ಯಗಳ ಸಂರಕ್ಷಣೆ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡುತ್ತಿದ್ದರು.

ಮನುಷ್ಯ ಜೀವನದಲ್ಲಿ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಎಂಬ ಚತುರ್ವಿಧ ಪುರುಷಾರ್ಥಗಳಲ್ಲಿ ಒಂದನ್ನಾದರೂ ಸಂಪಾದಿಸದಿದ್ದರೆ ಜೀವನ ವ್ಯರ್ಥವಾಗುವುದು. ಜೀವನ ಹೂದೋಟದಲ್ಲಿ ಅರಳುವ ಹೂಗಳೆಷ್ಟೋ, ಬಾಡುವ ಜೀವಗಳು ಎಷ್ಟೋ ಹೇಳಲಾಗದು. ಅವರವರ ಬದುಕಿನಲ್ಲಿ ಅಳವಡಿಸಿಕೊಂಡ ನೀತಿ ನಿಯತ್ತುಗಳೇ ಕಾರಣವಾಗುತ್ತವೆ ಎಂದು ಉದಾಹರಣೆಗಳೊಂದಿಗೆ ಹೇಳಿದರು.

ಭೌತಿಕ ಬದುಕಿನ ಸಂಪನ್ಮೂಲಗಳಲ್ಲಿ ಸಿರಿ ಸಂಪತ್ತಿನ ಸಂಗ್ರಹ ಮಾನವನಿಗೆ ಸಂತೃಪ್ತಿ ತಂದು ಕೊಡಲಾರವು. ಇದರೊಂದಿಗೆ ಒಂದಿಷ್ಟಾದರೂ ಅಧ್ಯಾತ್ಮ ಚಿಂತನೆ ಇರಬೇಕಾಗುತ್ತದೆ. ಇಂದು ಎಲ್ಲೆಡೆ ಶಾಂತಿಗಾಗಿ ಹುಡುಕಾಟ ನಡೆದಿದೆ. ಆದರೆ ಕಳೆದು ಹೋದ ಸ್ಥಾನದಲ್ಲಿಲ್ಲ. ಬೇರೆಲ್ಲಿಯೋ ಅನ್ವೇಷಣೆ ನಡೆಯುತ್ತಿದೆ. ಮಂತ್ರ, ತೀರ್ಥ, ಗುರು, ದೈವ, ದೇವರು ಮತ್ತು ವೈದ್ಯರಲ್ಲಿ ಯಾವ ಭಾವನೆಗಳನ್ನು ಇಟ್ಟುಕೊಂಡು ನಡೆಯುತ್ತೇವೆಯೋ ಅದಕ್ಕೆ ತಕ್ಕ ಫಲಗಳನ್ನು ಮನುಷ್ಯ ಪಡೆಯುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ಶ್ರೀಗಳು ಪ್ರತಿಪಾದಿಸಿದರು.

ನೀತಿಯಿಲ್ಲದ ಶಿಕ್ಷಣ ಭೀತಿ ಇಲ್ಲದ ಶಾಸನ, ಮಿತಿ ಇಲ್ಲದ ಜೀವನ, ಸೀಮಾತೀತವಾದ ಸ್ವಾತಂತ್ರ್ಯ ಇವು ರಾಷ್ಟ್ರ ವಿಘಾತಗಳೆಂದು ಶ್ರೀಮದ್ ರಂಭಾಪುರಿ ವೀರಗಂಗಾಧರ ಜಗದ್ಗುರುಗಳು ನಿರೂಪಿಸಿದ್ದನ್ನು ಯಾರೂ ಮರೆಯಲಾಗದು ಎಂದು ನುಡಿದರು.

ಸಮಾರಂಭವನ್ನು ಚಿಕ್ಕಮಗಳೂರು ಶಾಸಕ ಹೆಚ್.ಡಿ. ತಮ್ಮಯ್ಯ ಹಾಗೂ ಮೈಸೂರು ಜಪದಕಟ್ಟೆ ಮಠದ ಡಾ॥ ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು.



ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಕಾರ್ಯಕ್ರಮದಲ್ಲಿ ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು

ಶಾಸಕ ಹೆಚ್.ಡಿ. ತಮ್ಮಯ್ಯ ಮಾತನಾಡಿ, ಸ್ವಸ್ಥ ಸಮಾಜ ಕಟ್ಟಿ ಬೆಳೆಸಲು ನೈತಿಕ, ನೀತಿ, ರೀತಿಗಳ ಪರಿಪಾಲನೆಯ ಅಗತ್ಯವಿದೆ. ಸಂಪತ್ತಿನ ಬದುಕಿನಲ್ಲಿ ಬಾಳುವ ಮನುಷ್ಯನಿಗೆ ಗುಣವಂತರ ಗುಣಾದರ್ಶಗಳು ಕಾಣಲಾರವು. ಅನ್ಯಾಯ, ಅಸತ್ಯ, ಹೇಳುವ ಜನರು ಹೆಚ್ಚಿರುವಾಗ ಸತ್ಯವಂತರು ಸುಮ್ಮನಿರುವ ಕಾಲ ಬಂದಿದೆ. ಸರ್ವೋದಯದ ಬಾಳಿಗೆ ಸಂತ ಮಹಾಂತರು ಶ್ರಮಿಸಿದ್ದಾರೆ. ಅನ್ನ ದಾನ, ವಿದ್ಯಾ ದಾನ ಮಾಡಿದ ಕೀರ್ತಿ ವೀರಶೈವ ಮಠಗಳಿಗೆ ಸಲ್ಲುತ್ತದೆ ಎಂದರು.

ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಕವಲೇದುರ್ಗ ಭುವನಗಿರಿ ಸಂಸ್ಥಾನ ಮಠದ ಶ್ರೀ ಮರುಳಸಿದ್ಧ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ವೈಚಾರಿಕತೆಯ ಹೆಸರಿನಲ್ಲಿ ಸತ್ಯ, ಸಂಸ್ಕೃತಿ ಮತ್ತು ಪರಂಪರೆಗಳ ಬಗೆಗೆ ನಿರ್ಲಕ್ಷ್ಯ ಮನೋಭಾವ ಹೆಚ್ಚುತ್ತಿದೆ. ಎಲ್ಲಿ ನೋಡಿದಲ್ಲಿ ಮೋಸ ವಂಚನೆ ಕುಯುಕ್ತಿ ಜನರು ಹೆಚ್ಚುತ್ತಿರುವಾಗ ಸಾತ್ವಿಕರು ಮೌನ ವಹಿಸುವುದು ಅನಿವಾರ್ಯವಾಗಿದೆ. ಮಾತಿನಿಂದಲೇ ಸ್ವರ್ಗ ತೋರಿಸಬಲ್ಲೆ ಎಂದು ಹೇಳುವವರು ಇರುವಾಗ ಸಾಧನೆ, ಶ್ರಮ ವಹಿಸಿ ಕೆಲಸ ಮಾಡುವವರನ್ನು ಗುರುತಿಸುವವರು ಬಹಳ ವಿರಳರಾಗಿದ್ದಾರೆ. ಸಾತ್ವಿಕ ತಾತ್ವಿಕ ಮೌಲ್ಯಾಧಾರಿತ ಚಿಂತನಗಳನ್ನು ಸಂರಕ್ಷಿಸುವ ಅವಶ್ಯಕತೆ ಬಹಳಷ್ಟಿದೆ ಎಂದರು.

ಬೀರೂರು ಶ್ರೀಮದ್‌ರಂಭಾಪುರಿ ಖಾಸಾ ಶಾಖಾ ಮಠದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಪ್ರಾಸ್ತಾವಿಕ ನುಡಿದರು.

ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಶಂಕರ ದೇವರ ಮಠ ಚಿಕ್ಕಮಗಳೂರು, ಶಾಂತಮಲ್ಲ ಶಿವಾಚಾರ್ಯ ಸ್ವಾಮೀಜಿ ಕಿಲ್ಲಾ ಬೃಹನ್ಮಠ ರಾಯಚೂರು, ರೇವಣ ಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ, ಶ್ರೀನಿವಾಸ ಸರಡಗಿ, ಅಭಿನವ ರಾಚೋಟೇಶ್ವರ ಶಿವಾಚಾರ್ಯ ಸ್ವಾಮೀಜಿ ಸೋಮವಾರ ಪೇಟೆ ರಾಯಚೂರು ಇವರು ನುಡಿ ತರಂಗದಲ್ಲಿ ಉಪದೇಶಾಮೃತ ನೀಡಿದರು.

ಎಡೆಯೂರು ರೇಣುಕ ಶಿವಾಚಾರ್ಯ ಸ್ವಾಮಿಗಳು ಮುಕ್ತಿ ಮಂದಿರದ ವಿಮಲ ರೇಣುಕ ಮುಕ್ತಿಮುನಿ ಶಿವಾಚಾರ್ಯ ಸ್ವಾಮಿಗಳು ಉಪಸ್ಥಿತರಿದ್ದರು.

ಕೇದಾರ ಶಿವಶಾಂತವೀರ ಶಿವಾಚಾರ್ಯ ಸ್ವಾಮಿಗಳು ಹಿರೇಮಠ ಚನ್ನಗಿರಿ, ವೀರಸಂಗಮೇಶ್ವರ ಶಿವಾಚಾರ್ಯ ಸ್ವಾಮಿ ಗಳು ಹಿರೇಮಠ ಚಳಗೇರಿ, ತೆಂಡೇಕೆರೆ ಗಂಗಾಧರ ಶಿವಾಚಾರ್ಯ ಸ್ವಾಮಿಗಳು, ಹಾರನಹಳ್ಳಿ ಶಿವಯೋಗಿ ಶಿವಾಚಾರ್ಯ ಸ್ವಾಮಿ ಗಳಿಗೆ ಶ್ರೀ ರಂಭಾಪುರಿ ಜಗದ್ಗುರುಗಳು ಗುರುರಕ್ಷೆ ನೀಡಿ ಆಶೀರ್ವದಿಸಿದರು. ಕನ್ನೂರು-ಸಿಂಧನೂರಿನ ಸೋಮನಾಥ ಶಿವಾಚಾರ್ಯ ಸ್ವಾಮಿಗಳು ಸ್ವಾಗತಿಸಿದರು. ಗುರುಲಿಂಗಯ್ಯ ಹಿರೇಮಠ ಹಿತ್ತಲಶಿರೂರ ಇವರಿಂದ ಭಕ್ತಿ ಗೀತೆ ಜರುಗಿತು. ಶ್ರೀ ರಂಭಾಪುರಿ ಪೀಠದ ಗಿರಿಜಾ ಕಲ್ಲೋಳಿ ಮಠ ಮತ್ತು ಲಾವಣ್ಯ ಮಂಜುನಾಥ ನಿರೂಪಿಸಿದರು.

## ದೊಣೆಹಳ್ಳಿ ದಾಸೋಹ ಸಂಸ್ಕೃತಿ ಉತ್ಸವದಲ್ಲಿ ಇಂದು

ಜಗಳೂರು ತಾಲ್ಲೂಕಿನ ದೊಣೆಹಳ್ಳಿ ಗ್ರಾಮದ ಶ್ರೀ ಶರಣ ಬಸವೇಶ್ವರ ದಾಸೋಹ ಮಠದ ವತಿಯಿಂದ ನಡೆಯುತ್ತಿರುವ ದಾಸೋಹ ಸಂಸ್ಕೃತಿ ಉತ್ಸವದಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ಉಚಿತ ಆರೋಗ್ಯ ತಪಾಸಣಾ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಅಡವಿಹಳ್ಳಿ ಹಾಲಸ್ವಾಮಿ ಮಠದ ಶ್ರೀ ವೀರಗಂಗಾಧರ ಹಾಲಸ್ವಾಮಿಗಳು ಸಾನ್ನಿಧ್ಯ ವಹಿಸುವರು.

ನೇತ್ರ ತಜ್ಞರೂ, ಕೂಡ್ಲಿಗಿ ಶಾಸಕರಾದ ಎನ್.ಟಿ. ಶ್ರೀನಿವಾಸ್ ಅಧ್ಯಕ್ಷತೆ ವಹಿಸಲಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಡಿ.ಟಿ. ರಾಘವನ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಡಾ. ಪ್ರಫುಲ್ ತುಮಾಟಿ, ಡಾ. ಹೆಚ್. ಆರ್. ಶಂಕ್ರಪ್ಪ, ಡಾ. ಹಾಲಸ್ವಾಮಿ ಕಂಬಾಳಿಮಠ, ಬಳ್ಳಾರಿ ಜಿ.ಪಂ. ಮಾಜಿ ಸದಸ್ಯ ಹೆಚ್. ರೇವಣ್ಣ, ಜಗಳೂರು ತಾ.ಪಂ. ಮಾಜಿ ಅಧ್ಯಕ್ಷ ಗಡಿಮಾಕುಂಟೆ ಶಿವಕುಮಾರ್, ಜಿ.ಪಂ. ಮಾಜಿ ಸದಸ್ಯ ಕೆ.ಪಿ. ಪಾಲಯ್ಯ, ತಾ.ಪಂ. ಸದಸ್ಯ ಟಿ. ಬಸವರಾಜ್, ಗ್ರಾ.ಪಂ. ಮಾಜಿ ಅಧ್ಯಕ್ಷ ಆರ್. ವೀರೇಶ್ ಮತ್ತಿತರರು ಭಾಗವಹಿಸಲಿದ್ದಾರೆ.

ಕ್ಯಾನ್ಸರ್ ತಜ್ಞ ಡಾ. ಇಬ್ರಾಹಿಂ ನಾಗನೂರು ಉಪನ್ಯಾಸ ನೀಡಲಿದ್ದು, ಡಾ. ಜಿ.ವಿ. ಶಿವಕುಮಾರ್, ಡಾ.ಎ.ಟಿ. ರಾಕೇಶ, ಡಾ.ಹೆಚ್.ಜೆ. ಪ್ರಭು ಅವರನ್ನು ಗೌರವಿಸಲಾಗುವುದು.

## ಕಡು ಭ್ರಷ್ಟರಿಗೆ ಬಿಜೆಪಿಯಲ್ಲಿ ಜಾಗ : ಕಾಂಗ್ರೆಸ್ ತರಾಟೆ

ನವದೆಹಲಿ, ಮಾ. 27 – ಗಣಿ ಧಣಿ ಜನಾರ್ದನ ರೆಡ್ಡಿ ಅವರು ಬಿಜೆಪಿಗೆ ಮರಳಿರುವುದನ್ನು ಟೀಕಿಸಿರುವ ಕಾಂಗ್ರೆಸ್ ಪಕ್ಷ, ದೇಶದ ಅತ್ಯಂತ ಭ್ರಷ್ಟರಿಗೆ ಬಿಜೆಪಿ ಜಾಗ ಮಾಡಿಕೊಡುತ್ತಿದೆ ಎಂದು ಹೇಳಿದೆ. ಭ್ರಷ್ಟರಿಗೆ ಬಿಜೆಪಿ ಕೆಂಪು ಹಾಸಿನ ಸ್ವಾಗತ ನೀಡುತ್ತಿದೆ. ಭ್ರಷ್ಟಾಚಾರ ವಿರೋಧಿಸಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮಾಡುತ್ತಿರುವ ಭಾಷಣ ಪೊಳ್ಳು ಎಂದೂ ಕಾಂಗ್ರೆಸ್ ಹೇಳಿದೆ. ಮಾಜಿ ಸಚಿವ ಜನಾರ್ದನ ರೆಡ್ಡಿ ಅವರು ಸೋಮವಾರ ಬಿಜೆಪಿಗೆ ಮರಳಿದ್ದರು. ಗಂಗಾವತಿ ಶಾಸಕ ರೆಡ್ಡಿ ವಿರುದ್ಧ ಅಕ್ರಮ ಹಣಕಾಸಿನ ಪ್ರಕರಣವಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ರೆಡ್ಡಿ ಕೆ.ಆರ್.ಪಿ.ಪಿ. ಎಂಬ ಪಕ್ಷ ರಚಿಸಿಕೊಂಡಿದ್ದರು. ಅದಕ್ಕೂ ಮುಂಚೆ ರೆಡ್ಡಿ ಎರಡು ದಶಕಗಳಿಂದ ಬಿಜೆಪಿಯಲ್ಲಿದ್ದರು.

## ಲೋಕಸಭೆಗೆ ಸ್ಪರ್ಧಿಸುವಷ್ಟು ಹಣ ಇಲ್ಲ
### ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್



ನವದೆಹಲಿ, ಮಾ. 27 – ಲೋಕಸಭಾ ಚುನಾವಣೆಗೆ ಸ್ಪರ್ಧಿಸುವಷ್ಟು ಹಣ ನನ್ನ ಬಳಿ ಇಲ್ಲ. ಹೀಗಾಗಿ ಲೋಕಸಭಾ ಕ್ಷೇತ್ರವೊಂದರಿಂದ ಸ್ಪರ್ಧಿಸುವಂತೆ ಪಕ್ಷ ಪ್ರಸ್ತಾಪಿಸಿದ್ದನ್ನು ಒಪ್ಪಲು ಸಾಧ್ಯವಾಗಲಿಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ಹಾಗೂ ಬಿಜೆಪಿ ನಾಯಕಿ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಆಂಧ್ರ ಪ್ರದೇಶ ಇಲ್ಲವೇ ತಮಿಳುನಾಡಿನಿಂದ ಸ್ಪರ್ಧಿಸುವಂತೆ ಬಿಜೆಪಿ ಅಧ್ಯಕ್ಷ ಜೆ.ಬಿ. ನಡ್ಡಾ ನನಗೆ ಆಯ್ಕೆ ನೀಡಿದ್ದರು ಎಂದು ಸೀತಾರಾಮನ್ ತಿಳಿಸಿದ್ದಾರೆ.

ಈ ಬಗ್ಗೆ ವಾರ – ಹತ್ತು ದಿನಗಳ ಕಾಲ ಯೋಚಿಸಿದೆ. ನಂತರ ನಾನು ಚುನಾವಣೆಗೆ ಸ್ಪರ್ಧಿಸಲು ಸಾಧ್ಯವಾಗುವುದಿಲ್ಲ ಎಂದು ತಿಳಿಸಿದೆ. ಚುನಾವಣೆಗೆ ಸ್ಪರ್ಧಿಸುವಷ್ಟು ಹಣ ನನ್ನ ಬಳಿ ಇಲ್ಲ ಎಂದವರು ಹೇಳಿದರು.

ಆಂಧ್ರ ಪ್ರದೇಶ ಇಲ್ಲವೇ ತಮಿಳುನಾಡಿನಲ್ಲಿ ಎಲ್ಲೇ ಸ್ಪರ್ಧಿಸಿದರೂ ನಾನು ಸಮಸ್ಯೆ ಎದುರಿಸಬೇಕಾಗುತ್ತದೆ. ಗೆಲ್ಲುವ ಹಲವಾರು ಮಾನದಂಡಗಳ ಬಗ್ಗೆ ಪ್ರಶ್ನೆಗಳನ್ನು ಎದುರಿಸಬೇಕಾಗುತ್ತದೆ. ನೀವು ಯಾವ ಸಮುದಾಯದವರು ಇಲ್ಲವೇ ಯಾವ ಧರ್ಮದವರು ಎಂಬ ಪ್ರಶ್ನೆ ಎದುರಾಗುತ್ತದೆ. ನೀವು ಈ ಪ್ರಾಂತ್ಯದವರೇ ಎಂಬ ಪ್ರಶ್ನೆಗೂ ಉತ್ತರಿಸಬೇಕಾಗುತ್ತದೆ. ಹೀಗಾಗಿ ನಾನು ಸ್ಪರ್ಧಿಸಲು ಸಾಧ್ಯವಾಗುವುದಿಲ್ಲ ಎಂದು ತಿಳಿಸಿದೆ ಎಂದು ಸೀತಾರಾಮನ್ ಹೇಳಿದ್ದಾರೆ.

ಅವರು ನನ್ನ ವಾದ ಒಪ್ಪಿಕೊಂಡಿದ್ದಕ್ಕೆ ನಾನು ಕೃತಜ್ಞಳಾಗಿದ್ದೇನೆ. ಹೀಗಾಗಿ ನಾನು ಸ್ಪರ್ಧಿಸುತ್ತಿಲ್ಲ ಎಂದು ಸೀತಾರಾಮನ್ ತಿಳಿಸಿದ್ದಾರೆ.

ಟೈಮ್ಸ್ ನೌ ಸಂವಾದದಲ್ಲಿ ಮಾತನಾಡುವಾಗ ಅವರು ಈ ಹೇಳಿಕೆ ನೀಡಿದ್ದಾರೆ.

ದೇಶದ ಹಣಕಾಸು ಸಚಿವೆಗೇ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವಷ್ಟು ಹಣವಿಲ್ಲವೇ? ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ದೇಶದ ಸಂಚಿತ ನಿಧಿ ತಮಗೆ ಸೇರಿದ್ದಲ್ಲ ಎಂದು ಹೇಳಿದರು.

ನನ್ನ ವೇತನ, ನನ್ನ ಗಳಿಕೆ, ನನ್ನ ಉಳಿತಾಯಗಳಷ್ಟೇ ನನಗೆ ಸೇರಿದ್ದು. ದೇಶದ ಸಂಚಿತ ನಿಧಿ ನನಗೆ ಸೇರಿದ್ದಲ್ಲ ಎಂದವರು ಹೇಳಿದರು.

ಹಾಲಿ ರಾಜ್ಯಸಭಾ ಸದಸ್ಯರಾಗಿರುವ ಹಲವರನ್ನು ಬಿಜೆಪಿ ಲೋಕಸಭಾ ಚುನಾವಣಾ ಕಣಕ್ಕಿಳಿಸಿದೆ. ಸೀತಾರಾಮನ್ ಅವರು ಕರ್ನಾಟಕದಿಂದ ರಾಜ್ಯಸಭಾ ಸದಸ್ಯೆಯಾಗಿದ್ದಾರೆ.

# ಕೈಗಾರಿಕಾ ಕ್ಷೇತ್ರಕ್ಕೆ ಮೋದಿ ಕೊಡುಗೆ ಅಪಾರ : ಗಾಯತ್ರಿ ಸಿದ್ದೇಶ್ವರ





**ನಗರದ ವಿವಿಧ ಭಾಗಗಳಲ್ಲಿ ಮತಯಾಚನೆ, ವೇಮನ ಮಠಕ್ಕೆ ಭೇಟಿ**

ದಾವಣಗೆರೆ, ಮಾ.27 - ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರು ನಗರದ ವಿವಿಧ ಭಾಗಗಳಲ್ಲಿ ಇಂದು ಮತಯಾಚನೆ ನಡೆಸಿದರು. ಕರೂರು ಕೈಗಾರಿಕಾ ವಲಯ, ವಿವಿಧ ಕಂಪನಿ, ಕಾರ್ಖಾನೆಗಳ ಸಿಬ್ಬಂದಿಗಳ ಬಳಿ ಮತಯಾಚನೆ ನಡೆಸಿದರು.

ಕೈಗಾರಿಕಾ ಪ್ರದೇಶದಲ್ಲಿ ಮತಯಾಚನೆ ಮಾಡಿದ ಅವರು, ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕೈಗಾರಿಕಾ ವಲಯಕ್ಕೆ ಮತ್ತು ಕಾರ್ಮಿಕರಿಗೆ ನೀಡಿರುವ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು.

ಮೇಕ್ ಇನ್ ಇಂಡಿಯಾ ಎಂಬ ಹೊಸ ಕಲ್ಪನೆ ಹುಟ್ಟುಹಾಕಿ ಕೋಟ್ಯಂತರ ಮಂದಿಗೆ ಸ್ವಂತ ಉದ್ಯೋಗಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನೆ ಯೋಜನೆ (ಪಿಎಂಇಜಿಪಿ) ಅಡಿ ದಾವಣಗೆರೆ ಜಿಲ್ಲೆಯಲ್ಲಿ ಸ್ವಯಂ ಉದ್ಯೋಗ ಕೈಗೊಳ್ಳಲು ಸಿಮೆಂಟ್ ಬ್ರಿಕ್ಸ್, ಊದಬತ್ತಿ, ಬ್ಯೂಟಿಪಾರ್ಲರ್, ರೆಡಿಮೇಡ್ ಗಾರ್ಮೆಂಟ್ಸ್ ಸೇರಿದಂತೆ ವಿವಿಧ ಕೈಗಾರಿಕೆ, ಗುಡಿ ಕೈಗಾರಿಕೆಗಳಿಗೆ ಕೋಟ್ಯಂತರ ರೂಪಾಯಿ ಸಹಾಯದ ಧನ ಮೂಲಕ ಉತ್ತೇಜನ ನೀಡಿದ್ದಾರೆ ಎಂದರು.

ಕೈಗಾರಿಕಾ ಕ್ಷೇತ್ರದಲ್ಲಿ ಭಾರತ ಮುಂಚೂಣಿಯಲ್ಲಿದೆ, ಹೊರ ದೇಶದ ಸಾಕಷ್ಟು ಕಂಪನಿಗಳು ಭಾರತಕ್ಕೆ ಬರುತ್ತಿವೆ. ಕೈಗಾರಿಕಾ ಕ್ಷೇತ್ರದಲ್ಲಿ ಸಾಕಷ್ಟು ಉದ್ಯೋಗಾವಕಾಶಗಳು ಸೃಜನೆಯಾಗುತ್ತಿವೆ. ಇದೆಲ್ಲದಕ್ಕೂ ಕೇಂದ್ರ ಸರ್ಕಾರದ ಕೈಗಾರಿಕಾ ನೀತಿಯೇ ಕಾರಣ. ನರೇಂದ್ರ ಮೋದಿ ಅವರು ಮತ್ತೊಮ್ಮೆ ಪ್ರಧಾನಿಯಾದರೆ ಕೈಗಾರಿಕಾ ವಲಯ ಮತ್ತಷ್ಟು ಅಭಿವೃದ್ಧಿಯಾಗಲಿದೆ. ನೀವು ನನಗೆ ಮತ ಚಲಾಯಿಸಿ, ಗೆಲ್ಲಿಸುವ ಮೂಲಕ ನರೇಂದ್ರ ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿ ಮಾಡಬೇಕು ಎಂದು ಮನವಿ ಮಾಡಿದರು

39ನೇ ವಾರ್ಡ್ ಪಾಲಿಕೆ ಬಿಜೆಪಿ ಸದಸ್ಯೆ ಗೀತಾ ದಿಳ್ಯಪ್ಪ ಅವರ ನಿವಾಸಕ್ಕೆ ಭೇಟಿ ನೀಡಿ ಮಾತುಕತೆ ನಡೆಸಿದರು.

ಬಿಜೆಪಿ ಮುಖಂಡ ರಾದ ಎಸ್.ಟಿ.ವೀರೇಶ್, ಗ್ಯಾರಹಳ್ಳಿ ಶಿವಯೋಗಿ, ಬಾಡಾದ ಆನಂದರಾಜ್, ಜಿ.ಎಸ್.ಅಶ್ವಿನಿ, ಪ್ರೇಮಮ್ಮ, ಗಾಯತ್ರಿ ಸುಭಾಷ್, ಜಯಮ್ಮ ಮತ್ತಿತರರು ಇದ್ದರು.

**ವೇಮನ ಮಠಕ್ಕೆ ಭೇಟಿ:** ಹರಿಹರ ತಾಲ್ಲೂಕಿನ ಹೊಸಳ್ಳಿ ಗ್ರಾಮದ ವೇಮನ ಮಠಕ್ಕೆ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಹಾಗೂ ಸಂಸದ ಜಿ.ಎಂ.ಸಿದ್ದೇಶ್ವರ ಭೇಟಿ ನೀಡಿ ಶ್ರೀ ವೇಮನಾನಂದ ಸ್ವಾಮೀಜಿ ಹಾಗೂ ಬಸವಕುಮಾರ ಸ್ವಾಮೀಜಿಗಳಿಗೆ ಗೌರವ ಸಲ್ಲಿಸಿ, ಆಶೀರ್ವಾದ ಪಡೆದರು.

ಒಬಿಸಿ ರಾಜ್ಯ ಉಪಾಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಗ್ರಾಮದ ಬಿಜೆಪಿ ಮುಖಂಡರು ಸಾಥ್ ನೀಡಿದರು.

# ಪಠ್ಯಪುಸ್ತಕಗಳಿಗೆ ಸೀಮಿತರಾಗದೆ, ಸಾಮಾಜಿಕ ಕಾಳಜಿಯ ಜಾಗೃತಿ ಕಡೆಗೆ ಗಮನ ಹರಿಸಬೇಕು

**ಮತದಾನ ಜಾಗೃತಿ ಕವಿಗೋಷ್ಠಿ ಸಮಾರಂಭದಲ್ಲಿ ಹಿರಿಯ ಸಾಹಿತಿ ಶ್ರೀಮತಿ ಎ.ಸಿ. ಶಶಿಕಲಾ ಶಂಕರಮೂರ್ತಿ**



ದಾವಣಗೆರೆ, ಮಾ. 27 - ಯುವಕ, ಯುವತಿಯರು ಕಾಲೇಜುಗಳಲ್ಲಿ ಕೇವಲ ಪಠ್ಯಪುಸ್ತಕ, ಅಂಕಪಟ್ಟಿ ಪದವಿಗಳಿಗೆ ಸೀಮಿತವಾಗದೆ ಸಾಮಾಜಿಕ ಕಾಳಜಿಯೊಂದಿಗೆ ಮುಂದಿನ ನಮ್ಮ ದೇಶವನ್ನು ಆಳುವ ಸೂಕ್ತ ವ್ಯಕ್ತಿಗಳನ್ನು ಆಯ್ಕೆ ಮಾಡುವ ಹಂತದಲ್ಲಿ ಜಾಗೃತಿಯೊಂದಿಗೆ ಮತದಾನ ಮಾಡುವುದರ ಜೊತೆಗೆ ಜವಾಬ್ದಾರಿ ಮತ್ತು ಬದ್ಧತೆಯಿಂದ ನಮ್ಮ ದೇಶದ ಅಭಿವೃದ್ಧಿಯ ಕಡೆಗೆ ಗಮನ ಹರಿಸಬೇಕು ಎಂದು ಹಿರಿಯ ಸಾಹಿತಿ ಶ್ರೀಮತಿ ಎ.ಸಿ. ಶಶಿಕಲಾ ಶಂಕರಮೂರ್ತಿ ಕಿವಿಮಾತು ಹೇಳಿದರು.

ನಗರದ ಕಲಾ ಕುಂಚ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ಕಲಾ ಕುಂಚ ಕಚೇರಿ ಸಭಾಂಗಣದಲ್ಲಿ ಕಳೆದ ವಾರ ನಡೆದ ಮತದಾನ ಜಾಗೃತಿ ಕವಿಗೋಷ್ಠಿ ಸಮಾರಂಭವನ್ನು ತುಳಸಿ ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ದೇಶದ ಈ ಲೋಕಸಭಾ ಚುನಾವಣೆ ಐದು ವರ್ಷಕ್ಕೊಮ್ಮೆ ಉತ್ತಮ ಆಡಳಿತಕ್ಕೆ ಪರಿವರ್ತನೆಗೆ ಯಾವುದೇ ಜಾತಿ ಮತದ ಭೇದಭಾವ ಇಲ್ಲದೇ ನಾಗರಿಕರು ಸಾಮಾಜಿಕ ಕಾಳಜಿಯೊಂದಿಗೆ ಮತ ಚಲಾಯಿಸುವುದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯ ಎಂದು ಅವರು ಹೇಳಿದರು.

ಮುಖ್ಯ ಅತಿಥಿಯಾಗಿ ಚಿತ್ರದುರ್ಗದ ಸುದ್ದಿ ಗಿಡುಗ ಸಂಪಾದಕ ಶ.ಮಂಜುನಾಥ್ ಮಾತನಾಡಿ, ಕೆಲವು ರಾಜಕೀಯ ಪಕ್ಷಗಳು ಕೇವಲ ಪ್ರಚಾರಕ್ಕೋಸ್ಕರ ಓಟಿಗಾಗಿ ಅಧಿಕಾರಕ್ಕಾಗಿ ತೊಡಗಿಸಿಕೊಂಡು ಸಮಾಜದ ಸಂಸ್ಕಾರ, ಸಂಸ್ಕೃತಿ, ಸಾಮಾಜಿಕ ಕಾಳಜಿಗಳು ಮರೆಯಾಗುತ್ತಿರುವುದು ವಿಷಾದನೀಯ ಎಂದರು. ಹಾವೇರಿ ಜಿಲ್ಲೆ ಸೇರಿದಂತೆ ವಿವಿಧ ಜಿಲ್ಲೆಗಳಿಂದ ಆಗಮಿಸಿದ ಹಿರಿಯ ಕವಿ ಕವಯತ್ರಿಯರು ಮತದಾನ ಜಾಗೃತಿ ಕುರಿತು ಒಳ್ಳೊಳ್ಳೆ ಸಂದೇಶಗಳನ್ನು ಅಕ್ಷರ ಜ್ಞಾನದೊಂದಿಗೆ ಅರ್ಥಪೂರ್ಣವಾಗಿ ಕವನ ವಾಚನ ಮಾಡಿದರು.

ರಾಣೇಬೆನ್ನೂರಿನ ಹಿರಿಯ ಕವಿ ಪರಮೇಶ್ವರಯ್ಯ ವೀರಭದ್ರಯ್ಯ ಮಠದ, ಕಲಾಕುಂಚದ ಅಧ್ಯಕ್ಷ ಕೆ.ಎಚ್.ಮಂಜುನಾಥ್ ಶ್ರೀಮತಿ ಹೇಮಾ ಶಾಂತಪ್ಪ ಪೂಜಾರಿ ಮತದಾನದ ಕುರಿತು ಸಾರ್ವಜನಿಕರು ನಿರ್ಲಕ್ಷ್ಯ ಮಾಡದೇ ಉದಾಸೀನತೆ ಬಿಟ್ಟು ಕಡ್ಡಾಯವಾಗಿ ಮತ ಚಲಾಯಿಸಬೇಕು. ಇದು ನಮ್ಮ ನಿಮ್ಮೆಲ್ಲರ ಆಜನ್ಮ ಹಕ್ಕು ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ಮಾತನಾಡಿ, ಚುನಾವಣಾ ಆಯೋಗದವರು ಕೆಲವು ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತರಬೇಕಾದ ಅವಶ್ಯಕತೆ ಇದೆ. ಮುಖ್ಯವಾಗಿ ಕೆಲವು ಮತದಾರರು ನಿರ್ಲಕ್ಷ್ಯದಿಂದ ಉದಾಸೀನತೆಯಿಂದ ಮತ ಚಲಾಯಿಸದೇ ಮದ್ಯಪಾನದೊಂದಿಗೆ ಮತದಾನದಿಂದ ದೂರ ಸೇರುತ್ತಾರೆ ಅಂತವರಿಗೆ ಆಧಾರ್ ಕಾರ್ಡ್, ಪಾನ್ ಕಾರ್ಡ್, ರೇಷನ್ ಕಾರ್ಡ್, ಹಿರಿಯ ನಾಗರಿಕರ ಕಾರ್ಡ್ ರದ್ದು ಮಾಡುವ ಕಾನೂನು ತಂದರೆ ಕೆಲವು ಮತದಾರರು ಜಾಗೃತರಾಗುತ್ತಾರೆ ಎಂದು ಅಭಿಪ್ರಾಯಪಟ್ಟರು.

ಕು. ಅಪೇಕ್ಷ, ಅನುಷಾ ಅವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಸಮಾರಂಭಕ್ಕೆ ಶ್ರೀಮತಿ ಪುಷ್ಪ ಮಂಜುನಾಥ್ ಸ್ವಾಗತಿಸಿದರು. ಶ್ರೀಮತಿ ಶೈಲಾ ವಿನೋದ ದೇವರಾಜ್ ಕವನ ವಾಚನ ಮಾಡಿ ಕಾರ್ಯಕ್ರಮ ನಿರೂಪಿಸಿದರು. ಕಲಾಕುಂಚ ಸಿದ್ದವೀರಪ್ಪ ಬಡಾವಣೆ ಶಾಖೆಯ ಅಧ್ಯಕ್ಷರಾದ ಶ್ರೀಮತಿ ಲಲಿತ ಕಲ್ಲೇಶ್, ಕಚೇರಿ ಕಾರ್ಯದರ್ಶಿ ಎಂ.ಎಸ್. ಪ್ರಸಾದ್ ಉಪಸ್ಥಿತರಿದ್ದರು.

ಸಂಸ್ಥೆಯ ಸಹ ಕಾರ್ಯದರ್ಶಿ ಕೆ.ಸಿ. ಉಮೇಶ್ ವಂದಿಸಿದರು.

## ಸಚಿವ ತಂಗಡಗಿ ಪದಚ್ಯುತಿಗೆ ಬಿಜೆಪಿ ಆಗ್ರಹ

ದಾವಣಗೆರೆ, ಮಾ. 27 -ಪ್ರಧಾನಿ ನರೇಂದ್ರ ಮೋದಿ ಅವರನ್ನು ಬೆಂಬಲಿಸುವವರ ಕಪಾಳಕ್ಕೆ ಹೊಡೆಯಿರಿ ಎಂದಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಅವರನ್ನು ಸಚಿವ ಸ್ಥಾನದಿಂದ ಪದಚ್ಯುತಿಗೊಳಿಸುವಂತೆ ಬಿಜೆಪಿ ಮುಖಂಡರು ಆಗ್ರಹಿಸಿದ್ದಾರೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಜಿಲ್ಲಾ ಬಿಜೆಪಿ ವಕ್ತಾರ ಕೋಳೇನಹಳ್ಳಿ ಬಿ.ಎಂ. ಸತೀಶ್, ಬರುವ ಚುನಾವಣೆಯಲ್ಲಿ ಸೋಲುತ್ತೇವೆಂಬ ಹತಾಷೆಯಿಂದ ಕಾಂಗ್ರೆಸ್ ಮುಖಂಡರು ಇಂತಹ ಹೇಳಿಕೆಗಳನ್ನು ನೀಡಲಾರಂಭಿಸಿದ್ದಾರೆ ಎಂದರು.

ಯುವ ಮೋರ್ಚಾ ರಾಜ್ಯ ಉಪಾಧ್ಯಕ್ಷ ಬಿ.ಎಸ್.ಶ್ಯಾಮ್ ಮಾತನಾಡಿದರು. ಜಿಲ್ಲಾ ಬಿಜೆಪಿ ಸಹ ವಕ್ತಾರ ಆರ್. ಶಿವಾನಂದ್, ಮೋದಿ ಅವರ ಯೋಜನೆಗಳಿಂದಾಗಿ ಸಾಕಷ್ಟು ಯುವ ಜನರಿಗೆ ಉದ್ಯೋಗ ದೊರೆತಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಹೆಚ್.ಪಿ. ವಿಶ್ವಾಸ್, ಹೆಚ್.ಎನ್.ಗುರುನಾಥ್, ಅನಿಲ್ ಕುಮಾರ್ ನಾಯ್ಕ ಇದ್ದರು.

## ಏರ್ ಇಂಡಿಯಾ - ಇಂಡಿಗೋ ವಿಮಾನಗಳ ರೆಕ್ಕೆ ಡಿಕ್ಕಿ

ಕೊಲ್ಕೊತಾ, ಮಾ. 27 – ಇಂಡಿಗೋ ವಿಮಾನದ ರೆಕ್ಕೆಗಳು ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನಕ್ಕೆ ಬಡಿದು ಎರಡೂ ವಿಮಾನಗಳಿಗೆ ಹಾನಿಯಾದ ಘಟನೆ ನಡೆದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಈ ಘಟನೆಯ ಬಗ್ಗೆ ವೈಮಾನಿಕ ನಿಯಂತ್ರಕ ಡಿ.ಜಿ.ಸಿ.ಎ. ತನಿಖೆಗೆ ಆದೇಶಿಸಿದೆ. ಘಟನೆಗೆ ಕಾರಣವಾದ ಇಂಡಿಗೋ ಪೈಲಟ್‌ಗಳನ್ನು ಅಮಾನತ್ತುಗೊಳಿಸಲಾಗಿದೆ.

ಬೆಳಿಗ್ಗೆ 11 ಗಂಟೆ ಸಮಯದಲ್ಲಿ ಈ ಅಪಘಾತ ನಡೆದಿದೆ. ಆ ಸಮಯದಲ್ಲಿ ಎರಡೂ ವಿಮಾನಗಳಲ್ಲಿ ಪ್ರಯಾಣಿಕರಿದ್ದರು. ಯಾರಿಗೂ ಯಾವುದೇ ಹಾನಿಯಾಗಿಲ್ಲ.

**ಮಾನ್ಯ ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ದಾವಣಗೆರೆ.**
**ಅಮಲ್ಜಾರಿ ಸಂಖ್ಯೆ 123/2023**

ಡಿಕ್ರಿ ಹೋಲ್ಡರ್ : ಆರ್.ಡಿ. ಸುಮಂತ್ ಬಿನ್ ಆರ್. ಧರ್ಮನಾಯ್ಕ, ವಯಸ್ಸು 52 ವರ್ಷ, ಬಿ.ಐ.ಇ.ಟಿ. ರಸ್ತೆ, ದಾವಣಗೆರೆ. ವಿರುದ್ಧ-

ಜಡ್ಜ್‌ಮೆಂಟ್ ಡೇಟರ್ : ಎನ್.ಎಂ. ಮಂಜುನಾಥ್ ಮತ್ತು ಇನ್ನೊಬ್ಬರು

**ಸಿಪಿಸಿ ಆದೇಶ 5 ನಿಯಮ 20 ರ ಅಡಿಯಲ್ಲಿ ಜಡ್ಜ್‌ಮೆಂಟ್ ಡೇಟರ್ ನಂ. 1ರವರ ವಿರುದ್ಧ ನೀಡಲಾದ ಪ್ರಕಟಣಾ ನೋಟೀಸು**

ಜಡ್ಜ್‌ಮೆಂಟ್ ಡೇಟರ್ 1 : ಎನ್.ಎಂ. ಮಂಜುನಾಥ್ ಬಿನ್ ಎನ್. ಮುರಿಗೆಪ್ಪ, ವಯಸ್ಸು ಸುಮಾರು 35 ವರ್ಷ., ವಾಸ : # 3866/1, ವಿನಾಯಕ ಎಲೆಕ್ಟ್ರಾನಿಕ್, ಬಿಐಇಟಿ ರಸ್ತೆ, ಎಕ್ಸ್‌ಟೆಂಡೆಡ್ ಎಂಸಿಸಿ ಬಿ ಬ್ಲಾಕ್, ದಾವಣಗೆರೆ.

ಮೇಲ್ಕಂಡ ಪ್ರಕರಣವನ್ನು ಡಿಕ್ರಿ ಹೋಲ್ಡರ್ ರವರು ಜಡ್ಜ್‌ಮೆಂಟ್ ಡೇಟರ್‌ರವರ ವಿರುದ್ಧ ಬಾಡಿಗೆ ವಸೂಲಾತಿಗಾಗಿ ಹಾಗೂ ಮಳಿಗೆ ಖಾಲಿ ಮಾಡಿಸಲು ಕೋರಿ ಮಾನ್ಯ ಘನ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ನೀವು 1ನೇ ಜಡ್ಜ್‌ಮೆಂಟ್ ಡೇಟರ್ ರವರಾಗಿದ್ದು, ನಿಮ್ಮ ವಿರುದ್ಧ ನ್ಯಾಯಾಲಯದಿಂದ ಸಮನ್ಸ್ ಅನ್ನು ನೋಂದಾಯಿತ ಅಂಚೆಯ ಮೂಲಕ ಕಳಿಸಿದ್ದರೂ ಸಹಾ ಅವು ನಿಮಗೆ ಜಾರಿಯಾಗಿರುವುದಿಲ್ಲ. ಕಾರಣ ನಿಮ್ಮ ಹಾಜರಾತಿಗಾಗಿ ದಿನಾಂಕ : 25.04.2024 ರಂದು ಬೆಳಿಗ್ಗೆ 11.00 ಗಂಟೆಗೆ ಮುದ್ದತ್ತು ನಿಗದಿಯಾಗಿದ್ದು, ಆ ದಿನ ನೀವು ಖುದ್ದಾಗಿಯಾಗಲೀ ಅಥವಾ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಿದ್ದು, ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ವಿರುದ್ಧ ಏಕಪಕ್ಷೀಯ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ : 26.3.2024 ರಂದು ಕೊಡಲ್ಪಟ್ಟಿದೆ.

**ಸಹಿ/- ವಾದಿಯ ಪರ ವಕೀಲರು**
**ಎನ್. ರಾಮದಾಸ್**
**ದಿನಾಂಕ : 25.3.2024**

**ನ್ಯಾಯಾಲಯದ ಆದೇಶದ ಮೇರೆಗೆ**
**ಸಹಿ/- ಶಿರಸ್ತೇದಾರರು, ಮಾನ್ಯ ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ, ದಾವಣಗೆರೆ.**

ಶ್ರೀ ಗುರು ಮರುಳಸಿದ್ದೇಶ್ವರಸ್ವಾಮಿ ಸೇವಾ ಸಂಸ್ಥೆ (ರಿ.), ದಾವಣಗೆರೆ.
ಹಿಂದೂ ವಧು-ವರರ ಮಾಹಿತಿ ಕೇಂದ್ರ www.hindusmatrimony.com
SGM Tours ಎಸ್‌ಜಿಎಂ ಟೂರ್ಸ್
ಬಾಣಾಪುರಮಠ ಆಸ್ಪತ್ರೆ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ.
ರೈಲು/ವಿಮಾನ ಮತ್ತು ಬಸ್ಸಿನಲ್ಲಿ
14 ದಿನಗಳು ಚಾರ್‌ಧಾಮ್ ವಿಶೇಷ ಯಾತ್ರೆ ಜೂನ್ 2024 ರಿಂದ
(ರಾಜ್ಯ ಧಾರ್ಮಿಕ ದತ್ತಿ ಇಲಾಖೆಯಿಂದ ರೂ. 20,000 ಸಬ್ಸಿಡಿ ಇರುತ್ತದೆ)
ಸಂದರ್ಶಿಸುವ ಸ್ಥಳಗಳು : ದೆಹಲಿ, ಹರಿದ್ವಾರ, ಋಷಿಕೇಶ, ಯಮುನೋತ್ರಿ, ಉತ್ತರಕಾಶಿ, ಗಂಗೋತ್ರಿ, ಗುಪ್ತಕಾಶಿ, ಕೇದಾರನಾಥ ಮತ್ತು ಬದರೀನಾಥ.
ಕಾಶಿ ಯಾತ್ರೆ
ಸಂದರ್ಶಿಸುವ ಸ್ಥಳಗಳು : ಕಾಶಿ, ಅಯೋಧ್ಯ, ಗಯಾ, ಬುದ್ದಗಯಾ, ಪ್ರಯಾಗ್‌ರಾಜ್,
ಅಮರ್‌ನಾಥ, ವೈಷ್ಣೋದೇವಿ ಪ್ರವಾಸ
ಸಂದರ್ಶಿಸುವ ಸ್ಥಳಗಳು : ಜಮ್ಮು, ಕಟ್ರಾ, ವೈಷ್ಣೋದೇವಿ, ಅಮೃತ್‌ಸರ್
ರಾಮೇಶ್ವರಂ ಯಾತ್ರೆ ಏಪ್ರಿಲ್ 11, 2024 ರಿಂದ
ಮಧುರೈ, ಕನ್ಯಾಕುಮಾರಿ, ಅನಂತಪದ್ಮನಾಭ, ರಾಮೇಶ್ವರಂ, ಶ್ರೀರಂಗಂ ಇತ್ಯಾದಿ
ಸಂಚಾಲಕರು : ವೇ॥ ಲೋಕೇಶಯ್ಯ ಎಂ. ಕೆಲವೇ ಸೀಟುಗಳು ಮಾತ್ರ ಲಭ್ಯ
78925 10652, 94481 59303, 80509 52637

# ದಿವ್ಯದೃಷ್ಟಿಗೆ ಪಾಂಡುರಂಗ ವಿಠ್ಠಲನ ವಿಗ್ರಹದಲ್ಲಿ ಗೋಚರಿಸಿದ ವಿಸ್ಮಯಕಾರಿ ಕೌತುಕಗಳು (ಭಾಗ 2)

ಕಳೆದ ಸಂಚಿಕೆಯಲ್ಲಿ ಶ್ರೀ ಪಾಂಡುರಂಗ ಮೂರ್ತಿಯ ನಿರ್ಮಾಣ, ಅಂತರದಲ್ಲಿ ನಿಂತ ಮೂರ್ತಿ, ಎರಡು ಕೈಗಳ ಶಂಕ ಕಮಲದ ಮೊಗ್ಗು, ಪಾಂಡುರಂಗನ ಪತ್ನಿಯರು, ಬುಕ್ಕಾ ಹಚ್ಚುವಿಕೆ ಬಗ್ಗೆ ತಿಳಿಸಿದ್ದೆವು. ಈಗ

**ವಿಶಾಲವಾದ ಬಾಲ ಪ್ರದೇಶ (ಹಣೆ) :** ಈ ಪ್ರದೇಶವು ಅಜ್ಞಾಚಕ್ರದಿಂದ ತೇಜಸ್ಸನ್ನು ಹರಡಿ ಅದು ಶಿವನ ಸ್ವರೂಪವಾಗಿದೆ.


**ಕೊರಳಲ್ಲಿನ ಕೌಸ್ತುಭಮಣಿ :** ಇದು ಕ್ರಿಯೆಯ ಸ್ತರದಲ್ಲಿ ಪಿಂಡದ ಆಸೆ, ಆಕಾಂಕ್ಷೆಗಳನ್ನು ಪೂರ್ತಿ ಮಾಡುವುದಾಗಿದೆ. ಈ ಮಣಿಯಲ್ಲಿ ವಿದ್ಯಾದಾಯಿನಿ ಶ್ರೀ ಸರಸ್ವತಿಯ ವಾಸವಿದೆ. ಶ್ರೀ ವಿಠ್ಠಲನ ಕಿವಿಯಲ್ಲಿರುವ ಮೀನಿನಾಕಾರದ ಕುಂಡಲದಲ್ಲಿನ ಭಾಗದಲ್ಲಿ ವಾಯುಪುತ್ರ ಹನುಮಂತನ ಸೂಕ್ಷ್ಮ ವಾಸವಿದೆ.

**ಮಸ್ತಕದ ಮೇಲಿರುವ ಶಿವಲಿಂಗ :** ಇದು ಸ್ವಯಂ ಬ್ರಹ್ಮಸ್ವರೂಪ ಶಿವ ತತ್ವದ ಅದ್ವೈತದ ಅನುಭೂತಿಯನ್ನು ನೀಡುವ ನಿರ್ಗುಣ ತತ್ವಕ್ಕೆ ಸಂಬಂಧಿಸಿದೆ.

**ಶ್ರೀ ವಿಠ್ಠಲನ ಕಾಲುಗಳಲ್ಲಿನ ಕೋಲು :** ಶ್ರೀ ಕೃಷ್ಣ ಸ್ವರೂಪ ಪೂರ್ಣಸ್ವರೂಪಿ ಕಾರ್ಯದ ಪ್ರತೀಕವಾಗಿದೆ. ಶಕ್ತಿಯ ಸ್ತರದಲ್ಲಿ ಬ್ರಹ್ಮಾಂಡದ ಸಮತೋಲನವನ್ನು ಸಪ್ತಲೋಕ, ಸಪ್ತಪಾತಾಳಗಳ ಬೆನ್ನೆಲುಬಾಗಿ ಮಾರಕ ತತ್ವದ ಸಹಾಯದಿಂದ ಪಾತಾಳದ ತ್ರಾಸದಾಯಕ ಸ್ಪಂದನಗಳನ್ನು ನಿಯಂತ್ರಿಸುತ್ತದೆ.

**ಎದೆಯ ಮೇಲಿರುವ ಶ್ರೀ ವತ್ಸಲಾಂಛನ ಚಿಹ್ನೆ :** ಈ ಚಿಹ್ನೆ ಅನಾಹತ ಚಕ್ರಕ್ಕೆ ಸಂಬಂಧಿಸಿದ ಭಾವ, ಇಂಧನಾತ್ಮಕ ನೀಲಿ ಲಹರಿಗಳನ್ನು ಬ್ರಹ್ಮಾಂಡದಲ್ಲಿ ಹರಡಿ ಈ ಮೂರ್ತಿಯ ಸಾನ್ನಿಧ್ಯದಲ್ಲಿ ಬಂದ ನಂತರ ಈ ಲಹರಿಗಳ ಸಹಾಯದಿಂದ ಪ್ರತಿಯೊಬ್ಬ ಭಕ್ತನ ಭಾವ ಜಾಗೃತವಾಗುತ್ತದೆ. ಶ್ರೀ ವಿಠ್ಠಲನ ಸೊಂಟದ ಕೆಳಗಿನ ಭಾಗವು ಬ್ರಹ್ಮಸ್ವರೂಪ. ಸೊಂಟದ ಮೇಲಿನಿಂದ ಕುತ್ತಿಗೆವರೆಗೆ ಶ್ರೀ ವಿಷ್ಣುಸ್ವರೂಪ ಮಸ್ತಕದ ಭಾಗವು ಶಿವಸ್ವರೂಪವಾಗಿದೆ.

**ಶ್ರೀ ವಿಷ್ಣು ಲೋಕವನ್ನು ಶೂನ್ಯ ಮಾರ್ಗದಿಂದ ತಲುಪಿಸುವ ಮೂರ್ತಿ :** ಈ ಮೂರ್ತಿಯು ಸ್ಥಿತಿವಾಚಕ, ಇಚ್ಛೆ, ಕ್ರಿಯೆ, ಜ್ಞಾನ ಇವುಗಳ ಸ್ತರದಲ್ಲಿ ತಲುಪಿಸುವ ದೈವೀ ಮೂರ್ತಿ ಎನ್ನುತ್ತಾರೆ. ಶ್ರೀ ವಿಠ್ಠಲ ಮೂರ್ತಿಯ ಬಾಹ್ಯ ಮಂಡಲದಲ್ಲಿ ಅನೇಕ ದೈವಿ ಮಂಡಲಗಳ ವಾಸವಿದ್ದು ನವಗ್ರಹ ಮಂಡಲ, ತಾರಾ ಮಂಡಲ, ನಕ್ಷತ್ರ ಮಂಡಲ, ಮಾತೃಕೆ ಸುಪ್ತರೂಪದಲ್ಲಿ ಇರುವುದರಿಂದ ಏನು ಬೇಡಿದರೂ ಈ ಮೂರ್ತಿಯ ಮುಂಭಾಗದ ಎಡ ಬಲ ಭಾಗದಲ್ಲಿ ಸಗುಣ-ನಿರ್ಗುಣ ತಾರಕ, ಮಾರಕ, ಆಕರ್ಷಣ ಶಕ್ತಿಯ ವಾಸವಿದ್ದು, ಮೂರ್ತಿಯ ಹಿಂಭಾಗದಲ್ಲಿ ಜ್ಞಾನರೂಪಿ ಆಕರ್ಷಣ ಶಕ್ತಿಯ ವಾಸವಿದೆ.




**ಮೂರ್ತಿಯ ಅಂತರಂಗದ ವೈಶಿಷ್ಟ್ಯಗಳು :** ಮೂರ್ತಿಯ ಒಳಗೆ ಟೊಳ್ಳಿದ್ದು ಅದರಲ್ಲಿ ಅನಂತ ಬ್ರಹ್ಮಾಂಡಗಳು ಬಿಳಿ ಅಪ್ರಕಟ ಪ್ರಕಾಶ ರೂಪದಲ್ಲಿ ಸಮಾವೇಶಗೊಂಡಿವೆ. ದಿವ್ಯ ದೃಷ್ಟಿಯಿಂದ ನೋಡಿದರೆ ಸಂಪೂರ್ಣ ಬಿಳಿ ಬಣ್ಣವಾಗಿ ಕಾಣಿಸುತ್ತದೆ. ಈ ಮೂರ್ತಿಯ ಮಾಯಾರೂಪಿ, ನಿವೃತ್ತ ರೂಪಿ, ಶೂನ್ಯಮಾರ್ಗವಿದೆ. ಟೊಳ್ಳಿನಲ್ಲಿ ಅದರ ನೇರ ಮಧ್ಯರೇಖೆಯಲ್ಲಿ ಎರಡು ಮಾರ್ಗಗಳಿದ್ದು, ಒಂದು ಮಾಯಾಮಾರ್ಗ, ಇನ್ನೊಂದು ಶೂನ್ಯ ಮಾರ್ಗವಿದೆ. ಆದ್ದರಿಂದ ಸಾಕ್ಷಿ ಭಾವನಾತ್ಮಕ ಮೂರ್ತಿ ಎಂದು ಕರೆಯುತ್ತಾರೆ.

ಶ್ರೀ ವಿಠ್ಠಲ ಮೂರ್ತಿಯು ದೈವೀ ಪ್ರೀತಿಯು ಅಗಾಧ ಸಾಗರವಾಗಿರುವುದರಿಂದ ಅದು ಇಂದಿನವರೆಗೆ ಅನೇಕ ಸಂತರ ಅಪಾರ ಭಕ್ತಿಗೆ ತನ್ನ ಹೃದಯದಲ್ಲಿ ಸ್ಥಾನವನ್ನು ನೀಡಿದೆ. ಆದ್ದರಿಂದ ಸಂತರು, ಭಕ್ತರು ಬಹಳಷ್ಟು ಪ್ರೀತಿಸುತ್ತಾರೆ. ಆದ್ದರಿಂದ ಶ್ರೀ ವಿಠ್ಠಲನಿಗೆ ಭಕ್ತಿಯ ಹಸಿವು ತುಂಬಾ ಇದೆ ಎಂದು ಹೇಳುತ್ತಾರೆ. ಆದ್ದರಿಂದ ಎಷ್ಟೋ ಯುಗಗಳಿಂದ ಭಕ್ತರನ್ನು ತನ್ನೆಡೆಗೆ ಆಕರ್ಷಿಸಿ ಅವರ ಕಣ್ಣುಗಳಲ್ಲಿ ಭಕ್ತಿಭಾವದ ಅಶ್ರುಗಳನ್ನು ತರುವಂತಹದ್ದಾಗಿದೆ. ಈ ಮೂರ್ತಿಯಲ್ಲಿ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ ಈ ಎಲ್ಲಾ ದೇವತೆಗಳ ತತ್ವಗಳು ಒಟ್ಟುಗೂಡಿವೆ.

ಪಂಡರೀಪುರದ ಪುಣ್ಯಭೂಮಿಯ ವಾತಾವರಣದಲ್ಲಿ ಶ್ರೀ ಸಂತ ತುಕಾರಾಮರ, ಶ್ರೀ ಸಂತ ನಾಮದೇವರ, ಶ್ರೀ ಸಂತ ಏಕನಾಥರ ಇನ್ನೂ ಅನೇಕ ಸಂತರ ಅಭಂಗಗಳು ತುಂಬಿಕೊಂಡು ಭಕ್ತಿಭಾವ ಜಾಗೃತಗೊಳಿಸಲು ಸಹಾಯವಾಗಿ ಅದರ ಸುವಾಸನೆ ಅಷ್ಟಗಂಧದ ಪರಿಮಳ ಹರಡಿದೆ.

**ಪಂಡರೀಪುರ ಒಂದು ತೀರ್ಥಕ್ಷೇತ್ರ ಹೇಗೆ? :** ಎಲ್ಲಿ ಅಧೋ ಮಂಡಲ, ಮಧ್ಯಮಂಡಲ ಮತ್ತು ಊರ್ಧ್ವ ವಾಯುಮಂಡಲವು ಚೈತನ್ಯದಿಂದ ವ್ಯಾಪಿಸಿರುತ್ತದೆಯೋ ಅಂತಹ ಕ್ಷೇತ್ರಕ್ಕೆ ತೀರ್ಥಕ್ಷೇತ್ರ ಎನ್ನುತ್ತಾರೆ. ಎಲ್ಲಾ ಸ್ತರಗಳಿಂದ ವಾಯುಮಂಡಲದಲ್ಲಿ ಚೈತನ್ಯವನ್ನು ಹರಡುವ ವಿಠ್ಠಲಮೂರ್ತಿಯಿಂದ ಅಧ್ಯಾತ್ಮದ ಮಾರ್ಗದಲ್ಲಿ ಮಾಡುವ ಕನಿಷ್ಠ ಹಾಗೆಯೇ ವರಿಷ್ಠ ಜೀವಿಗಳಿಗೂ ಅಧ್ಯಾತ್ಮಿಕ ಸ್ತರದಲ್ಲಿ ಯಥಾಯೋಗ್ಯ ಲಾಭವಾಗಲು ಸಹಾಯಕವಾಗುತ್ತದೆ.

ಈ ತೀರ್ಥಕ್ಷೇತ್ರ ಭಕ್ತರ ಪಾಲಿಗೆ ರೂಪ ಮನೋಹರ ಕ್ಷೇತ್ರವಾಗಿ ಭಗವಂತ ತನ್ನ ಭಕ್ತರನ್ನು ಕೈ ಬೀಸಿ ಕರೆದು ಬೇಡಿದ ವರವ ನೀಡಿ, ಆಶೀರ್ವದಿಸುವ ಕ್ಷೇತ್ರ. ಭೀಮಾರಥಿಯು ಸ್ವಾಮಿಯ ಸೌಂದರ್ಯಕ್ಕೆ ಮನಸೋತು ದೇವಾಲಯವನ್ನು ಅರ್ಧಚಂದ್ರಾಕೃತಿಯಲ್ಲಿ ಸುತ್ತಿ ಭಕ್ತಿ ಸಮರ್ಪಣೆ ಮಾಡಿದ್ದಾಳೆ. ಅದಕ್ಕೆ ಚಂದ್ರಭಾಗ ಎಂದು ಹೆಸರು ಬಂದಿದೆ ಮತ್ತು ತನ್ನಲ್ಲಿ ಮಿಂದ ಭಕ್ತರ ಪಾಪವ ತೊಳೆದು ಆಶೀರ್ವದಿಸುತ್ತಾಳೆ.

ಕೊನೆಯದಾಗಿ ಶ್ರೀ ಪಾಂಡುರಂಗ ವಿಠ್ಠಲ ವೈಕುಂಠವನ್ನು ಬಿಟ್ಟು ಬಂದದ್ದು ಪುಂಡಲೀಕರಾಯರು ತನ್ನ ವಯಸ್ಸಾದ ತಂದೆ-ತಾಯಿಗಳ ಸೇವೆ ಮಾಡುವುದನ್ನು ನೋಡಲಿಕ್ಕೆ. ನಂತರ ವರ ನೀಡಿ ಕಲ್ಲಾಗುತ್ತಾನೆ. ಆದ್ದರಿಂದ ನಾವುಗಳು ಈಗ ನಮ್ಮನಮ್ಮ ಮನೆಯಲ್ಲಿ ಬಾಳ ಸಂಜೆಯಲ್ಲಿರುವ ತಂದೆ-ತಾಯಿಗಳನ್ನು ಅಕ್ಕರೆಯಿಂದ ಚೆನ್ನಾಗಿ ಆರೈಕೆ ಮಾಡಿರಿ. ಯಾವುದೇ ಕಾರಣಕ್ಕೂ ಅನಾಥಾಶ್ರಮಕ್ಕೆ ಸೇರಿಸಬೇಡಿ. ಕಾರಣ ನಾವು ಈ ಬಾಳಸಂಜೆಯ ಪಯಣಿಕರಲ್ಲವೇ? ತಂದೆ-ತಾಯಿಗಿಂತ ಮಿಗಿಲಾದ ದೇವರಿಲ್ಲ ಎಂದು ವೇದಶಾಸ್ತ್ರ ಪುರಾಣಗಳು ಹೇಳಿವೆ. ಅವರ ಆರೈಕೆಯನ್ನು ಮಾಡಿ ಅವರ ಆಶೀರ್ವಾದವನ್ನು ಪಡೆದು ಧನ್ಯರಾಗೋಣ. ಆಗ ನಮ್ಮ ಬಾಳಬಂಡಿ ಹಸನಾಗುತ್ತದೆ ಮತ್ತು ಶ್ರೀ ಪಾಂಡುರಂಗ ವಿಠ್ಠಲನ ಆಶೀರ್ವಾದ



ಖಂಡಿತಾ ನಮ್ಮದಾಗುತ್ತದೆ. ಇದಕ್ಕೆ ಸಂಶಯವಿಲ್ಲ. ಇದು ರುಕ್ಮಿಣಿರಮಣಿ ಶ್ರೀ ಪಾಂಡುರಂಗ ವಿಠ್ಠಲನ ಚರಣ ಕಮಲಕ್ಕೆ ಭಕ್ತಿಯಿಂದ ಅರ್ಪಿಸುವ ತುಳಸಿ ಪುಷ್ಪಮಾಲೆ.

**ಭಾಗ-2 ಲೇಖನ ಮುಕ್ತಾಯ.**



**ಲೇಖನ : ಬಾಗೂರು ಜಿ. ಪರಪ್ಪ ಸೇಲ್ಕರ್,**
ನಿವೃತ್ತ ಶಿಕ್ಷಕರು, ದಾವಣಗೆರೆ.
ಮೊ: 63639 65282

# ಕಲಿಕೆಯೊಂದಿಗೆ ಕೌಶಲ್ಯ ಇಂದಿನ ಪ್ರಸ್ತುತತೆ



**ಮುದೇಗೌಡ್ರ ರೇವಣಸಿದ್ದಪ್ಪ ಕಾಲೇಜಿನ ಕಾರ್ಯಕ್ರಮದಲ್ಲಿ ಪ್ರೊ. ವೆಂಕಟೇಶ್ ಬಾಬು**

ದಾವಣಗೆರೆ, ಮಾ.27- ಪ್ರಪಂಚವು ಬಹಳ ವೇಗವಾಗಿ ಬದಲಾಗುತ್ತಿದೆ ಮತ್ತು ಈ ರೂಪಾಂತರದಲ್ಲಿ ಉದ್ಯೋಗದ ಬದಲಾವಣೆಯೂ ಆಗುತ್ತಿದೆ. ಇದರಲ್ಲಿ ಕೌಶಲ್ಯವು ಮಹತ್ವದ ಪಾತ್ರವನ್ನು ವಹಿಸುತ್ತದೆ. ಈ ಬದಲಾವಣೆಯ ಕಾಲದಲ್ಲಿ ವಿದ್ಯಾರ್ಥಿಗಳು ತಮ್ಮ ಪದವಿಯ ಕಲಿಕೆಯೊಂದಿಗೆ ಕೌಶಲ್ಯಗಳನ್ನು ಕಲಿಯುವುದು ಪ್ರಸ್ತುತವಾಗಿದೆ ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಪ್ರೊ. ವೆಂಕಟೇಶ್ ಬಾಬು ಹೇಳಿದರು.

ನಗರದ ಶ್ರೀ ಮುದೇಗೌಡ್ರ ರೇವಣಸಿದ್ದಪ್ಪ ಸ್ಕೂಲ್ ಆಫ್ ಇನ್ಫಾರ್ಮೇಷನ್ ಸೈನ್ಸ್ ಅಂಡ್ ಮ್ಯಾನೇಜ್ಮೆಂಟ್ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಕೌಶಲ್ಯ ತರಬೇತಿ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.


ಇಂದಿನ ವಿದ್ಯಾರ್ಥಿಗಳಿಗೆ ಅವಕಾಶಗಳು ಸಾಕಷ್ಟಿವೆ. ಆದರೆ, ಅವಕಾಶಗಳನ್ನು ಬಳಸಿಕೊಳ್ಳಲು ತಾವು ಕೌಶಲ್ಯಗಳನ್ನು ಬೆಳೆಸಿಕೊಳ್ಳ ಬೇಕು. ಹಾಗಾಗಿ ನಿರಂತರ ಕಲಿಕೆಯೊಂದಿಗೆ ಕೌಶಲ್ಯಗಳನ್ನು ಬೆಳೆಸಿಕೊಳ್ಳುವುದು ಇಂದಿನ ಅಗತ್ಯ ಎಂದು ಹೇಳಿದರು.

ವೃತ್ತಿ ಯೋಜನೆ ಕುರಿತು ವಿವರ ನೀಡುತ್ತಾ, ವಿದ್ಯಾರ್ಥಿಗಳು ತಮ್ಮ ವೃತ್ತಿ ಆಯ್ಕೆ ಬಗ್ಗೆ ತಿಳಿದುಕೊಂಡು ನಂತರ ತಮಗೆ ಸರಿಹೊಂದುವ ವೃತ್ತಿಯನ್ನು ಆಯ್ಕೆ ಮಾಡಿ ಅದಕ್ಕೆ ಬೇಕಾಗುವ ಕೌಶಲ್ಯವನ್ನು ಬೆಳೆಸಿಕೊಂಡಾಗ ಮುಂದಿನ ಜೀವನದಲ್ಲಿ ಯಶಸ್ಸು ತಮ್ಮದಾಗುತ್ತದೆ. ಈ ನಿಟ್ಟಿನಲ್ಲಿ ಯೋಚಿಸಬೇಕು ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲ ಪ್ರೊ.ಕೆ.ಎಸ್.ಮುನವಳ್ಳಿ ಮಠ್ ಪ್ರಾಸ್ತಾವಿಕವಾಗಿ ಮಾತನಾಡಿ, ಕಾರ್ಪೊರೇಟ್ ವಲಯಗಳು ನಿರೀಕ್ಷಿಸುವಂತಹ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಕೌಶಲ್ಯ ತರಬೇತಿ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗುತ್ತದೆ. ಮುಂದಿನ ದಿನಗಳಲ್ಲಿ ಪ್ರಾಯೋಗಿಕ ತರಗತಿಗಳು ಕೂಡ ವಿದ್ಯಾರ್ಥಿಗಳಿಗಾಗಿ ಆಯೋಜಿಸುವ ಗುರಿ ಹೊಂದಿರುತ್ತೇವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರೊ. ರವಿಕುಮಾರ್, ಪ್ರೊ. ಮಾರುತಿ ಶಾಲಿಮನಿ, ಪ್ರೊ.ವಿನಯ್ ಎಂ.ಬಿ ಮಾತನಾಡಿದರು. ಕಾಲೇಜಿನ ಉಪನ್ಯಾಸಕರಾದ ವಿನುತಾ ಮತ್ತು ದಿವ್ಯಾ ನಿರೂಪಿಸಿದರು.

# ಸಾಣೇಹಳ್ಳಿಯಲ್ಲಿ ಏ.12 ರಿಂದ 'ಮಕ್ಕಳ ಹಬ್ಬ'ಕ್ಕೆ ಆಹ್ವಾನ



ಸಾಣೇಹಳ್ಳಿ, ಮಾ.27- ಇಲ್ಲಿನ ಶ್ರೀ ಶಿವಕುಮಾರ ಕಲಾಸಂಘ ಮತ್ತು ಶ್ರೀ ಶಿವಕುಮಾರ ರಂಗಪ್ರಯೋಗ ಶಾಲೆಯ ಸಂಯುಕ್ತಾಶ್ರಯದಲ್ಲಿ ಏಪ್ರಿಲ್ 12 ರಿಂದ 30ರವರೆಗೆ 'ಮಕ್ಕಳ ಹಬ್ಬ' (ಬೇಸಿಗೆ ಶಿಬಿರ) ವನ್ನು ಆಯೋಜಿಸಲಾಗಿದೆ.

ಈ ಶಿಬಿರದಲ್ಲಿ ಕೋಲಾಟ, ಚಿತ್ರಕಲೆ, ಮಣ್ಣಾಟ, ವೀರಗಾಸೆ, ಯೋಗಾಸನ, ರಂಗಾಟಗಳು, ದಿನಕ್ಕೊಂದು ಪದ್ಯ ರಚನೆ, ಮುಖವಾಡ ತಯಾರಿ, ಕಥೆ ಹೇಳುವ ಮತ್ತು ಕಥೆ ಕಟ್ಟುವ ತರಗತಿ, ಮಕ್ಕಳ ಸಿನಿಮಾ ವೀಕ್ಷಣೆ, ಮಕ್ಕಳ ತೇರು, ಪರಿಸರದ ಮೇಲಿನ ಉಪನ್ಯಾಸ, 3 ಅಥವಾ 4 ನಾಟಕಗಳ ತಯಾರಿ ಹಾಗೂ ಪ್ರದರ್ಶನ ಮುಂತಾದ ಚಟುವಟಿಕೆಗಳಿರುತ್ತವೆ. ಶಿಬಿರದ ಅವಧಿಯಲ್ಲಿ ಮಕ್ಕಳು ಸಾಣೇಹಳ್ಳಿಯಲ್ಲಿಯೇ ಇರುವುದು ಕಡ್ಡಾಯವಾಗಿದ್ದು, ಅವರಿಗೆ ಊಟ-ವಸತಿಯ ಸೌಲಭ್ಯವಿದೆ. 10 ರಿಂದ 14 ವರ್ಷ ವಯಸ್ಸಿನ ವಿದ್ಯಾರ್ಥಿಗಳು ಶಿಬಿರದಲ್ಲಿ ಭಾಗವಹಿಸಬಹುದು. ವಿವರಕ್ಕೆ ಸಂಪರ್ಕಿಸಿ : 8861043553, 9972007015.

# ಯಲವಟ್ಟಿ : ಇಂದು ಲಿಂಗೈಕ್ಯ ಶ್ರೀಗಳ ಪುಣ್ಯಾರಾಧನೆ



ಮಲೇಬೆನ್ನೂರು ಸಮೀಪದ ಯಲವಟ್ಟಿ ಗ್ರಾಮದ ಶ್ರೀ ಗುರು ಸಿದ್ಧಾಶ್ರಮದ ವೈರಾಗ್ಯನಿಧಿ ಶ್ರೀ ಶಿವಾನಂದ ಮಹಾಸ್ವಾಮೀಜಿಯವರ 19ನೇ ವರ್ಷದ ಪುಣ್ಯಾರಾಧನೆ ಹಾಗೂ ಜ್ಞಾನನಿಧಿ ಶ್ರೀ ನಿತ್ಯಾನಂದ ಮಹಾಸ್ವಾಮೀಜಿಯವರ 17ನೇ ವರ್ಷದ ಪುಣ್ಯಾರಾಧನೆ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಯೋಗಾನಂದ ಸ್ವಾಮೀಜಿ ತಿಳಿಸಿದ್ದಾರೆ.

ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀ ಗುರು ಕಲಶ ಸ್ಥಾಪನೆ, ಕರ್ತೃ ಗದ್ದುಗೆಗೆ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಭಗವದ್ಗೀತಾ ಸಾಮೂಹಿಕ ಪಾರಾಯಣದ ನಂತರ ಬೆಳಿಗ್ಗೆ 9 ಗಂಟೆಗೆ ಮಹಾತ್ಮರಿಂದ ಪ್ರಣವ ಧ್ವಜಾರೋಹಣ ಮಾಡಲಾಗುವುದು.

ಬೆಳಿಗ್ಗೆ 10 ಗಂಟೆಗೆ ನಂಬು ನೀನೆ ನಿತ್ಯ ಬೋಧನೆಯ ನಿಗಮವನ್ನು ಎಂಬ ವಿಷಯ ಕುರಿತು ಮತ್ತು ಸಂಜೆ 6 ಗಂಟೆಯ ಕಾರ್ಯಕ್ರಮದಲ್ಲಿ 'ಅನುಪಮಾಚಲ ಭಕ್ತಿ ಭಾವಾನುಕೂಲನೆ ಶಂಭುಲಿಂಗ' ವಿಷಯ ಕುರಿತು ಪೂಜ್ಯರು ಬೋಧನೆಗೈಯ್ಯುವರು.

ಚಿತ್ರದುರ್ಗದ ಸದ್ಗುರು ಕಬೀರಾನಂದ ಆಶ್ರಮದ ಶ್ರೀ ಶಿವಲಿಂಗಾನಂದ ಮಹಾಸ್ವಾಮೀಜಿ, ದಾವಣಗೆರೆಯ ಜಡೇಸಿದ್ಧ ಶಿವಯೋಗೀಶ್ವರ ಮಠದ ಶ್ರೀ ಶಿವಾನಂದ ಮಹಾಸ್ವಾಮೀಜಿ, ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ ಮತ್ತು ರಟ್ಟಿಹಳ್ಳಿ ಕಬ್ಬಿಣಕಂಥಿ ಮಠದ ಶ್ರೀ ಮುರುಳೀಧರ ಸ್ವಾಮೀಜಿ, ಹೋತನಹಳ್ಳಿಯ ಶ್ರೀ ಶಂಕರಾನಂದ ಸ್ವಾಮೀಜಿ, ಹುಣಸಿಕಟ್ಟಿ ಸಿದ್ಧಾಶ್ರಮದ ಶ್ರೀ ಕೃಷ್ಣಾನಂದ ಭಾರತ ಸ್ವಾಮೀಜಿ, ಬಸವಾಪಟ್ಟಣದ ಶ್ರೀಕೃಷ್ಣಾನಂದ ಭಾರತಿ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ.

ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕರಾದ ಎಸ್. ರಾಮಪ್ಪ, ಹೆಚ್.ಎಸ್. ಶಿವಶಂಕರ್, ಮೋಹನ್‌ಕುಮಾರ್ ಕೊಂಡಜ್ಜಿ, ಕೋಗುಂಡಿ ಬಕ್ಕೇಶಪ್ಪ, ಹನಗವಾಡಿ ಕುಮಾರ್, ಕೆಂಚಮ್ಮನಹಳ್ಳಿ ಸುರೇಶ್, ಸಿರಿಗೆರೆ ನಾಗನಗೌಡ್ರು, ಬಿ. ಚಿದಾನಂದಪ್ಪ, ನಂದಿಗಾವಿ ಶ್ರೀನಿವಾಸ್, ಹನಗವಾಡಿ ವೀರೇಶ್, ಬೆಣ್ಣೆಹಳ್ಳಿ ಹಾಲೇಶಪ್ಪ, ಬಿ.ಎಂ. ವಾಗೀಶ್ ಸ್ವಾಮಿ, ಚಂದ್ರಶೇಖರ್ ಪೂಜಾರ್, ಜಿ.ಬಿ. ವಿನಯಕುಮಾರ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಲಿದ್ದಾರೆ.

# ಲೋಕಸಭಾ ಚುನಾವಣೆ : ಅಭ್ಯರ್ಥಿಗಳನ್ನು ಘೋಷಿಸಿದ ಶಿವಸೇನೆ, ಕಾಂಗ್ರೆಸ್ ಆಕ್ಷೇಪ

ಮುಂಬೈ, ಮಾ. 27 – ಮುಂಬರುವ ಲೋಕಸಭಾ ಚುನಾವಣೆಗಾಗಿ ಶಿವಸೇನೆ (ಯು.ಬಿ.ಟಿ.) 17 ಅಭ್ಯರ್ಥಿಗಳ ಹೆಸರುಗಳನ್ನು ಪ್ರಕಟಿಸಿದೆ. ಮೈತ್ರಿಕೂಟದಲ್ಲಿದ್ದರೂ ಸಹ, ಶಿವಸೇನೆ ಸ್ವತಂತ್ರವಾಗಿ ಅಭ್ಯರ್ಥಿಗಳನ್ನು ಘೋಷಿಸಿದೆ.

ಈ ಬಗ್ಗೆ ಆಕ್ಷೇಪಿಸಿರುವ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಬಾಳಾಸಾಹೆಬ್ ಥೋರಟ್, ಈ ರೀತಿ ಅಭ್ಯರ್ಥಿಯ ಘೋಷಣೆ ಮೈತ್ರಿ ಧರ್ಮಕ್ಕೆ ಅನುಗುಣವಾಗಿಲ್ಲ ಎಂದಿದ್ದಾರೆ. ಮಹಾರಾಷ್ಟ್ರದಲ್ಲಿ ಕಾಂಗ್ರೆಸ್, ಶಿವಸೇನೆ (ಯು.ಬಿ.ಟಿ.) ಹಾಗೂ ಎನ್.ಸಿ.ಪಿ. (ಶರದ್‌ಚಂದ್ರ ಪವಾರ್) ಪಕ್ಷಗಳು ಮೈತ್ರಿ ಹೊಂದಿವೆ. ಮಹಾರಾಷ್ಟ್ರದ 48 ಕ್ಷೇತ್ರಗಳ ಸೀಟು ಹಂಚಿಕೆಗಾಗಿ ಮಾತುಕತೆಗಳು ನಡೆದಿವೆ. ಏಪ್ರಿಲ್ 19ರಿಂದ ಚುನಾವಣೆ ಆರಂಭವಾಗಲಿದೆ. ಮಾತುಕತೆಗಳ ನಡುವೆಯೇ ಶಿವಸೇನೆ 17 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿದೆ. ರಾಜ್ಯದ 22 ಕ್ಷೇತ್ರಗಳಲ್ಲಿ ಸ್ಪರ್ಧಿಸುವುದಾಗಿ ಪಕ್ಷ ತಿಳಿಸಿದೆ. ಮುಂಬೈನಲ್ಲಿ ಆರು ಕ್ಷೇತ್ರಗಳಿದ್ದು, ಅದರಲ್ಲಿ ತನಗೆ ಮೂರು ಬೇಕು ಎಂದು ಕಾಂಗ್ರೆಸ್ ಕೇಳುತ್ತಿದೆ.

# ರಾಣೇಬೆನ್ನೂರು : ಭಾರತ್ ಅಕ್ಕಿ ವಿತರಣೆ



ರಾಣೇಬೆನ್ನೂರು, ಮಾ.27- ಇಲ್ಲಿನ ಅಂಚೆ ವೃತ್ತದಲ್ಲಿ ಕೇಂದ್ರ ಸರ್ಕಾರದ ಭಾರತ ಅಕ್ಕಿ ವಿತರಣೆ ಕಾರ್ಯಕ್ರಮಕ್ಕೆ ಮಾಜಿ ಶಾಸಕ ಅರುಣಕುಮಾರ ಪೂಜಾರ್ ಚಾಲನೆ ನೀಡಿದರು. ಜೊತೆಯಲ್ಲಿ ಎ.ಬಿ.ಪಾಟೀಲ, ಜಿಲ್ಲಾ ಮಾಜಿ ಅಧ್ಯಕ್ಷ ಸಿದ್ರಾಜ ಕಲ್ಕೋಟಿ ಮತ್ತಿತರರಿದ್ದರು. ಪ್ರತಿದಿನ ಎರಡು ವಿಭಾಗಗಳಲ್ಲಿ ಅಕ್ಕಿ ವಿತರಿಸಲಾಗುತ್ತದೆ ಎಂದು ತಿಳಿಸಲಾಯಿತು.

**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
29ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಮಾರ್ಚ್ 23 ರಿಂದ 2 ತಿಂಗಳ ಕಾಲ.
ಇಂದಿನ ಮಜ್ಜಿಗೆ ಪ್ರಾಯೋಜಕರು :
ಡಾ. ವಿ.ಎಸ್. ರಾಜು ಮತ್ತು
ಡಾ. ಹಾಲೇಶ್ ಇವರುಗಳ ಸೇವಾರ್ಥ
ಸ್ಥಳ : ಮಹಾನಗರ ಪಾಲಿಕೆ ಆವರಣ

**ಬೇಕಾಗಿದ್ದಾರೆ**
ಟ್ಯಾಲಿ ಗೊತ್ತಿರುವ ಅಕೌಂಟೆಂಟ್-2.
ಸೇಲ್ಸ್ ರೆಪ್ರೆಸೆಂಟೇಟಿವ್ - 2.
ಅನುಭವವುಳ್ಳವರಿಗೆ ಆದ್ಯತೆ.
ಸಂಪರ್ಕಿಸುವ ಸಮಯ : ಮಧ್ಯಾಹ್ನ 3 ರಿಂದ 5
ಪ್ರೀಮಿಯರ್ ಕಮ್ಯೂನಿಕೇಷನ್ಸ್,
ವಿಶ್ವೇಶ್ವರಯ್ಯ ಪಾರ್ಕ್ ಹತ್ತಿರ, ಪಿ.ಜೆ. ಬಡಾವಣೆ, ದಾವಣಗೆರೆ. ಮೊ. 98806-99666

**ವಿಚಾರಿಸಿ**
ಇಸಿ, ಇ-ಸ್ವತ್ತು, ಕಂದಾಯ, ಬಿಲ್ಡಿಂಗ್ ಲೈಸನ್ಸ್, ಖಾತೆ ಚೇಂಜ್, ಕಳೆದಿರುವ ಹಳೆ ದಾಖಲೆಗಳು. ಕಾರ್ಪೊರೇಷನ್, DUDA. ರಿಜಿಸ್ಟರ್‌ಗೆ ಕಾಲ್ ಮಾಡಿ.
ಕಿರಣ್ ಬೂಸ್ನೂರ್
97315 63409, 98440 63409

**ಬೇಕಾಗಿದ್ದಾರೆ**
ಪತ್ರಿಕಾ ಕಾರ್ಯಾಲಯದಲ್ಲಿ ಸಂಜೆ ಪಾಳೆಯದಲ್ಲಿ ಕೆಲಸ ಮಾಡಲು ಕನ್ನಡ ಭಾಷಾ ಜ್ಞಾನ ಹಾಗೂ ಕನ್ನಡ ಟೈಪಿಂಗ್ ಬಲ್ಲ ಕಂಪ್ಯೂಟರ್ ಆಪರೇಟರ್ ಹುದ್ದೆಗೆ ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಮಧ್ಯಾಹ್ನ 12ರ ನಂತರ
ಫೋ. : 08192 254736

**ಜಮೀನು ಮಾರಾಟಕ್ಕೆ**
KHB ಯ ಮುಂದೆ
ಬನ್ನಿಕೋಡ್ ರಸ್ತೆ ಸುತ್ತ- ಮುತ್ತ
1, 2, 3 ಮೇನ್ ರೋಡ್‌ಗೆ
ಕಿರಣ್ ಬೂಸ್ನೂರ್
98440 63409, 97315 63409
ಫಾರಂ ಹೌಸ್, ಗೆಸ್ಟ್ ಹೌಸ್ ಮಾಡಲಿಕ್ಕೆ ತುಂಬಾ ಚೆನ್ನಾಗಿದೆ

**SHOP FOR RENT**
12'x12',
Mamas Joint Road,
Mishra Peda Building,
MCC B Block, Davangere.
98440 64565

**ರೂಂ ಬಾಡಿಗೆಗೆ ಸಿಗುತ್ತದೆ**
ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿ ಮೊದಲನೇ ಮಹಡಿಯಲ್ಲಿ ಅಟ್ಯಾಚ್ಡ್ ಬಾತ್ ರೂಂ ಹಾಗೂ ಕಿಚನ್ ಟಾಪ್ ಇರುವ ರೂಂ ಬಾಡಿಗೆಗೆ ಸಿಗುತ್ತದೆ. ಕೋರ್ಟ್, ಡಿಸಿ ಆಫೀಸ್, ಎಸ್ಪಿ ಆಫೀಸ್, ದೂಡಾ ಆಫೀಸ್, ಆರ್‌ಟಿಓಗೆ ತುಂಬಾ ಹತ್ತಿರವಾಗಿದೆ.
96636 22055

**ತಕ್ಷಣ ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್ ಮನ್, ಸೇಲ್ಸ್ ಗರ್ಲ್ಸ್ ಮತ್ತು ಕ್ಲೀನಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ - 01

**HOUSES FOR RENT**
1BHK, 2BHK, 3BHK,
Vidyanagara, SS Layout,
Shivakumar swamy Layout,
Sidda veerappa Lauout,
Anjaneya Layout, LIC Colony.
77955 06795
Dakshith Iyanahalli

**ಬೇಕಾಗಿದ್ದಾರೆ**
ಆಪೇ ಆಟೋ ಓಡಿಸಬಲ್ಲ ಲೈಸನ್ಸ್ ವುಳ್ಳ ಡ್ರೈವರ್ - 1 ಹಾಗೂ ಸೇಲ್ಸ್ ಮನ್ ಬೇಕಾಗಿದ್ದಾರೆ. ಅನುಭವವುಳ್ಳವರು ಸಂಪರ್ಕಿಸಿ :
ಮಣಿಕಂಠ ಏಜೆನ್ಸೀಸ್
ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
94482 33326, 78991 35660

**ಕಿರಾಣಿ ಅಂಗಡಿಗೆ ಕೆಲಸಗಾರರು ಬೇಕಾಗಿದ್ದಾರೆ**
ಎರಡರಿಂದ ಮೂರು ವರ್ಷ ಅನುಭವ ಇರುವವರು ಬೇಕಾಗಿದ್ದಾರೆ.
94495 69627, 93525 46144

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ಕಾಶಿ ಪ್ರವಾಸ 13.05.2024 ರಿಂದ 21.05.2024ರವರೆಗೆ
ಕಾಶಿ, ಅಯೋಧ್ಯೆ, ಪ್ರಯಾಗರಾಜ್, ಆಗ್ರಾ, ಮಥುರಾ, ದೆಹಲಿ ಪ್ರವಾಸ ವಿಮಾನದಲ್ಲಿ
ಪ್ರಯಾಣ ಆಸಕ್ತಿ ಇರುವವರು ಕರೆ ಮಾಡಿ :
94485 33928, 90086 26473

**ಕೆಲಸಕ್ಕೆ ಬೇಕಾಗಿದ್ದಾರೆ**
PUC/ITI/ Deploma/Degree
ಶ್ರೀ ವೀರಭದ್ರೇಶ್ವರ ಟ್ರೇಡರ್ಸ್
ಹೋಲ್‌ಸೇಲ್ ಸಿಮೆಂಟ್ ವ್ಯಾಪಾರಿಗಳು,
ರಿಂಗ್ ರೋಡ್, ಎಸ್‌ಎಸ್ ಲೇಔಟ್, ದಾವಣಗೆರೆ.
99457 49925, 99807 53632

ಶ್ರೀ ಆಚಾರ್ಯ ಪ್ರಶಾಂತ್ ಜಿ ಮಾರ್ಗದರ್ಶನದಲ್ಲಿ
ಲೈವ್ ಭಗವದ್ಗೀತಾ ಸೆಷನ್ಸ್
Live Bhagvadgeeta Sessions under the guidance of Shri Acharya Prashant ji
86183 24082

**WANTED IMMEDIATELY**
Experienced principal and assistant professor for M.E.S PU College, Davanagere
*Qualification : M.Sc, B.Ed all subject.*
Apply # Anjeneya Badavane, 9th cross, Near Indragiri chandragiri appartment, Davangere -577004. Contact
98804 36414, 98800 30171

**WANTED**
ACCOUNTANTS - 5
(3-5 years Experience in Tally)
Shamanur Pharma & Health Care Pvt. Ltd.,
374, 4th main, PJ Extensions, Davangere.
98441 20003

**WANTED IMMEDIATELY**
Experienced principal and assistant professor for M.E.S college of Education, Davanagere.
Qualification : *MA, M.Ed/ M.Sc M.Ed PHD/ KSET/NET all subject*
Apply # Anjeneya badavane, 9th cross, Near Indragiri chandragiri appartment Davangere -577004. Contact
98804 36414

**ಕೆಲಸಕ್ಕೆ ಬೇಕಾಗಿದ್ದಾರೆ**
ಲೇಡಿಸ್ ಟೈಲರ್ಸ್ & ಹೆಲ್ಪರ್ಸ್
ನೋಬೆಲ್ ಟಾರ್ಪಾಲಿನ್ ಕಂಪನಿ
ಆರ್.ಹೆಚ್. ಬಿಲ್ಡಿಂಗ್,
ಪಿಬಿ ರೋಡ್, ದಾವಣಗೆರೆ.
99860 19796

**ಬೇಕಾಗಿದ್ದಾರೆ**
ಆಟೋಮೊಬೈಲ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪಿ.ಬಿ. ರೋಡ್, ದಾವಣಗೆರೆ. ಸಂಪರ್ಕಿಸಿ :
89048 09492

**STAR SPORTZ**
CARROM BOARD
SMALL : 799/- BIG : 1099/-
Free Home Delivery
83101 54195

**ಡಿಸ್ಟ್ರಿಬ್ಯೂಟರ್ಸ್ ಬೇಕಾಗಿದ್ದಾರೆ**
ಕರ್ನಾಟಕದ ನಂ.1 ನೀರಿನ ಬ್ರ್ಯಾಂಡ್ ಓಂಕಾರ ಮಿನರಲ್ ವಾಟರ್ ವಿತರಿಸಲು
ದಾವಣಗೆರೆ
ಎಲ್ಲಾ ತಾಲೂಕು
ಡಿಸ್ಟ್ರಿಬ್ಯೂಟರ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ
OMKAR
Powered with Minerals
9108028869
9108028863

**NAME CLARIFICATION**
**I Srinivasa H S/o B Hanumanthappa,** 55 years, resident @ # 77, Ist Main, Ist Cross, S. Nijalingappa Layout, Davangere. That I am state these names viz **Srinvasa H S/o B Hanumanthappa** and **Srinvas Hanumanthappa S/o Hanumanthappa Bagur** were referred to me only and to none one else. This affidavit is required to submit before the concerned authorities vide affidavit dated 14.03.2024 sworn before Notary Public M. Prathaparudra, Davangere. Henceforth all my transactions and dealings will be in the name **Srinivasa H S/o B. Hanumanthappa.**

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26
ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಮನೆ ಬಾಡಿಗೆಗೆ ಇದೆ**
2BHK, 1st ಫ್ಲೋರ್ ಮನೆ ಬಾಡಿಗೆಗೆ ಇದೆ.
ಉತ್ತರಕ್ಕೆ ರಸ್ತೆ, ಉತ್ತರಕ್ಕೆ ಬಾಗಿಲು
ಕೊಂಡಜ್ಜಿ ರಸ್ತೆ, ಅಶೋಕ ನಗರ, ಮೇನ್ ರೋಡ್, 5ನೇ ಕ್ರಾಸ್ ಬಲಭಾಗ, ದಾವಣಗೆರೆ.
ಮೊ : 88841 67704

**ಶಿಕ್ಷಕಿ/ಶಿಕ್ಷಕರು ಬೇಕಾಗಿದ್ದಾರೆ**
D.Ed.-04, B.Ed./MA English-02, Social-02, BA.B.Ed./MA Kannada-02, B.Sc., B.Ed, PCM-02, CBZ-02, B.Com/BCA-01,
ಸಂಪರ್ಕಿಸಿ : SMS ಕಾನ್ವೆಂಟ್,
ರಾಜೀವ್‌ಗಾಂಧಿ ಬಡಾವಣೆ, RTO ಕಚೇರಿ ಹತ್ತಿರ, ದಾವಣಗೆರೆ.
9844735946, 9663195531

**ಜಮೀನು ಮಾರಾಟಕ್ಕಿದೆ**
ದಾವಣಗೆರೆಯಿಂದ 10 ಕಿ.ಮಿ. ವ್ಯಾಪ್ತಿ ಒಳಗಡೆ 11/4 ಎಕರೆ ಗದ್ದೆ ಚಾನಲ್ ಪಕ್ಕ 24x7 ನೀರಿನ ವ್ಯವಸ್ಥೆ ಇರುವ ಮೇನ್ ರೋಡ್‌ಗೆ ಹೊಂದಿಕೊಂಡಿರುವ ಜಮೀನು ಮಾರಾಟಕ್ಕಿದೆ.
83105 29472

**WANTED**
Davanagere/Harihar/Mittalakatte
M.A.B.Ed/B.Sc.B.Ed/B.A.B.Ed. Teachers -10 Nos,
Office Clerks - 3No.s, B.com + Computers.
Attractive Salary, Contact
9741746205, 7349397287

**ಮನೆ ಲೀಸ್‌ಗಿದೆ**
1BHK ಸುಸಜ್ಜಿತ 1ನೇ ಮಹಡಿ RCC ಮನೆ 'ಶ್ರೀ ನೀಲಕಂಠೇಶ್ವರ ನಿಲಯ', 6ನೇ ಮೇನ್, 6ನೇ ಕ್ರಾಸ್, ನಿಟುವಳ್ಳಿ ಹೊಸ ಬಡಾವಣೆ, ರಿಂಗ್ ರಸ್ತೆ ಹತ್ತಿರ, ದಾವಣಗೆರೆ.
ಲೀಸ್ ಮೊತ್ತ : 2 ಲಕ್ಷ ರೂ.ಗಳು.
9741746205, 7349397287

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**WANTED**
OFFICE ASSISTANT CUM CAR DRIVER-01
Salary - 10,000 to 12,000
Winners Career Academy, Davangere
98869 97892

**ತಕ್ಷಣ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ**
8000-12000+ESI
97311 55583

**ಬೇಸಿಗೆ ಶಿಬಿರ**
ಶಾಲಾ ಮಕ್ಕಳಿಗಾಗಿ
ಸ್ಪೋಕನ್ ಇಂಗ್ಲಿಷ್, ಕಂಪ್ಯೂಟರ್ ಕ್ಲಾಸಸ್, ನವೋದಯ ಕೋಚಿಂಗ್.
ವಿಕಾಸ್ ಅಕಾಡೆಮಿ, ದಾವಣಗೆರೆ.
93804 29199

**OT ಟೆಕ್ನಿಷಿಯನ್ ಬೇಕಾಗಿದ್ದಾರೆ**
ಆಸ್ಪತ್ರೆ ಅಪರೇಷನ್ ಥೀಯೆಟರ್ ಕೆಲಸ ಮಾಡಲು ಅನುಭವವುಳ್ಳ OT ಟೆಕ್ನೀಷಿಯನ್ ಬೇಕಾಗಿದ್ದಾರೆ. ಉತ್ತಮ ವೇತನ ನೀಡಲಾಗುವುದು.
99725 23910

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಉದ್ಯೋಗಾವಕಾಶ**
ನಮ್ಮ ಸಂಸ್ಥೆಯಿಂದ ಯುವತಿಯರಿಗೆ ಮತ್ತು ಮಹಿಳೆಯರಿಗೆ ಪ್ರಾಯೋಗಿಕ ತರಬೇತಿಯನ್ನು ನೀಡಿ ಹೆಸರಾಂತ ಕಂಪನಿಯಾದ ಸಂಜೀವಿನಿ ಹೋಂ ನರ್ಸಿಂಗ್ ಸಂಸ್ಥೆಯಲ್ಲಿ ಉದ್ಯೋಗಾವಕಾಶ ನೀಡಲಾಗುತ್ತದೆ. ಸಂಬಳ, ಉಚಿತ ಊಟ, ವಸತಿಯೊಂದಿಗೆ 15,000 ರಿಂದ 25,000 ರೂ.
ವಿದ್ಯಾರ್ಹತೆ : 7th, 10th, PUC, ANM, GNM
91486 83185

**WANTED**
FEMALE RECEPTIONIST
20 to 27years, Any degree, Kannada, English, Hindi, 12000 to 15000/-p.m
Timing :12pm to 9pm
Hairpoint unisex salon
MCC B block, near water tank park, Dvg.
97386 64400, 91483 19342

**SPOKEN ENGLISH**
* Grammar & Vocabulary
* Writing Skills
* Pronounciation
* Story Telling
* Public Speaking
Call : 98442 39618

**ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ**
ಹುದ್ದೆಗಳು * BSc BEd(PM) : 01
* BA BEd : 02
* BPEd/CPEd : 01
* BSc/B.Com : 01
ನಿಸರ್ಗ ಪ್ರಾಥಮಿಕ ಹಾಗೂ ಪ್ರೌಢಶಾಲೆ
'C' ಬ್ಲಾಕ್, SOG ಬಡಾವಣೆ, ಇಂಡಸ್ಟ್ರಿಯಲ್ ಏರಿಯಾ, ದಾವಣಗೆರೆ.
8792702690, 9984226454

**ಬೇಕಾಗಿದ್ದಾರೆ**
ಮನೆಯಲ್ಲಿ ಸಸ್ಯಹಾರಿ ಅಡುಗೆ ಮಾಡಲು ಮಹಿಳಾ ಕೆಲಸಗಾರರು ಬೇಕಾಗಿದ್ದಾರೆ. ಸಂಪರ್ಕಿಸಿ :
94800 73451

## ಬಸವ ಮಾಚಿದೇವ ಶ್ರೀಗಳ ಆಶೀರ್ವಾದ ಪಡೆದ ಡಾ. ಪ್ರಭಾ ಮಲ್ಲಿಕಾರ್ಜುನ್



ದಾವಣಗೆರೆ, ಮಾ. 27 - ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಜಗದ್ಗುರು ಶ್ರೀ ಬಸವ ಮಾಚಿದೇವ ಮಹಾಸ್ವಾಮಿಗಳವರನ್ನು ಇಂದು ಭೇಟಿಯಾಗಿ ಆಶೀರ್ವಾದ ಪಡೆದರು.

ಈ ಸಂದರ್ಭದಲ್ಲಿ ಸಮಾಜದ ಅಧ್ಯಕ್ಷ ರಾಮಜ್ಜ, ಮುಖಂಡರಾದ ಮಂಜುನಾಥ್, ಎಂ. ನಾಗೇಂದ್ರಪ್ಪ, ಮಹಾಲಿಂಗ ಸ್ವಾಮಿ, ಹೆಚ್.ಜಿ ಉಮೇಶ್ ರುದ್ರಪ್ಪ, ಸಿದ್ದೇಶ್, ಡ್ರೈವರ್ ಫಕೀರಪ್ಪ, ಅಣ್ಣಪ್ಪ ಕರಾಟೆ, ರಾಜ್‌ಕುಮಾರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಕಾರ್ಯಾಚರಣೆಯಲ್ಲಿ 6 ನಕ್ಸಲರು ಹತ

ಬಿಜಾಪುರ, ಮಾ. 27 – ಭದ್ರತಾ ಪಡೆಗಳು ಛತ್ತೀಸ್‌ಘಡದ ಬಿಜಾಪುರ ಜಿಲ್ಲೆಯಲ್ಲಿ ನಡೆಸಿದ ಕಾರ್ಯಾಚರಣೆಯಲ್ಲಿ ನಕ್ಸಲರ 'ಉಪ ಕಮಾಂಡರ್' ಪುನೆಮ್ ನಾಗೇಶ್ ಹಾಗೂ ಪತ್ನಿ ಸೇರಿದಂತೆ ಆರು ನಕ್ಸಲರು ಹತರಾಗಿದ್ದಾರೆ. ಹಲವಾರು ನಕ್ಸಲರು ಗುಂಡಿನ ಚಕಮಕಿಯಲ್ಲಿ ಗಾಯಗೊಂಡಿದ್ದಾರೆ. ಇಡೀ ಪ್ರದೇಶದಲ್ಲಿ ಶೋಧ ಕಾರ್ಯ ನಡೆದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

## ಕೇರಳ ಸಿಎಂ ಪುತ್ರಿ ವಿರುದ್ಧ ಅಕ್ರಮ ಹಣ ಪ್ರಕರಣ

ಕೊಚ್ಚಿ, ಮಾ. 27 -ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಪುತ್ರಿ ವೀಣಾ ವಿಜಯನ್ ಹಾಗೂ ಅವರ ಐ.ಟಿ. ಕಂಪನಿ ವಿರುದ್ಧ ಜಾರಿ ನಿರ್ದೇಶನಾಲಯ ಅಕ್ರಮ ಹಣ ಪ್ರಕರಣ ದಾಖಲಿಸಿದೆ. ಖಾಸಗಿ ಗಣಿ ಕಂಪನಿಯೊಂದು ಅವರಿಗೆ ಹಾಗೂ ಐ.ಟಿ. ಕಂಪನಿಗೆ ಮಾಡಿರುವ ಅಕ್ರಮ ಪಾವತಿಗಳಿಗೆ ಸಂಬಂಧಿಸಿದಂತೆ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಅಕ್ರಮ ಹಣ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ಸಂಬಂಧಿಸಿದವರಿಗೆ ಸಮನ್ಸ್ ಕಳಿಸುವ ನಿರೀಕ್ಷೆ ಇದೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ ಗಂಭೀರ ವಂಚನೆಗಳ ತನಿಖಾ ಕಚೇರಿ ನೀಡಿದ ವರದಿ ಆಧರಿಸಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಕೊಚಿನ್ ಮಿನರಲ್ಸ್ ಅಂಡ್ ರುಟೈಲ್ ಕಂಪನಿಯು ಅಕ್ರಮವಾಗಿ ವೀಣಾರ ಎಕ್ಸಾಲಾಜಿಕ್ ಸೊಲ್ಯೂಷನ್ಸ್ ಕಂಪನಿಗೆ 1.72 ಕೋಟಿ ರೂ.ಗಳನ್ನು ಪಾವತಿಸಿದೆ ಎಂದು ಆದಾಯ ತೆರಿಗೆ ಇಲಾಖೆ ತಿಳಿಸಿತ್ತು. ಈ ಪಾವತಿಗಾಗಿ ಕಂಪನಿಯು ಯಾವುದೇ ಸೇವೆ ಒದಗಿಸಿರಲಿಲ್ಲ.

ಈ ತನಿಖೆಯನ್ನು ಪ್ರಶ್ನಿಸಿ ಎಕ್ಸಾಲಾಜಿಕ್ ಕಂಪನಿ ದಾಖಲಿಸಿದ್ದ ಮನವಿಯನ್ನು ಕರ್ನಾಟಕ ಹೈಕೋರ್ಟ್ ಕಳೆದ ತಿಂಗಳು ತಳ್ಳಿ ಹಾಕಿತ್ತು.

## ನಗರದಲ್ಲಿ ಇಂದು ಮಜ್ಜಿಗೆ ವಿತರಣೆ

ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಿಂದ ಒಂದು ತಿಂಗಳು ನಡೆಸುತ್ತಿರುವ ಮಜ್ಜಿಗೆ ವಿತರಣಾ ಕಾರ್ಯಕ್ರಮಕ್ಕೆ ಶ್ರೀಮತಿ ಮಂಜುಳಾ ನಿಂಗಪ್ಪ (ದಾವಣಗೆರೆ ಕಾಂಕ್ರೀಟ್ಸ್), ಡಾ. ಜಿ. ಸಿದ್ದೇಶ್ (ಮೈಸೂರು) ಅವರು ಇಂದಿನ ದಾನಿಗಳಾಗಿದ್ದಾರೆ.

ಈ ಸತ್ಕಾರ್ಯಕ್ಕೆ ದಾನ ಮಾಡಬಯಸುವವರು ಟ್ರಸ್ಟ್ ನಿರ್ದೇಶಕರಾದ ಶ್ರೀಮತಿ ಮಂಜುಳಾ ಬಸವಲಿಂಗಪ್ಪ (7483809312) ಅವರನ್ನು ಸಂಪರ್ಕಿಸಬಹುದು.

# ದಣಿದವರಿಗೆ ಮಜ್ಜಿಗೆ: ದೇವರು ಸಂತೃಪ್ತಿ



### ಮಜ್ಜಿಗೆ ವಿತರಣಾ ಕಾರ್ಯಕ್ರಮದಲ್ಲಿ ಶ್ರೀ ಬಸವಪ್ರಭು ಸ್ವಾಮೀಜಿ

ದಾವಣಗೆರೆ, ಮಾ. 27- ಕಾಣದಿ ರುವ ದೇವರನ್ನು ಹುಡುಕಿಕೊಂಡು ಹೋಗಿ ಕಲ್ಲುಗಳಿಗೆ ಬೆಣ್ಣೆ, ತುಪ್ಪದ ಅಭಿಷೇಕ, ಪೂಜೆ, ಅರ್ಚನೆ ಮಾಡುತ್ತೇವೆ. ಅದರ ಬದಲು ದಣಿವಾರಿ ಬಂದವರಿಗೆ ಮಜ್ಜಿಗೆ, ನೀರು, ಊಟ ಕೊಟ್ಟರೆ ಅದು ನಿಜವಾಗಿಯೂ ದೇವರಿಗೆ ಸಂತೃಪ್ತಿ ಕೊಡುತ್ತದೆ ಎಂದು ಚಿತ್ರದುರ್ಗ ಮುರುಘಾ ಮಠದ ಉಸ್ತುವಾರಿ ಶ್ರೀ ಬಸವಪ್ರಭು ಸ್ವಾಮೀಜಿ ತಿಳಿಸಿದರು.

ನಗರದ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿ ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನ ವತಿಯಿಂದ ಇಂದು ಏರ್ಪಡಿಸಿದ್ದ ಉಚಿತ ಮಜ್ಜಿಗೆ ಮತ್ತು ನೀರು ವಿತರಣಾ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಬಸವಣ್ಣನವರು ಮಾನವನಲ್ಲಿ ದೇವರಿದ್ದಾನೆ. ತೀರ್ಥ ಕ್ಷೇತ್ರಗಳಲ್ಲಿಲ್ಲ. ಭಿಕ್ಷುಕರಲ್ಲಿ, ಹಸಿದವರಲ್ಲಿ, ಬಡವರಲ್ಲಿ, ಅಸಹಾಯಕರಲ್ಲಿ, ಸಾಮಾನ್ಯ ಜನರಲ್ಲಿ ದೇವರನ್ನು ಕಾಣಬಹುದು ಎಂದಿದ್ದಾರೆ. ಅದರಂತೆ ಬದ್ಧತೆಯಿಂದ ಪ್ರಾಮಾಣಿಕವಾಗಿ ಕರುಣಾ ಟ್ರಸ್ಟ್ ಕಾರ್ಯವೆಸಗುತ್ತಿದೆ. ಎಲ್ಲಿ ಪ್ರಾಮಾಣಿಕವಾಗಿ ಕೆಲಸ ನಡೆಯುತ್ತದೆಯೋ ಅಲ್ಲಿ ತಮ್ಮ ಹಣ ಸತ್ಕಾರ್ಯಗಳಿಗೆ ಸದುಪಯೋಗವಾಗುತ್ತದೆ ಎಂಬುದು ಜನರಿಗೆ ಮನವರಿಕೆಯಾಗುತ್ತದೆ. ಎಲ್ಲಾ ಸೇವಾ ಸಂಸ್ಥೆಗಳಿಗೆ ಕರುಣಾ ಟ್ರಸ್ಟ್ ಮಾದರಿಯಾಗಿದೆ ಎಂದ ಶ್ರೀಗಳು, ಟ್ರಸ್ಟಿನ ಸತ್ಕಾರ್ಯಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುವುದರ ಜೊತೆಗೆ ಇನ್ನೂ ಹೆಚ್ಚಿನ ಸತ್ಕಾರ್ಯಗಳು ಟ್ರಸ್ಟಿನ ವತಿಯಿಂದ ನಡೆಯುವಂತಾಗಲಿ ಎಂದು ಹಾರೈಸಿದರು.

ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ಮಾತನಾಡಿ, ಪ್ರಸ್ತುತ ತುಂಬಾ ಬಿಸಿಲು ಇರುವ ಕಾರಣ ನೀರಿನ ಅಂಶ ಕಡಿಮೆಯಾಗಿ ನಿರ್ಜಲೀ ಕರಣ ಉಂಟಾಗಿ ಬ್ರೈನ್ ಸ್ಟ್ರೋಕ್ ಆಗುವ ಸಾಧ್ಯತೆಗಳು ಹೆಚ್ಚಾಗಿರುವುದರಿಂದ ಮಜ್ಜಿಗೆ, ನೀರಿನ ಅವಶ್ಯಕತೆ ತುಂಬಾ ಇರುತ್ತದೆ. ಸಂಘ-ಸಂಸ್ಥೆಗಳು, ಸಾರ್ವಜನಿಕ ಸೇವಾ ಸಂಸ್ಥೆಗಳು, ದೇವಸ್ಥಾನಗಳಲ್ಲಿ, ರಾಜಕೀಯ ಪಕ್ಷಗಳು, ಮಠಗಳಲ್ಲಿ ಮನೆ-ಮನೆಗಳ ಮುಂದೆ, ಅಂಗಡಿಗಳ ಮುಂದೆ ಮುಂತಾದ ನೂರಾರು ಕಡೆಯಲ್ಲಿ ಮಜ್ಜಿಗೆ, ನೀರನ್ನು ಇಟ್ಟು ಬಾಯಾರಿದವರಿಗೆ ನೀಡಲಿ ಎಂದು ವಿನಂತಿಸಿದರು.

ಶ್ರೀಮತಿ ಮಂಜುಳಾ ಬಸವಲಿಂಗಪ್ಪ, ಪ್ರೊ. ಎಂ. ಬಸವರಾಜ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ದಾನಿಗಳಾದ ಶ್ರೀಮತಿ ಮಂಜುಳಾ ಸಿದ್ದಪ್ಪ, ಶ್ರೀಮತಿ ರೇಖಾ ಸುದರ್ಶನ್, ನಿರ್ದೇಶಕರಾದ ಮಧುಸೂದನ್ ರವರು ಉಪಸ್ಥಿತರಿದ್ದರು.

# ಹರಪನಹಳ್ಳಿ : ಮಾದಿಗ ಸಮುದಾಯದ ಆತ್ಮ ಶಕ್ತಿ ಕೆಣಕ ಬೇಡಿ





ಹರಪನಹಳ್ಳಿ, ಮಾ. 27 - ಕೋಲಾರ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷವು ಸಚಿವ ಕೆ.ಎಚ್. ಮುನಿಯಪ್ಪ ಅವರು ಸೂಚಿಸುವ ವ್ಯಕ್ತಿಗೆ ಟಿಕೆಟ್ ನೀಡಬೇಕು. ಇಲ್ಲದಿದ್ದರೆ ರಾಜ್ಯದಲ್ಲಿ ಪರಿಣಾಮ ಎದುರಿಸಬೇಕಾಗುತ್ತದೆ. ಮಾದಿಗ ಸಮುದಾಯದ ಆತ್ಮಸಾಕ್ಷಿ ಕೆಣಕುವುದಕ್ಕೆ ಕೈ ಹಾಕಬೇಡಿ ಎಂದು ಕೆ.ಎಚ್. ಮುನಿಯಪ್ಪ ವಿರೋಧಿಗಳಿಗೆ ಹರಪನಹಳ್ಳಿ ತಾಲ್ಲೂಕು ಮಾದಿಗ ಸಮುದಾಯದ ಮುಖಂಡರು ಎಚ್ಚರಿಸಿದರು.

ತಾಲ್ಲೂಕು ಪಂಚಾಯತ್ ಮಾಜಿ ಸದಸ್ಯರಾದ ಹುಲಿಕಟ್ಟಿ ಚಂದ್ರಪ್ಪ ಮಾತನಾಡಿ, ಕೆ.ಎಚ್. ಮುನಿಯಪ್ಪ ಅವರು ನಮ್ಮ ಸಮುದಾಯದ ಬಹುದೊಡ್ಡ ನಾಯಕರು. ನಮ್ಮ ಸಮಾಜವನ್ನು ಪ್ರತಿನಿಧಿಸುತ್ತಿದ್ದಾರೆ. 7 ಬಾರಿ ಕೋಲಾರ ಸಂಸದ ಹಾಗೂ ಕೇಂದ್ರದಲ್ಲಿ ಸಚಿವರೂ ಆಗಿದ್ದರು ಎಂದರು.

ಮಾಜಿ ತಾಲ್ಲೂಕು ಪಂಚಾಯಿತಿ ಸದಸ್ಯ ಮೈದೂರು ಓ. ರಾಮಪ್ಪ ಮಾತನಾಡಿ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಎಡಗೈ ಬಲಗೈ ಎಂಬ ತಾರತಮ್ಯ ಇರಲಿಲ್ಲ. ನಮ್ಮ ಒಗ್ಗಟ್ಟನ್ನು ನಾಶ ಮಾಡುವ ಉದ್ದೇಶದಿಂದಲೇ ಕೆಲ ರಾಜಕಾರಣಿಗಳು ಟಿಕೆಟ್ ಘೋಷಣೆ ಮಾಡುವ ಸಂದರ್ಭದಲ್ಲಿ ಎಡ ಬಲ ಎನ್ನುತ್ತಿದ್ದಾರೆ. ಮಾದಿಗರು ಸೇರಿದಂತೆ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಯಾರ ಪರವಾಗಿ ಇರುತ್ತಾರೊ ಅವರು ಅಧಿಕಾರಕ್ಕೆ ಬರುತ್ತಾರೆ ಎನ್ನುವುದನ್ನು ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಅವರು ತಿಳಿಯಬೇಕು ಎಂದರು.

ಕಾಂಗ್ರೆಸ್ ಮುಖಂಡ ಮೈದೂರು ರಾಮಣ್ಣ ಮಾತನಾಡಿ, ರಾಜ್ಯ ಮತ್ತು ದೇಶದ ರಾಜಕಾರಣದಲ್ಲಿ ಕೆ.ಎಚ್. ಮುನಿಯಪ್ಪ ಅವರ ಕುಟುಂಬ ಮಾತ್ರವೇ ಇಲ್ಲ. ಕೋಲಾರ ಮತ್ತು ಚಿಕ್ಕಬಳ್ಳಾಪುರದ ಎಲ್ಲ ಮಾಹಿತಿ ಅವರ ಬಳಿ ಇದೆ. ಆದ್ದರಿಂದ ಅವರು ಸೂಚಿಸುವ ಅಭ್ಯರ್ಥಿಗೆ ಟಿಕೆಟ್ ನೀಡಬೇಕು. ಮೂರು ಲೋಕಸಭಾ ಕ್ಷೇತ್ರಗಳಲ್ಲಿ ಬಲಗೈ ಸಮುದಾಯಕ್ಕೆ ಟಿಕೆಟ್ ನೀಡಿದ್ದಾರೆ. ಕೋಲಾರದಲ್ಲಿ ಎಡಗೈ ಸಮುದಾಯಕ್ಕೆ ಟಿಕೆಟ್ ನೀಡಬೇಕು. ಕಾಂಗ್ರೆಸ್‌ನ ಕೆಲವರು ಎಡ ಬಲ ನಮ್ಮ ನಡುವೆ ಒಡಕು ತಂದಿದ್ದಾರೆ ಎಂದು ದೂರಿದರು.

ಈ ವೇಳೆ ಅಂಬೇಡ್ಕರ್ ಸಂಘದ ಅಧ್ಯಕ್ಷ ನಿಚ್ಚವ್ವನಹಳ್ಳಿ ಭೀಮಪ್ಪ ಅಂಬೇಡ್ಕರ್ ಸಂಘದ ಪ್ರಧಾನ ಕಾರ್ಯದರ್ಶಿ ಓ. ಮಹಾಂತೇಶ್, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಯರಬಾಳು ಹನುಮಂತಪ್ಪ, ಕಲ್ಲಹಳ್ಳಿ ಹನುಮಂತಪ್ಪ, ಪೂಜಾರಿ ಮರಿಯಪ್ಪ, ವಕೀಲರು ಬಸವರಾಜ್, ಅಶೋಕ್ ಹಿರೇಮೇಗಳಗೇರಿ, ರಾಜಪ್ಪ, ಶಾಸಪ್ಪ, ನೀಲಗುಂದ ಸಣ್ಣಪ್ಪ, ಬಾಗಳಿ ಚನ್ನಬಸಪ್ಪ, ಕಣಿವಳ್ಳಿ ಚೌಡಪ್ಪ, ಅರಸನಾಳ ಸೋಮಪ್ಪ, ಕುಂಚೂರು ಸಂಜೀವಪ್ಪ, ಹಲವಾಗಲು ಚಂದ್ರಪ್ಪ, ಮಂಜಪ್ಪ, ಹನುಮಂತಪ್ಪ ಸೇರಿದಂತೆ ಮಾದಿಗ ಸಮಾಜದ ಆನೇಕ ಮುಖಂಡರು ಆಗ್ರಹಿಸಿದರು.

## ನಗರದಲ್ಲಿ ಇಂದು ಚಿತ್ರಕಲಾ, ಛಾಯಾಚಿತ್ರಗಳ ಪ್ರದರ್ಶನ

ದಾವಣಗೆರೆ, ಮಾ. 27- ದಾವಣಗೆರೆ ವಿಶ್ವವಿದ್ಯಾನಿಲಯ ಹಾಗೂ ದೃಶ್ಯಕಲಾ ಮಹಾವಿದ್ಯಾಲಯ ಇವರ ಸಹಯೋಗದಲ್ಲಿ ವಿಜಯಪುರದ ಕಲಾವಿದ ರಮೇಶ ಚವ್ಹಾಣ್ ಹಾಗೂ ಛಾಯಾಗ್ರಾಹಕ ಸತೀಶ ಕಲಾಲ್ ಇವರ ಚಿತ್ರಕಲಾ ಮತ್ತು ಛಾಯಾಚಿತ್ರಗಳ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ಕಲಾವಿಮರ್ಶಕ ದತ್ತಾತ್ರೇಯ ಎನ್. ಭಟ್ಟ ತಿಳಿಸಿದ್ದಾರೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದೃಶ್ಯಕಲಾ ಮಹಾವಿದ್ಯಾಲಯದ ದೃಶ್ಯವಿಶ್ವ ಕಲಾ ಗ್ಯಾಲರಿಯಲ್ಲಿ ನಾಳೆ ದಿನಾಂಕ 28ರಿಂದ ಮೂರು ದಿನಗಳ ಕಾಲ ನಡೆಯುವ ಈ ಪ್ರದರ್ಶನವನ್ನು ಬೆಳಿಗ್ಗೆ 11 ಗಂಟೆಗೆ ಪತ್ರಕರ್ತ ಬಿ.ಎನ್. ಮಲ್ಲೇಶ್ ಉದ್ಘಾಟಿಸಲಿದ್ದಾರೆ ಎಂದರು.

ಕಾಲೇಜಿನ ಪ್ರಾಚಾರ್ಯ ಡಾ.ಜೈರಾಜ ಎಂ. ಚಿಕ್ಕಪಾಟೀಲ ಅಧ್ಯಕ್ಷತೆ ವಹಿಸಲಿದ್ದಾರೆ. ಡಾ.ಪ್ರಶಾಂತ ಹೆಗಡೆ, ಡಾ.ಸತೀಶ್ ಕುಮಾರ್ ಪಿ. ವಲ್ಲೇಪುರೆ ಉಪಸ್ಥಿತರಿರಲಿದ್ದಾರೆ. ಪ್ರದರ್ಶನವು ಬೆಳಿಗ್ಗೆ 10.30 ರಿಂದ ಸಂಜೆ 5.30ರವರೆಗೆ ಇರಲಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಹರೀಶ್, ಶಿವಶಂಕರ್ ಸುತಾರ್, ರಂಗನಾಥ ಕುಲಕರ್ಣಿ ಇದ್ದರು.

## ಇಂದು ದತ್ತಿ ಉಪನ್ಯಾಸ

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್, ಕೆ. ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ, ಹಿರಿಯ ನಾಗರಿಕರ ಸಹಾಯವಾಣಿ ಇವರ ಸಹಯೋಗದಲ್ಲಿ ಇಂದು ಮಧ್ಯಾಹ್ನ 2.30 ಕ್ಕೆ ನಗರದ ಕೆಎಸ್ಎಸ್ ಶಿಕ್ಷಣ ಮಹಾವಿದ್ಯಾಲಯದ ಸಭಾಂ ಗಣದಲ್ಲಿ ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವದ ಅಂಗವಾಗಿ ದತ್ತಿ ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಮಹಾವಿದ್ಯಾಲಯದ ಕಾರ್ಯದರ್ಶಿ ಬಿ. ವಿಕಾಸ್ ಕಾರ್ಯಕ್ರಮ ಉದ್ಘಾಟಿಸುವರು. ಪ್ರಾಚಾರ್ಯ ಬಿ.ಎಸ್ ಚನ್ನಬಸಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

ಆಹಾರ ಇಲಾಖೆ ನಿವೃತ್ತ ಸಹಾಯಕ ನಿರ್ದೇಶಕ ಬಿ.ಟಿ. ಪ್ರಕಾಶ್ 'ಕನ್ನಡ ನಾಡು ನುಡಿಯ ಹಿರಿಮೆ' ಕುರಿತು ಉಪನ್ಯಾಸ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಷಡಕ್ಷರಪ್ಪ ಎಂ. ಬೇತೂರು, ಪರಿಮಳ ಜಗದೀಶ್, ಮಮತಾ ರುದ್ರಮುನಿ, ನವೀನ್ ಕುಮಾರ್, ಸುಮತಿ ಜಯಪ್ಪ ಮತ್ತಿತರರು ಭಾಗವಹಿಸಲಿದ್ದಾರೆ.

## ನಾಳೆ ಯುಗಾದಿ ಕವಿಗೋಷ್ಠಿ

ದಾವಣಗೆರೆ, ಮಾ.27- ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾ ಘಟಕ, ಕರ್ನಾಟಕ ವಚನ ಸಾಹಿತ್ಯ ಪರಿಷತ್ ಜಿಲ್ಲಾ ಘಟಕ, ಸ್ಫೂರ್ತಿ ಪ್ರಕಾಶನ ತೆಲಿಗೆ ಇವರುಗಳ ಸಂಯುಕ್ತಾಶ್ರಯದಲ್ಲಿ ಯುಗಾದಿ ಕವಿಗೋಷ್ಠಿ - ಕ್ರೋಧಿ ನಾಮ ಸಂವತ್ಸರದ ಸ್ವಾಗತ ಕಾರ್ಯಕ್ರಮವನ್ನು ನಾಳೆ ದಿನಾಂಕ 29ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ರೋಟರಿ ಬಾಲಭವನದಲ್ಲಿ ಏರ್ಪಡಿಸಲಾಗಿದೆ.

## ಇಂದು ಕೇಜ್ರಿವಾಲ್ 'ದೊಡ್ಡ ಸತ್ಯ ಬಯಲು' : ಸುನೀತ

ನವದೆಹಲಿ, ಮಾ. 27 – ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ನಾಳೆ ಗುರುವಾರ ಅಬಕಾರಿ ನೀತಿ ಪ್ರಕರಣಕ್ಕೆ ಸಂಬಂಧಿಸಿದಂತೆ ದೊಡ್ಡ ಸತ್ಯವನ್ನು ಬಯಲು ಮಾಡಲಿದ್ದಾರೆ ಎಂದು ಅವರ ಪತ್ನಿ ಸುನೀತ ಹೇಳಿದ್ದಾರೆ. ಜಾರಿ ನಿರ್ದೇಶನಲಾಯ ನಡೆಸಿದ ಹಲವು ದಾಳಿಗಳಲ್ಲಿ ಯಾವುದೇ ಹಣ ಪತ್ತೆಯಾಗಿಲ್ಲ ಎಂದೂ ಸುನೀತ ಹೇಳಿದ್ದಾರೆ. ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು ಕಳೆದ ಮಾರ್ಚ್ 21ರಂದು ಕೇಜ್ರಿವಾಲ್ ಅವರನ್ನು ಬಂಧಿಸಿತ್ತು. ಅವರನ್ನು ಮಾರ್ಚ್ 28ರವರೆಗೆ ಇ.ಡಿ. ಕಸ್ಟಡಿಗೆ ವಹಿಸಲಾಗಿದೆ.


## ಸುಂಕದಕಟ್ಟೆಯಲ್ಲಿ ಇಂದು ಶ್ರೀ ನರಸಿಂಹ ಸ್ವಾಮಿ ರಥೋತ್ಸವ



ಹೊನ್ನಾಳಿ ತಾಲ್ಲೂಕಿನ ಸುಂಕದಕಟ್ಟೆ ಗ್ರಾಮದ ಶ್ರೀ ನರಸಿಂಹ ಸ್ವಾಮಿ ದೊಡ್ಡ ರಥೋತ್ಸವ ಇಂದು ಬೆಳಗಿನ ಜಾವ 4.30ಕ್ಕೆ ಜರುಗುವುದು ಎಂದು ಪ್ರಧಾನ ಅರ್ಚಕ ಎಸ್. ರಾಜುಸ್ವಾಮಿ ಹೇಳಿದರು.

ಸುಂಕದಕಟ್ಟೆ ಗ್ರಾಮದ ಶ್ರೀ ಮಂಜುನಾಥ ಸ್ವಾಮಿ-ಶ್ರೀ ನರಸಿಂಹ ಸ್ವಾಮಿ ಸನ್ನಿಧಿಯಲ್ಲಿ ಈ ಕಾರ್ಯಕ್ರಮ ನಡೆಯಲಿದೆ.

## ಹರಪನಹಳ್ಳಿ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾಗಿ ಪಿ.ಬಿ. ಗೌಡ



ಹರಪನಹಳ್ಳಿ, ಮಾ. 27 - ತಾಲ್ಲೂಕು ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರಾಗಿ ಪಿ.ಬಿ. ಗೌಡ ಅವಿರೋಧವಾಗಿ ಆಯ್ಕೆಯಾದರು.

ಒಟ್ಟು 13 ಜನ ಸದಸ್ಯರಲ್ಲಿ 9 ಜನ ಸದಸ್ಯರು ಹಾಜರಿದ್ದು, ಬ್ಯಾಂಕ್‌ನ ಉಳಿದ ಅವಧಿಗೆ ಅಧ್ಯಕ್ಷ ಸ್ಥಾನ ಬಯಸಿ ಪಿ.ಬಿ.ಗೌಡ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಇವರನ್ನು ಅವಿರೋಧವಾಗಿ ಘೋಷಣೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಪವನಕುಮಾರ್ ಘೋಷಿಸಿದರು,

ಈ ಸಂದರ್ಭದಲ್ಲಿ ಪಿಕಾರ್ಡ್ ಬ್ಯಾಂಕ್‌ನ ಮಾಜಿ ಅಧ್ಯಕ್ಷ ಎಚ್. ವಿಶಾಲಕ್ಷಮ್ಮ, ಉಪಾಧ್ಯಕ್ಷ ಬಿ. ರಾಜಕುಮಾರ, ನಿರ್ದೇಶಕರಾದ ಮುತ್ತಿಗಿ ಜಂಬಣ್ಣ, ಬೇಲೂರು ಸಿದ್ದೇಶ್, ಕೆ. ಭರಮನಗೌಡ, ಪಿ.ಕೆ. ಮಹಾದೇವಪ್ಪ, ಟಿ. ಬಸವರಾಜಪ್ಪ, ಜಗದೀಶ, ಆರ್. ಶಿವಕುಮಾರಗೌಡ ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಹೆಚ್.ಬಿ. ಪರಶುರಾಮಪ್ಪ, ಮುಖಂಡ ಎಚ್.ಕೆ. ಹಾಲೇಶ, ಬೇಲೂರು ಅಂಜಪ್ಪ, ಅಲಮರಸಿಕೇರಿ ಪರುಶುರಾಮ್, ಚಿಗಟೇರಿ ಜಂಬಣ್ಣ, ಜಾಕೀರ್‌ಸರ್ಕಾವಸ್ ಸೇರಿದಂತೆ ಇತರರಿದ್ದರು.

## ಹರಿಹರ ತಾಲ್ಲೂಕಿನಲ್ಲಿ ಇಂದು ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಪ್ರಚಾರ

ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯಿತ್ರಿ ಸಿದ್ದೇಶ್ವರ ಅವರು ಇಂದು ಹರಿಹರ ವಿಧಾನಸಬಾ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರಚಾರ ನಡೆಸುವರು.

ಬೆಳಿಗ್ಗೆ 9.30ಕ್ಕೆ ಮಿಟ್ಲಕಟ್ಟೆ, 10ಕ್ಕೆ ಸಾಲಕಟ್ಟೆ, 11ಕ್ಕೆ ಸತ್ಯನಾರಾಯಣಪುರ ಕ್ಯಾಂಪ್, 11.30ಕ್ಕೆ ಕೆ.ಬೇವಿನಹಳ್ಳಿ, ಮಧ್ಯಾಹ್ನ 12ಕ್ಕೆ ಕಡ್ಲೆಗೊಂದಿ, 12.30ಕ್ಕೆ ಸಲಗನಹಳ್ಳಿ, 1ಕ್ಕೆ ಬನ್ನಿಕೋಡು, 1.30ಕ್ಕೆ ಶಿವನಹಳ್ಳಿ, 2ಕ್ಕೆ ಬೆಳ್ಳೂಡಿ, 2.30ಕ್ಕೆ ಬ್ಯಾಲದಹಳ್ಳಿ, 3ಕ್ಕೆ ಯಕ್ಕೆಗೊಂದಿ, 3.30ಕ್ಕೆ ಭಾನುವಳ್ಳಿ, ಸಂಜೆ 4ಕ್ಕೆ ರಾಮತೀರ್ಥ, 4.30ಕ್ಕೆ ನಾಗೇನಹಳ್ಳಿ, 5ಕ್ಕೆ ಹರಗನಹಳ್ಳಿ, 5.30ಕ್ಕೆ ಹಲಸಬಾಳು, 6ಕ್ಕೆ ರಾಜನಹಳ್ಳಿ, 6.30ಕ್ಕೆ ತಿಮ್ಲಾಪುರ, ಬಿಳಸನೂರು, 7ಕ್ಕೆ ನಂದಿಗಾವಿ, 7.30ಕ್ಕೆ ಹೊಸಹಳ್ಳಿ, 8ಕ್ಕೆ ಕಮಲಾಪುರ ಗ್ರಾಮದಲ್ಲಿ ಮತಯಾಚನೆ ಮಾಡಲಿದ್ದಾರೆ.

## ನಗರದಲ್ಲಿ ಇಂದು ಕಸಾಪದಿಂದ ದತ್ತಿ ಉಪನ್ಯಾಸ ಕಾರ್ಯಕ್ರಮ



ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಹಾಗೂ ಹಿರಿಯ ನಾಗರಿಕರ ಸಹಾಯವಾಣಿ ವತಿಯಿಂದ ಇಂದು ಬೆಳಿಗ್ಗೆ 11 ಗಂಟೆಗೆ ವಿದ್ಯಾಚೇತನ ಕಾಲೇಜಿನ ಸಭಾಂಗಣದಲ್ಲಿ ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವದ ಅಂಗವಾಗಿ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಬಿಐಇಟಿ ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಪ್ರಾಚಾರ್ಯ ಹೆಚ್.ಎನ್. ಪ್ರದೀಪ್ ಅಧ್ಯಕ್ಷತೆ ವಹಿಸಲಿದ್ದಾರೆ. ಶೈಕ್ಷಣಿಕ ಸಲಹೆಗಾರ ಜಗನ್ನಾಥ್ ನಾಡಿಗೇರ್ 'ವಿದ್ಯಾರ್ಥಿ ಜೀವನದಲ್ಲಿ ಯಶಸ್ಸು' ಕುರಿತು ಉಪನ್ಯಾಸ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಷಡಕ್ಷರಪ್ಪ ಎಂ.ಬೇತೂರು, ಪರಿಮಳ ಜಗದೀಶ್, ಮಮತಾ ರುದ್ರಮುನಿ, ರೇಖಾ ಓಂಕಾರಪ್ಪ, ನವೀನ್ ಕುಮಾರ್, ಸುಮತಿ ಜಯ್ಯಪ್ಪ ಭಾಗವಹಿಸಲಿದ್ದಾರೆ.

## ನಗರದಲ್ಲಿ ಇಂದು ಸಿಎನ್ಕೆ ಶ್ರದ್ಧಾಂಜಲಿ

ಮೌಲಾನಾ ಅಜಾದ್ ಶಿಕ್ಷಣ ಮತ್ತು ಸಾಂಸ್ಕೃತಿಕ ಸಂಸ್ಥೆ ವತಿಯಿಂದ ಮಾಜಿ ಶಿಕ್ಷಣ ಸಚಿವೆ ಹಾಗೂ ವಿಧಾನಸಭೆಯ ಉಪಾಧ್ಯಕ್ಷರಾಗಿದ್ದ ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ ಅವರ ಶ್ರದ್ಧಾಂಜಲಿ ಪ್ರಯುಕ್ತ ಇಂದು ನಗರದ ಶ್ರೀ ವಿರಕ್ತ ಮಠ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ನೋಟ್‌ಬುಕ್ ಮತ್ತು ಪೆನ್ನುಗಳನ್ನು ವಿತರಣೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮ ದಲ್ಲಿ ವಿರಕ್ತಮಠ ಶ್ರೀ ಬಸವಪ್ರಭು ಸ್ವಾಮೀಜಿ ಉಪಸ್ಥಿತರಿರುವರು ಎಂದು ಅಧ್ಯಕ್ಷ ಸಿ.ಆರ್. ನಸೀರ್ ಅಹಮ್ಮದ್ ತಿಳಿಸಿದ್ದಾರೆ.

## ವಜ್ರೇಶ್ವರಿ ಸಂಸ್ಥೆ ವಾರ್ಷಿಕೋತ್ಸವ, ಮಹಿಳಾ ದಿನಾಚರಣೆ



ದಾವಣಗೆರೆ, ಮಾ. 27 - ನಗರದ ಶ್ರೀ ವಜ್ರೇಶ್ವರಿ ಮಹಿಳಾ ಸಂಸ್ಥೆಯ 9ನೇ ವರ್ಷದ ವಾರ್ಷಿಕೋತ್ಸವ ಹಾಗೂ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಯಿತು.

ವಿಜಯ ಸಿ. ಅಕ್ಕಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನಿರ್ಮಲಾ ಸುಭಾಷ್ ಹಾಜರಿದ್ದರು. ಈ ಸಂದರ್ಭದಲ್ಲಿ ರುದ್ರಾಕ್ಷಿಬಾಯಿ, ಸುಜಾತ ನಾಗೇಶ್, ಶೈಲಜಾ, ಮಮತಾ, ತನುಜಾ, ವೀಣಾ ಕೃಪ, ಚಂದ್ರಮ್ಮ, ಪ್ರೇಮ, ಪ್ರಿಯಾಂಕ, ಪುಷ್ಪಾ, ಗೀತಾ, ಚಂದ್ರಿಕಾ ಜಗನ್ನಾಥ್, ಸರ್ವಮಂಗಳ ಪ್ರಸನ್ನ, ಚಂದ್ರಪ್ರಭು, ಚಂದ್ರಿಕಾ, ಉಪಸ್ಥಿತರಿದ್ದರು.

## ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಶುಭಾಶಯ ಹೇಳಿದ ವಿಶೇಷ ಚೇತನರು

ದಾವಣಗೆರೆ, ಮಾ. 27 - ನಗರದ 20ಕ್ಕೂ ಹೆಚ್ಚು ವಿಶೇಷ ಚೇತನರು ದಾವಣಗೆರೆ ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಅವರ ನಿವಾಸದಲ್ಲಿ ಇಂದು ಭೇಟಿಯಾಗಿ ಶುಭಾಶಯ ಕೋರುವುದರೊಂದಿಗೆ ಬೆಂಬಲ ಸೂಚಿಸಿದರು. ಸಂಸದರಾದ ನಂತರ ನಮ್ಮ ಕೆಲವು ಬೇಡಿಕೆಗಳನ್ನು ಈಡೇರಿಸಬೇಕಾಗಿ ಮನವಿ ಮಾಡಿದರು.



## ತಿರುಪತಿಗೆ ಸಿ.ಜೆ.ಐ.

ತಿರುಪತಿ, ಮಾ. 27 – ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ಬುಧವಾರ ಇಲ್ಲಿನ ಪ್ರಸಿದ್ಧ ತಿರುಪತಿ ತಿಮ್ಮಪ್ಪನ ದೇವಾಲಯಕ್ಕೆ ಭೇಟಿ ನೀಡಿ ನಮನ ಸಲ್ಲಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಂಧ್ರ ಪ್ರದೇಶದ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಧೀರಜ್ ಸಿಂಗ್ ಠಾಕೂರ್ ಅವರು ನ್ಯಾಯಮೂರ್ತಿ ಚಂದ್ರಚೂಡ್ ಅವರನ್ನು ದೇವಾಲಯಕ್ಕೆ ಸ್ವಾಗತಿಸಿದರು. ಅರ್ಚಕರು ಅವರಿಗೆ ಸಾಂಪ್ರದಾಯಿಕ ಸ್ವಾಗತ ನೀಡಿದರು. ದೇವಾಲಯ ಭೇಟಿಯ ನಂತರ ಅವರು ಎಸ್.ವಿ. ವೈದಿಕ ವಿಶ್ವವಿದ್ಯಾನಿಲಯಕ್ಕೆ ತೆರಳಿ ಅಲ್ಲಿನ ಹಸ್ತಲಿಪಿಗಳನ್ನು ಪರಿಶೀಲಿಸಿದರು.

# ಮಹಿಳಾ ಪೂರಕ ಪೌಷ್ಠಿಕ ಆಹಾರ ತಯಾರಿಕಾ ಕೇಂದ್ರ ತೆರೆಯಲು ಒತ್ತಾಯ

### ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಪ್ರಚಾರ ಸಭೆಯಲ್ಲಿ ಮನವಿ ಮಾಡಿದ ಎಸ್. ಹಾಲೇಶಪ್ಪ

ದಾವಣಗೆರೆ,ಮಾ.27- ಆವರಗೊಳ್ಳದ ಎಂಎಸ್‌ಪಿಸಿ ಮಹಿಳಾ ಸದಸ್ಯರಿಗಾಗಿರುವ ಅನ್ಯಾಯವನ್ನು ಕೂಡಲೇ ಸರಿಪಡಿಸಬೇಕು ಎಂದು ಸರ್ಕಾರಿ ನೌಕರರ ಸಂಘದ ಮಾಜಿ ಜಿಲ್ಲಾಧ್ಯಕ್ಷ ಎಸ್. ಹಾಲೇಶಪ್ಪ ಒತ್ತಾಯಿಸಿದರು.

ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ನಗರದ 17, 34 ಮತ್ತು 38ನೇ ವಾರ್ಡಿನಲ್ಲಿ ಕರೆದಿದ್ದ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಹಾಲೇಶಪ್ಪ, ಆವರಗೊಳ್ಳದ ಎಂಎಸ್‌ಪಿಸಿ ಮಹಿಳಾ ಸದಸ್ಯರಿಗಾಗಿರುವ ಅನ್ಯಾಯವನ್ನು ವಿವರಿಸಿದರು.


ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ, ಶಿಶು ಅಭಿವೃದ್ದಿ ಯೋಜನೆ ಅಡಿಯಲ್ಲಿ ಬರುವ ಅಂಗನವಾಡಿ ಫಲಾನುಭವಿಗಳಿಗೆ ಬೇಕಾದ ಆಹಾರ ಸಾಮಗ್ರಿಗಳನ್ನು ಪರಿಷ್ಕರಿಸಿ ಪ್ಯಾಕ್ ಮಾಡಿ ಪೂರೈಸುವ ಕೆಲಸವನ್ನು ಇದೇ ಇಲಾಖೆಯಡಿ ಬರುವ ಆವರಗೊಳ್ಳದ ತಾಲ್ಲೂಕು ಮಹಿಳಾ ಪೂರಕ ಪೌಷ್ಠಿಕ ಆಹಾರ ತಯಾರಿಕಾ ಕೇಂದ್ರ ಕಳೆದ 15 ವರ್ಷಗಳಿಂದ ಯಶಸ್ವಿಯಾಗಿ ನಿರ್ವಹಿಸುತ್ತಾ ಬಂದಿದೆ. ಈ ಸಂಸ್ಥೆಯಲ್ಲಿ ಒಟ್ಟು 20 ಮಹಿಳಾ ಸದಸ್ಯರು ಕಾರ್ಯ ನಿರ್ವಹಿಸುತ್ತಿದ್ದಾರೆ.



ಆದರೆ ಕಳೆದ ವಿಧಾನಸಭಾ ಚುನಾವಣೆಯ ನಂತರ ಕೆಲವು ರಾಜಕೀಯ ವ್ಯಕ್ತಿಗಳ ಸ್ವ-ಹಿತಕ್ಕಾಗಿ ಈ ಮಹಿಳಾ ಸದಸ್ಯರ ನಡುವೆ ವೈಮನಸ್ಸು ಮೂಡಿಸಿ ಎರಡು ಗುಂಪುಗಳಾಗಿ ಮಾಡಿ, ಇದನ್ನೇ ನೆಪ ಮಾಡಿಕೊಂಡು ಸಂಘದಲ್ಲಿ ಒಗ್ಗಟ್ಟಿಲ್ಲ ಎಂದು ಈ ಕೇಂದ್ರವನ್ನು ಬೇರೆಡೆ ಶಿಫ್ಟ್ ಮಾಡುವಂತೆ ಅಧಿಕಾರಿಗಳ ಮೇಲೆ ಒತ್ತಡ ತಂದು ದಾವಣಗೆರೆಯಿಂದ ಹರಿಹರಕ್ಕೆ ಸ್ಥಳಾಂತರಿಸುವಲ್ಲಿ ಯಶಸ್ವಿಯಾಗಿರುತ್ತಾರೆ. ಈ ಸಂಬಂಧ ಕಳೆದ 4 ದಿನಗಳ ಹಿಂದೆ ತೋಟಗಾರಿಕಾ ಸಚಿವರನ್ನು ಭೇಟಿಯಾಗಿ ಕೇಂದ್ರವನ್ನು ಆರಂಭಿಸುವಂತೆ ಅಧಿಕಾರಿಗಳಿಗೆ ಆದೇಶಿಸಲು ಕೋರಿದಾಗ, ನನಗೆ ನಿಮ್ಮ ಸಂಸ್ಥೆ ಬಂದ್ ಆಗಿರುವುದೇ ಗೊತ್ತಿಲ್ಲ, ಕೂಡಲೇ ಪ್ರಾರಂಭಿಸಲು ಸೂಚಿಸುವುದಾಗಿ ತಿಳಿಸಿರುತ್ತಾರೆ ಎಂದು ಸಂಘದ ಸದಸ್ಯರು ತಿಳಿಸಿದ್ದಾರೆ ಎಂದರು.

**ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿ.,**
ನಂ.657/1ಎ, ಮಂಡಿಪೇಟೆ, ದಾವಣಗೆರೆ. ದೂರವಾಣಿ : 08192-271537/234330

**ಮಾನ್ಯ ಗ್ರಾಹಕರು ಮತ್ತು ಸದಸ್ಯರ ಗಮನಕ್ಕೆ**



**ಶ್ರೀ ನಾಗರಾಜ್ ಎಸ್.ಬಿ.**
ಬಿನ್ ಹುಲಿಕಟ್ಟಿ ಬೀರಪ್ಪ ಕುರುಬರ ಕೇರಿ, ದಾವಣಗೆರೆ ಇವರು ನಮ್ಮ ಬ್ಯಾಂಕಿನ ಕನಕ ನಿತ್ಯನಿಧಿ ಪಿಗ್ಮಿ ಸಂಗ್ರಹಕರಾಗಿ ಕಾರ್ಯ ನಿರ್ವಹಿಸುತ್ತಾ ಇದ್ದುದು ಸರಿಯಷ್ಟೆ. ಕೆಲ ತಿಂಗಳುಗಳ ಹಿಂದೆ ಇವರು ಈ ಕೆಲಸಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಆದ ಕಾರಣ, ಇವರೊಂದಿಗೆ ಬ್ಯಾಂಕಿನ ವಿಚಾರಕ್ಕೆ ಸಂಬಂಧಪಟ್ಟಂತೆ ಯಾವುದೇ ರೀತಿಯಲ್ಲಿ ವ್ಯವಹರಿಸಬಾರದೆಂದು ಈ ಮೂಲಕ ಸಾರ್ವಜನಿಕರಲ್ಲಿ ವಿನಂತಿಸುತ್ತೇವೆ.

ಅಧ್ಯಕ್ಷರು
ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿ.,

ವ್ಯವಸ್ಥಾಪಕರು
ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿ.,

## ನಗರಕ್ಕೆ ಕುಡಿಯುವ ನೀರು ಒದಗಿಸುವ ಟಿವಿ ಸ್ಟೇಷನ್ ಕೆರೆಗೆ ಜಿಲ್ಲಾಧಿಕಾರಿ ಭೇಟಿ



ದಾವಣಗೆರೆ, ಮಾ.27- ನಗರಕ್ಕೆ ಕುಡಿಯುವ ನೀರು ಒದಗಿಸುವ ಟಿವಿ ಸ್ಟೇಷನ್ ಕೆರೆಗೆ ಜಿಲ್ಲಾಧಿಕಾರಿ ಡಾ.ವೆಂಕಟೇಶ್ ಎಂ.ವಿ. ಅವರು ಇಂದು ಭೇಟಿ ನೀಡಿ ಪರಿಶೀಲಿಸಿದರು.

ಕೆರೆಯಲ್ಲಿ ನೀರಿನ ಪ್ರಮಾಣ ಗಣನೀಯವಾಗಿ ಇಳಿಕೆಯಾಗಿ 4 ಅಡಿಗೆ ಕುಸಿದಿದ್ದು ಮುಂದಿನ 15 ದಿನಗಳಿಗಾಗುವಷ್ಟು ನೀರಿನ ಸಂಗ್ರಹವಿದೆ. ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ನೀರು ಸಂಗ್ರಹ ಮಾಡಿ, ಬೇಸಿಗೆಯಲ್ಲಿ ತೊಂದರೆ ಯಾಗದಂತೆ ಭದ್ರಾ ಕಾಲುವೆ ಮೂಲಕ ನೀರು ತುಂಬಿ ಸಲಾಗುತ್ತಿದೆ. ನೀರಿನ ಪ್ರಮಾಣ ಎಷ್ಟು ಬರುತ್ತಿದೆ, ಮುಂದಿನ ಎಷ್ಟು ದಿನಗಳು ನೀರು ಪೂರೈಕೆ ಮಾಡಬಹುದೆಂದು ಪಾಲಿಕೆ ಅಧಿಕಾರಿಗಳೊಂದಿಗೆ ಪರಿಶೀಲಿಸಿದರು.

ಕೆರೆಯಲ್ಲಿ ನೀರು 9 ಮೀಟರ್ ಇರಬೇಕಾಗಿತ್ತು. ಪ್ರಸ್ತುತ 4 ಅಡಿ ಮಾತ್ರ ಇದೆ. ಕೆರೆಗೆ ಮುಂದಿನ ದಿನಗಳಿಗಾಗುವಷ್ಟು ನೀರು ಸಂಗ್ರಹ ಮಾಡಲು ಸೂಚನೆ ನೀಡಿದ ಅವರು ಜನರು ಸಹ ಬೇಸಿಗೆ ಕಳೆಯುವ ವರೆಗೆ ನೀರಿನ ಮಿತ ಬಳಕೆ ಮಾಡಬೇಕೆಂದು ಮನವಿ ಮಾಡಿದರು.

ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ, ಡಿಯುಡಿಸಿ ಯೋಜನಾ ನಿರ್ದೇಶಕ ಮಹಾಂತೇಶ್ ಉಪಸ್ಥಿತರಿದ್ದರು.

## ರಾಜ್ಯದ 60 ಕಡೆ ಲೋಕಾಯುಕ್ತ ದಾಳಿ

ಬೆಂಗಳೂರು, ಮಾ. 27 - ಆದಾಯಕ್ಕೂ ಮೀರಿ ಅಧಿಕ ಆಸ್ತಿ ಗಳಿಕೆ ಸಂಬಂಧ ಭ್ರಷ್ಟ ಸರ್ಕಾರಿ ಅಧಿಕಾರಿಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಬೆಂಗಳೂರು, ಕೋಲಾರ, ಚಿಕ್ಕಬಳ್ಳಾಪುರ, ಮೈಸೂರು, ಕೊಡಗು, ಧಾರವಾಡ, ಬೆಳಗಾವಿ, ಉಡುಪಿ, ವಿಜಯಪುರ ಸೇರಿದಂತೆ 13 ಜಿಲ್ಲೆಗಳ 60 ಕಡೆ ದಾಳಿ ನಡೆಸಿ ಪರಿಶೀಲನೆ ನಡೆಸಿದ್ದಾರೆ.

## ಗೋವಾ ಎ.ಎ.ಪಿ. ಅಧ್ಯಕ್ಷಗೆ ಸಮನ್ಸ್

ನವದೆಹಲಿ, ಮಾ. 27 – ದೆಹಲಿಯ ಅಬಕಾರಿ ನೀತಿಯ ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಆಮ್ ಆದ್ಮಿ ಪಾರ್ಟಿಯ ಗೋವಾ ಘಟಕದ ಅಧ್ಯಕ್ಷ ಅಮಿತ್ ಪಾಳೇಕರ್ ಅವರಿಗೆ ಜಾರಿ ನಿರ್ದೇಶನಾಲಯ ಸಮನ್ಸ್ ಕಳಿಸಿದೆ ಎಂದು ಮೂಲಗಳು ತಿಳಿಸಿವೆ.

ನಾಳೆ ಗುರುವಾರದಂದು ಜಾರಿ ನಿರ್ದೇಶನಾಲಯದ ಗೋವಾದ ಪಂಜಿಮ್ ಕಚೇರಿ ಎದುರು ಹಾಜರಾಗುವಂತೆ ತಿಳಿಸಲಾಗಿದೆ.

## ಉದ್ಯೋಗ ಮಹಿಳೆಯ ಪ್ರಗತಿಗೆ ಪೂರಕ



### ಎ.ವಿ.ಕೆ. ಕಾಲೇಜಿನ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅನಿತಾ ದೊಡ್ಡಗೌಡರ್

ದಾವಣಗೆರೆ, ಮಾ. 27 - ಉದ್ಯೋಗ ಎಂಬುದು ಕೇವಲ ಅನ್ನಕ್ಕಾಗಿ ಅಲ್ಲ. ಉದ್ಯೋಗ ವ್ಯಕ್ತಿಯನ್ನು ಸಶಕ್ತಗೊಳಿಸುತ್ತದೆ. ಹೀಗಾಗಿ ಪ್ರತಿಯೊಬ್ಬ ಮಹಿಳೆಯೂ ಕಾಯಕದಲ್ಲಿ ತೊಡಗಿ ಜೀವನದಲ್ಲಿ ಸಾರ್ಥಕತೆ ಕಂಡುಕೊಳ್ಳಬೇಕು ಎಂದು ಸರ್ವಮಂಗಳಮ್ಮ ಮಾಗನೂರು ಬಸಪ್ಪ ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕಿ ಅನಿತಾ ಹೆಚ್. ದೊಡ್ಡಗೌಡರ್ ಕರೆ ನೀಡಿದರು.

ನಗರದ ಎ.ವಿ.ಕೆ. ಕಾಲೇಜಿನಲ್ಲಿ ಪ್ರತಿಮಾ ಸಭಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಆಯೋ ಜಿಸಲಾಗಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ನಾಟಕ ಪ್ರದರ್ಶನ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿ ಅವರು ಮಾತನಾಡಿದರು.

ಮಹಿಳೆಯರಿಗೆ ಉದ್ಯೋಗ ಅನ್ನ ಹಾಗೂ ಸಮಾನತೆ ನೀಡುತ್ತದೆ. ಇದರ ಜೊತೆಗೆ, ಪ್ರತಿನಿತ್ಯ ಕಾಯಕದಲ್ಲಿ ಮನಸ್ಸು ಲೀನ ಗೊಳಿಸಿದಾಗ ಇತರೆ ವ್ಯಸನಗಳು ಕಾಡುವು ದಿಲ್ಲ. ಸಮಯ ಪೋಲು ಮಾಡುವುದು ತಪ್ಪುತ್ತದೆ. ಹೀಗಾಗಿ ಉದ್ಯೋಗಂ ಸರ್ವ ಲಕ್ಷಣಂ ಎಂಬ ಮಾತು ಸೂಕ್ತವಾಗಿದೆ ಎಂದು ದೊಡ್ಡಗೌಡರ್ ತಿಳಿಸಿದರು.

ಮಹಿಳೆಯಿಂದ ಕುಟುಂಬ ಪ್ರಗತಿಯಾಗು ತ್ತದೆ. ಕುಟುಂಬಗಳು ಚೆನ್ನಾಗಿದ್ದರೆ ಸಮಾಜ ಹಾಗೂ ದೇಶದ ಪ್ರಗತಿಯಾಗುತ್ತದೆ. ಹೀಗಾಗಿ ಮಹಿಳೆಯೇ ಸಮಾಜದ ಕೇಂದ್ರ ಬಿಂದು ಎಂದವರು ವಿಶ್ಲೇಷಿಸಿದರು.

ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಬಾಪೂಜಿ ಶಿಕ್ಷಣ ಸಂಸ್ಥೆ ಶೈಕ್ಷಣಿಕ ನಿರ್ದೇಶಕ ಡಾ. ಎಂ.ಜಿ. ಈಶ್ವರಪ್ಪ, ಕಲೆಯಿಂದ ಬದುಕಿಗೆ ಸಾಮರಸ್ಯ, ಸುಖ - ಶಾಂತಿ ಹಾಗೂ ನೆಮ್ಮದಿ ಸಿಗುತ್ತದೆ. ಕಲೆ - ಸಾಹಿತ್ಯದಲ್ಲಿ ಆಸಕ್ತಿ ಇದ್ದವರು ಸುಸಂಸ್ಕೃತರಾಗುತ್ತಾರೆ ಎಂದರು.

ಕಲೆಗಳಲ್ಲೇ ಅತ್ಯಂತ ಆನಂದ ನೀಡು ವುದು ನಾಟಕ. ಹೀಗಾಗಿಯೇ 'ಕಾವ್ಯೇಶು ರಮ್ಯಂ ನಾಟಕಂ' ಎಂಬ ಮಾತಿದೆ. ನಾಟಕಗ ಳನ್ನು ಆಸ್ವಾದಿಸುವ ಗುಣವನ್ನು ಬೆಳೆಸಿಕೊಳ್ಳ ಬೇಕು ಎಂದವರು ಕಿವಿಮಾತು ಹೇಳಿದರು.

ವೇದಿಕೆಯ ಮೇಲೆ ರಂಗ ನಿರ್ದೇಶಕರಾದ ಬಿ.ಎನ್. ಶಶಿಕಲಾ ಉಪಸ್ಥಿತರಿದ್ದರು. ಎ.ವಿ.ಕೆ. ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಕಮಲಾ ಸೊಪ್ಪಿನ್ ಅಧ್ಯಕ್ಷತೆ ವಹಿಸಿದ್ದರು.

ಎಸ್.ಜಿ. ಪಲ್ಲವಿ ಪ್ರಾರ್ಥಿಸಿದರೆ, ಎ.ವಿ.ಕೆ. ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ. ರಣಧೀರ ಸ್ವಾಗತಿಸಿದರು. ಎಸ್.ಕೆ. ಸಹನಾ ನಿರೂಪಿಸಿದರೆ, ಸಹಾಯಕ ಪ್ರಾಧ್ಯಾಪಕಿ ಆರ್.ಜಿ. ಕವಿತ ವಂದಿಸಿದರು.

## ಅತಿ ಹೆಚ್ಚು ಮತಗಳಿಂದ ಗಾಯತ್ರಿ ಸಿದ್ದೇಶ್ವರ ಗೆಲ್ಲಿಸೋಣ



### ಕಾರ್ಯಕರ್ತರಿಗೆ ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಕರೆ

ದಾವಣಗೆರೆ, ಮಾ. 27 - ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರನ್ನು ಅತಿ ಹೆಚ್ಚು ಮತಗಳಿಂದ ಗೆಲ್ಲಿಸೋಣ ಎಂದು ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಹೇಳಿದ್ದಾರೆ.

ಭಾರತೀಯ ಜನತಾ ಪಕ್ಷದ ವತಿಯಿಂದ ಬುಧವಾರ ಸಂಜೆ ಜಿಲ್ಲಾ ಕಾರ್ಯಾಲಯದಲ್ಲಿ ಚುನಾವಣಾ ನಿರ್ವಹಣಾ ಸಮಿತಿ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮೂರನೇ ಬಾರಿ ನರೇಂದ್ರ ಮೋದಿ ರವರನ್ನು ಗೆಲ್ಲಿಸಬೇಕಿದೆ. 28 ಲೋಕಸಭಾ ಕ್ಷೇತ್ರಗಳಲ್ಲಿ ದಾವಣಗೆರೆ ಜಿಲ್ಲೆಯನ್ನು ಮೊದಲ ಸ್ಥಾನದಲ್ಲಿ ತರುವುದಕ್ಕೆ ನಾವೆಲ್ಲರೂ ಹಗಲು-ರಾತ್ರಿ ಪಕ್ಷಕ್ಕೆ ಶ್ರಮಿಸೋಣ ಎಂದು ಕರೆ ನೀಡಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಎನ್. ರಾಜಶೇಖರ್ ನಾಗಪ್ಪ ಅಧ್ಯಕ್ಷತೆ ವಹಿಸಿದ್ದರು. ನಿಕಟಪೂರ್ವ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ಸಂಸದ ಜಿ.ಎಂ. ಸಿದ್ದೇಶ್ವರ್, ಹರಿಹರ ಶಾಸಕ ಬಿ.ಪಿ ಹರೀಶ್, ಜಗಳೂರು ಮಾಜಿ ಶಾಸಕ ಎಸ್. ವಿ. ರಾಮಚಂದ್ರ, ಮಾಯಕೊಂಡ ಮಾಜಿ ಶಾಸಕರುಗಳಾದ ಪ್ರೊ. ಲಿಂಗಣ್ಣ, ಎಂ.ಬಸವರಾಜ ನಾಯ್ಕ, ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ. ಎಚ್. ಶಿವಯೋಗಿ ಸ್ವಾಮಿ, ದಕ್ಷಿಣ ವಿಧಾನಸಭಾ ಮುಖಂಡರಾದ ಬಿ.ಜೆ . ಅಜಯ್ ಕುಮಾರ್, ಚನ್ನಗಿರಿ ವಿಧಾನಸಭಾ ಕ್ಷೇತ್ರದ ಮುಖಂಡ ಮಾಡಾಳ ಮಲ್ಲಿಕಾರ್ಜುನ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಧನಂಜಯ ಕಡ್ಲೇಬಾಳ್, ಅನಿಲ್ ಕುಮಾರ್ ನಾಯಕ್, ಐರಾಣಿ ಅಣ್ಣೇಶ್ ಹಾಗೂ ಲೋಕಸಭಾ ಚುನಾವಣೆಯ ಜಿಲ್ಲಾ ನಿರ್ವಹಣಾ ಸಮಿತಿ ಸದಸ್ಯರುಗಳು ಉಪಸ್ಥಿತರಿದ್ದರು.

## ಕೇಂದ್ರ ಸರ್ಕಾರ ಏಪ್ರಿಲ್- ಸೆಪ್ಟೆಂಬರ್‌ನಲ್ಲಿ 7.5 ಲಕ್ಷ ಕೋಟಿ ಸಾಲಕ್ಕೆ ಯೋಜನೆ

ನವದೆಹಲಿ, ಮಾ. 27 – ಕೇಂದ್ರ ಸರ್ಕಾರ ಬರುವ ಏಪ್ರಿಲ್ - ಸೆಪ್ಟೆಂಬರ್ ಅವಧಿಯಲ್ಲಿ 7.5 ಲಕ್ಷ ಕೋಟಿ ರೂ.ಗಳನ್ನು ಮಾರುಕಟ್ಟೆಯಿಂದ ಸಾಲವಾಗಿ ಪಡೆಯಲು ಯೋಜಿಸಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

2024-25ರ ಸಾಲಿನಲ್ಲಿ 14.13 ಲಕ್ಷ ಕೋಟಿ ರೂ.ಗಳ ಸಾಲ ಪಡೆಯುವ ಅಂದಾಜಿದೆ. ಮೊದಲ ಅವಧಿಯಲ್ಲಿ 7.5 ಲಕ್ಷ ಕೋಟಿ ರೂ. ಸಾಲ ಪಡೆಯಲಾಗುವುದು. ಕಳೆದ ವರ್ಷ ಒಟ್ಟಾರೆ 15.43 ಲಕ್ಷ ಕೋಟಿ ರೂ.ಗಳ ಸಾಲ ಪಡೆಯಲಾಗಿತ್ತು. ಇದು ಅತಿ ಹೆಚ್ಚಿನ ಮಟ್ಟದ ಸಾಲವಾಗಿತ್ತು.

## ತರಳಬಾಳು ಜಗದ್ಗುರುಗಳ ಆಶೀರ್ವಾದ ಪಡೆದ ಡಾ. ಪ್ರಭಾ ಮಲ್ಲಿಕಾರ್ಜುನ್



ದಾವಣಗೆರೆ, ಮಾ. 27 - ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ ಅವರು ಸಿರಿಗೆರೆಯ ತರಳಬಾಳು ಜಗದ್ಗುರು ಬೃಹನ್ಮಠದ ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರನ್ನು ಭೇಟಿಯಾಗಿ ಆಶೀರ್ವಾದ ಪಡೆದರು.

ಈ ಸಂದರ್ಭದಲ್ಲಿ ಪುತ್ರ ಸಮರ್ಥ ಶಾಮನೂರು, ಪುತ್ರಿ ಶ್ರೇಷ್ಠ ಶಾಮನೂರು, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಕೆ.ಜಿ. ಬಸವನ ಗೌಡ್ರು, ಎಸ್.ಎಸ್. ಹೈಟೆಕ್ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಬಿ.ಎಸ್ ಪ್ರಸಾದ್, ವೈದ್ಯಕೀಯ ನಿರ್ದೇಶಕ ಡಾ. ಅರುಣ್ ಅಜ್ಜಪ್ಪ, ಬಾಪೂಜಿ ಮಕ್ಕಳ ಆಸ್ಪತ್ರೆಯ ಡಾ. ಮೂಗನಗೌಡ ಪಾಟೀಲ್ ಸೇರಿದಂತೆ ಕುಟುಂಬಸ್ಥರು ಉಪಸ್ಥಿತರಿದ್ದರು.

## ಸಾಣೇಹಳ್ಳಿ ಶ್ರೀಗಳ ಆಶೀರ್ವಾದ ಪಡೆದ ಡಾ. ಪ್ರಭಾ ಮಲ್ಲಿಕಾರ್ಜುನ್



ದಾವಣಗೆರೆ, ಮಾ. 27 - ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ ರವರು ಸಾಣೇಹಳ್ಳಿ ಮಠದ ಶ್ರೀ ಪಂಡಿತರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರನ್ನು ಭೇಟಿಯಾಗಿ ಆಶೀರ್ವಾದ ಪಡೆದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಕೆ.ಜಿ. ಬಸವನ ಗೌಡ್ರು ಸೇರಿದಂತೆ ಕುಟುಂಬಸ್ಥರು ಉಪಸ್ಥಿತರಿದ್ದರು.

## ಜಾತ್ರೆ : ಇಂದು ಸಾಂಸ್ಕೃತಿಕ ಕಾರ್ಯಕ್ರಮ

ಶ್ರೀ ದುಗ್ಗಮ್ಮ ಜಾತ್ರೆ ಪ್ರಯುಕ್ತ ದೇವಸ್ಥಾನದ ಮುಂಭಾಗದಲ್ಲಿ ಇಂದು ರಾತ್ರಿ 8 ಗಂಟೆಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.









ವಿ.ಸೂ. ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ತಪ್ಪದೇ ಆಗಮಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas